ಗುರುವಾರ, ಮೇ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 131 | ಪುಟ 14

● www.prajavani.net


/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆಯಲು ಪ್ರಬಂಧ ಪತ್ರಿಕೆಯ ಅಂಕಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಹಾಗಾದರೆ ಪ್ರಬಂಧ ರಚನೆ ಹೇಗಿರಬೇಕು? ಇಲ್ಲಿದೆ ಮಾಹಿತಿ



ಸಂಖ್ಯೆ-ಸುದ್ದಿ

₹ 3.76 ಲಕ್ಷ ಕೋಟಿ ಹೂಡಿಕೆ ಹಿಂತೆಗೆತ

ಸೆನ್ಸೆಕ್ಸ್ ಮತ್ತೆ ಇಳಿಕೆ 11

16ರಿಂದ ಬೆಂಗಳೂರಿನಲ್ಲಿ ಮಿನಿ ಒಲಿಂಪಿಕ್ಸ್ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,088 ▼	16,167 ▼	₹52,600 (ಬೆಂಗಳೂರು) ▼	₹62,600 (ಬೆಂಗಳೂರು) ▼	77.25 ▲

ಎಫ್‌ಐಆರ್ ದಾಖಲು, ತನಿಖೆ, ವಿಚಾರಣೆ ಇಲ್ಲ: ಸುಪ್ರೀಂ ಕೋರ್ಟ್ ಮಹತ್ವದ ಆದೇಶ

ದೇಶದ್ರೋಹ ಕಾನೂನಿಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಭಾರತೀಯ ದಂಡ ಸಂಹಿತೆಯ, ದೇಶದ್ರೋಹಕ್ಕೆ ಸಂಬಂಧಿಸಿದ ಸೆಕ್ಷನ್ 124ಎಗೆ ಸುಪ್ರೀಂ ಕೋರ್ಟ್ ಬುಧವಾರ ತಡೆ ನೀಡಿದೆ. ತಡೆ ನೀಡಲು ಸಾಧ್ಯವಿಲ್ಲ ಎಂಬ ಕೇಂದ್ರ ಸರ್ಕಾರದ ನಿಲುವನ್ನು ತಳ್ಳಿ ಹಾಕಿದೆ.

ಬ್ರಿಟಿಷರ ಕಾಲದ ಈ ಸೆಕ್ಷನ್ ಕುರಿತು ಸರ್ಕಾರವು 'ಅರ್ಹ ವೇದಿಕೆ'ಯ ಮೂಲಕ ಮರುಪರಿಶೀಲನೆ ನಡೆಸುವ ವರೆಗೆ, ಈ ಸೆಕ್ಷನ್ ಅಡಿಯಲ್ಲಿ ಎಫ್‌ಐಆರ್ ದಾಖಲು, ಈಗಾಗಲೇ ದಾಖಲಾಗಿರುವ ಪ್ರಕರಣಗಳ ತನಿಖೆ, ಬಲವಂತದ ಕ್ರಮಗಳನ್ನು ಕೈಗೊಳ್ಳ ಬಾರದು ಎಂದು ಕೋರ್ಟ್ ಹೇಳಿದೆ.

ಸಾರ್ವಜನಿಕ ವಲಯದಲ್ಲಿ ಗಂಭೀರ ಚರ್ಚೆಗೆ ಒಳಗಾಗಿರುವ ಸೆಕ್ಷನ್ ಬಗ್ಗೆ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಮಹತ್ವದ ಆದೇಶ ನೀಡಿದೆ. ನಾಗರಿಕ ಸ್ವಾತಂತ್ರ್ಯ, ಪೌರರ ಹಿತಾಸಕ್ತಿ ಮತ್ತು ಸರ್ಕಾರದ ಹಿತಾಸಕ್ತಿಯ ನಡುವೆ ಸಮತೋಲನ ಕಾಯ್ದುಕೊಳ್ಳುವ ಅಗತ್ಯ ಇದೆ. 124ಎಯಂತಹ ಕಠಿಣ ವಾದ ಸೆಕ್ಷನ್ ಈಗಿನ ಸಾಮಾಜಿಕ ಪರಿಸರಕ್ಕೆ ಹೊಂದಿಕೆ ಆಗುವುದಿಲ್ಲ ಎಂದೂ ನ್ಯಾಯಪೀಠವು ಹೇಳಿದೆ.

10ನೇ ಪುಟ ನೋಡಿ

ಈ ಕಾನೂನಿನಲ್ಲಿ ಇರುವ ಅವಕಾಶಗಳು ಸಂವಿಧಾನಕ್ಕೂ ಹಿಂದಿನದಾಗಿವೆ. ದುರ್ಬಳಕೆಯೂ ಆಗುತ್ತಿದೆ ಎಂಬುದು ಅರ್ಜಿದಾರರ ವಾದವಾಗಿದೆ
ಸುಪ್ರೀಂ ಕೋರ್ಟ್


ಕಾರ್ಯಾಂಗ ಮತ್ತು ನ್ಯಾಯಾಂಗ ಸೇರಿದಂತೆ ಎಲ್ಲ ಸಂಸ್ಥೆಗಳಿಗೆ ಅವುಗಳದ್ದೇ ಆದ ಲಕ್ಷ್ಮಣ ರೇಖೆಗಳಿವೆ. ಯಾರೂ ಈ ಗಡಿಗಳನ್ನು ದಾಟಬಾರದು
ಕಿರಣ್ ರಿಜಿಜು, ಕೇಂದ್ರ ಕಾನೂನು ಸಚಿವ

ಸತ್ಯ ಹೇಳುವುದು ದೇಶ ದ್ರೋಹವಲ್ಲ ದೇಶಪ್ರೇಮ. ಸತ್ಯ ಹೇಳಿದರೆ ದೇಶವನ್ನು ಪ್ರೀತಿಸಿದಂತೆ. ಸತ್ಯವನ್ನು ಆಲಿಸುವುದು ರಾಜಧರ್ಮ, ದಮನಿಸುವುದು ದುರಹಂಕಾರ
ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ

ಬಿಜೆಪಿ ಸರ್ಕಾರದ ವಿರುದ್ಧ ಯಾರೇ ಧ್ವನಿ ಎತ್ತಿದರೂ ಅಂತಹ ವ್ಯಕ್ತಿಗಳನ್ನು ದಮನ ಮಾಡಲು ಹುಸಿ ಪ್ರಕರಣಗಳನ್ನು ಬಿಜೆಪಿ ದಾಖಲಿಸುತ್ತದೆ
ಸಂಜಯ ಸಿಂಗ್, ಎಎಪಿ ಸಂಸದ

ಕೇಂದ್ರ ಸರ್ಕಾರದ ನಿಲುವು ಏನು?

ಈ ಸೆಕ್ಷನ್ ಅನ್ನು ಅಮಾನತಿನಲ್ಲಿ ಇರಿಸಲು ಸಾಧ್ಯವೇ ಎಂಬ ಬಗ್ಗೆ 24 ತಾಸುಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕೋರ್ಟ್ ಮಂಗಳವಾರ ಸೂಚಿಸಿತ್ತು. ಅದಕ್ಕೆ ಪ್ರತಿಕ್ರಿಯೆ ನೀಡಿದ ಕೇಂದ್ರ, ಎಸ್‌ಪಿ ದರ್ಜೆಯ ಅಧಿಕಾರಿಯು ಈ ಸೆಕ್ಷನ್ ಅಡಿಯಲ್ಲಿನ ಎಫ್‌ಐಆರ್‌ಗಳ ಮೇಲೆ ನಿಗಾ ಇರಿಸಬೇಕು, ವಿಚಾರಣಾರ್ಹ ಅಪರಾಧಗಳ ತನಿಖೆಗೆ ಈ ಸೆಕ್ಷನ್ ಅಗತ್ಯವಾದ ಕಾರಣ ಎಫ್‌ಐಆರ್ ದಾಖಲೆಗೆ ತಡೆ ಸಾಧ್ಯವಿಲ್ಲ. ಜತೆಗೆ, ಸಂವಿಧಾನ ಪೀಠವು 1962ರಲ್ಲಿ ಈ ಕಾನೂನನ್ನು ಎತ್ತಿ ಹಿಡಿದಿದೆ ಎಂದು ಹೇಳಿದೆ. ಆದರೆ, ಸರ್ಕಾರದ ಈ ನಿಲುವನ್ನು ಕೋರ್ಟ್ ಒಪ್ಪಿಲ್ಲ.



ಕಾಯ್ದೆಗೆ ತಡೆ ನೀಡುವುದನ್ನು ವಿರೋಧಿಸುವುದಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪೀಠಕ್ಕೆ ತಿಳಿಸಿದರು. ಎಲ್ಲ ಪ್ರಕರಣಗಳಲ್ಲಿ ಅಪರಾಧದ ತೀವ್ರತೆ ಯಾವ ಪ್ರಮಾಣದಲ್ಲಿದೆ ಎಂಬುದು ಸರ್ಕಾರಕ್ಕೆ ತಿಳಿದಿಲ್ಲ. ಭಯೋತ್ಪಾದನೆ ಅಥವಾ ಹಣ ಅಕ್ರಮ ವರ್ಗಾವಣೆಯ ಆಯಾಮಗಳೂ ಕೆಲವು ಪ್ರಕರಣಗಳಲ್ಲಿ ಇರಬಹುದು. ಹಾಗಾಗಿ, ಜಾಮೀನು ಅರ್ಜಿಗಳ ವಿಚಾರಣೆಯನ್ನು ತ್ವರಿತಗೊಳಿಸಬಹುದು ಎಂದು ಅವರು ವಿವರಿಸಿದರು.

ಕೇಂದ್ರವು ತನ್ನ ನಿಲುವನ್ನು ತಿಳಿಸಿದ ಬಳಿಕ, ಪೀಠದಲ್ಲಿದ್ದ ನ್ಯಾಯಮೂರ್ತಿಗಳು ಕೊಠಡಿಗೆ ತೆರಳಿ ಸ್ವಲ್ಪ ಹೊತ್ತು ಚರ್ಚಿಸಿದರು. ಬಳಿಕ ಬಂದು, ಈ ವಿಚಾರದ ಬಗ್ಗೆ ವಿಸ್ತೃತವಾದ ಚರ್ಚೆ ನಡೆಸಲಾಗಿದೆ ಎಂದು ಹೇಳಿ, ನಿರ್ದೇಶನಗಳನ್ನು ಪ್ರಕಟಿಸಿದರು. ಅರ್ಹ ವೇದಿಕೆಯಿಂದ ಮರುಪರಿಶೀಲನೆ ನಡೆಸಬೇಕು ಎಂಬ ನಿಲುವಿನ ಮೂಲಕ, ಸೆಕ್ಷನ್ ಅನ್ನು ಮರು ಪರಿಶೀಲಿಸಬೇಕಾಗಿದೆ ಎಂಬ ನಿಲುವನ್ನು ಕೇಂದ್ರವೂ ಹೊಂದಿದೆ ಎಂದು ಪೀಠವು ಹೇಳಿತು.

ಆರೋಪಿಗಳು ನಿರಾಳ

ಸೆಕ್ಷನ್ 124ಎ ಅಡಿಯಲ್ಲಿ ಆರೋಪಿಗಳಾಗಿರುವವರಿಗೆ ಸುಪ್ರೀಂಕೋರ್ಟ್‌ನ ಈ ಮಧ್ಯಂತರ ಆದೇಶವು ನಿರಾಳ ತಂದಿದೆ.

ಈ ಸೆಕ್ಷನ್ ಅಡಿಯಲ್ಲಿರುವ ಎಲ್ಲ ಪ್ರಕರಣಗಳು, ಮೇಲ್ಮನವಿಗಳು ಮತ್ತು ವಿಚಾರಣಾ ಪ್ರಕ್ರಿಯೆಯನ್ನು ಅಮಾನತಿನಲ್ಲಿ ಇರಿಸಬೇಕು. ಈ ವ್ಯಕ್ತಿಗಳ ಮೇಲೆ ಬೇರೆ ಸೆಕ್ಷನ್ ಅಡಿಯಲ್ಲಿ ದೂರುಗಳಿದ್ದರೆ ಅವುಗಳ ವಿಚಾರಣೆ ನಡೆಸಬಹುದು ಎಂದು ಕೋರ್ಟ್ ಹೇಳಿದೆ.

ಸೆಕ್ಷನ್ ಅಡಿಯಲ್ಲಿರುವ ಅವಕಾಶಗಳ ದುರ್ಬಳಕೆ ತಡೆಗಾಗಿ ರಾಜ್ಯಗಳಿಗೆ ನಿರ್ದೇಶನಗಳನ್ನು ನೀಡುವುದಕ್ಕೆ ಕೇಂದ್ರಕ್ಕೆ ಸುಪ್ರೀಂಕೋರ್ಟ್ ಅನುಮತಿ ಕೊಟ್ಟಿದೆ.

ಅರ್ಜಿದಾರರು ಯಾರು?: ಸಂಪಾದಕರ ಕೂಟ, ಮೇ. ಜ. (ನಿವೃತ್ತ) ಎಸ್.ಜಿ. ಒಂಬತ್ಕೆರೆ, ಕೇಂದ್ರದ ಮಾಜಿ ಸಚಿವ ಅರುಣ್ ಶೌರಿ ಮತ್ತು ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್

ಮತಾಂತರ ನಿಷೇಧಕ್ಕೆ ಸುಗ್ರೀವಾಜ್ಞೆ

ಗೃಹ ಇಲಾಖೆಯಿಂದ ಇಂದು ಸಚಿವ ಸಂಪುಟ ಸಭೆಗೆ ಪ್ರಸ್ತಾವನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ವಿವಾದ, ಜಾತ್ರೆ, ಉತ್ಸವಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ, ಆಜಾನ್-ಭಜನೆ ಸಂಘರ್ಷದ ಬೆನ್ನಲ್ಲೇ, 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆ'ಯನ್ನು ಸುಗ್ರೀವಾಜ್ಞೆ ಮೂಲಕ ಕಾಯ್ದೆಯಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

'ಸುಗ್ರೀವಾಜ್ಞೆ ಹೊರಡಿಸಲು ಯಾವುದೇ ಕಾನೂನು ತೊಡಕು ಇಲ್ಲ' ಎಂದು ಕಾನೂನು ಮತ್ತು ಸಂಸದೀಯ ಇಲಾಖೆ ಅಭಿಪ್ರಾಯ ನೀಡಿದೆ. ಹೀಗಾಗಿ, ಗುರುವಾರ (ಮೇ 12) ನಡೆಯಲಿರುವ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಮಂಡಿಸಲು ಗೃಹ ಇಲಾಖೆ ಟಿಪ್ಪಣಿ ಸಿದ್ಧಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಬೆಳಗಾವಿಯಲ್ಲಿ ಕಳೆದ ಡಿಸೆಂಬರ್‌ನಲ್ಲಿ ನಡೆದ ವಿಧಾನಮಂಡಲ ಅಧಿವೇಶನದ ವೇಳೆ ವಿಧಾನಸಭೆಯಲ್ಲಿ (2021ರ ಡಿಸೆಂಬರ್ 23) ಮತಾಂತರ ನಿಷೇಧ ಮಸೂದೆಯನ್ನು ಮಂಡಿಸಿ ಸರ್ಕಾರ ಅಂಗೀಕಾರ ಪಡೆದಿತ್ತು. ಆದರೆ, ಕಾಂಗ್ರೆಸ್, ಜೆಡಿಎಸ್ ಸದಸ್ಯರ ತೀವ್ರ ವಿರೋಧ ಮತ್ತು ಅಗತ್ಯ ಬಲ ಇಲ್ಲದೇ ಇದ್ದ ಕಾರಣ ವಿಧಾನ ಪರಿಷತ್‌ನಲ್ಲಿ ಮಸೂದೆ ಮಂಡಿಸಿರಲಿಲ್ಲ. ಇದೀಗ, ವಿಧಾನಸಭೆಯಲ್ಲಿ ಮಂಡಿಸಿದ್ದ ಮಸೂದೆಯನ್ನೇ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

'ಕಾಯ್ದೆ ಜಾರಿ ವಿಳಂಬವಾಗಬಾರದು ಎನ್ನುವ ಕಾರಣಕ್ಕೆ ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರ ನಿರ್ಧರಿಸಿದೆ. ಸಚಿವ ಸಂಪುಟದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಂಡು ಅನುಮೋದನೆಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗುವುದು.

4B ಪುಟ ನೋಡಿ

'ಸಚಿವ ಸಂಪುಟ ವಿಸ್ತರಣೆ ಸದ್ಯಕ್ಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಆಗುವ ಸಾಧ್ಯತೆ ಇನ್ನಷ್ಟು ದೂರವಾಗಿದೆ. ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳೂ ಸೇರಿ ಎಲ್ಲ ರೀತಿಯ ಚುನಾವಣೆಗಳಿಗೂ ಸಿದ್ಧತೆ ಮಾಡಿಕೊಳ್ಳಲು ಗಮನಹರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಿಜೆಪಿ ವರಿಷ್ಠರು ಸೂಚನೆ ನೀಡಿದ್ದಾರೆ.

ಬೊಮ್ಮಾಯಿ ನವದೆಹಲಿಯಲ್ಲಿ ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿ ಸಚಿವ ಸಂಪುಟ ವಿಸ್ತರಣೆಯ ವಿಷಯವನ್ನು ಪ್ರಸ್ತಾಪಿಸಿದರು. ಆದರೆ ಅವರು ಈ ವಿಷಯಕ್ಕೆ



ಬಸವರಾಜ ಬೊಮ್ಮಾಯಿ

ಹೆಚ್ಚು ಗಮನ ನೀಡಲಿಲ್ಲ ಎಂದು ಮೂಲಗಳು ಹೇಳಿವೆ.

ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಸದ್ಯವೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕಾಗಿರುವುದರಿಂದ ಆ ಬಗ್ಗೆ ಗಮನ ಹರಿಸುವಂತೆ ಅಮಿತ್ ಶಾ ಅವರು ಸೂಚಿಸಿದ್ದು, 'ಸಚಿವ ಸಂಪುಟದ ವಿಸ್ತರಣೆಯ ಬಗ್ಗೆ ಚಿಂತೆ ಬಿಡಿ' ಎಂದು ಬೊಮ್ಮಾಯಿ ಅವರಿಗೆ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

4B ಪುಟ ನೋಡಿ

ಪರಿಶಿಷ್ಟ ಮಹಿಳೆ ವಿವಸ್ತ್ರಗೊಳಿಸಿ ಅತ್ಯಾಚಾರಕ್ಕೆ ಯತ್ನ

ತೀರ್ಥಹಳ್ಳಿ: ಪತಿಗೆ ಹೊಡೆದು ಅವರ ಕಣ್ಣೆದುರೇ ಪತ್ನಿಯನ್ನು ಎಳೆದೊಯ್ದು, ವಿವಸ್ತ್ರಗೊಳಿಸಿ ಅತ್ಯಾಚಾರಕ್ಕೆ ಯತ್ನಿಸಿರುವುದು ಆರಗ ಸಮೀಪದ ಗ್ರಾಮದಲ್ಲಿ ಸೋಮವಾರ ರಾತ್ರಿ 10.30ಕ್ಕೆ ನಡೆದಿದೆ.

ಪ್ರಕರಣದ ಸಂತ್ರಸ್ತರು ಪರಿಶಿಷ್ಟ ಜಾತಿಯವರು. ಇವರು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತೀರ್ಥಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆರೋಗ್ಯ ಸರಿ ಇಲ್ಲದ ಕಾರಣ ದಂಪತಿ ಸೋಮವಾರ ಪಟ್ಟಣದ ವೈದ್ಯರಿಂದ ಚಿಕಿತ್ಸೆ ಪಡೆದು ಮನೆಗೆ ಮರಳುತ್ತಿದ್ದಾಗ ಸಂಪತ್, ಆದರ್ಶ್ ಹಾಗೂ ಇನ್ನಿಬ್ಬರು ಯುವಕರು ಎರಡು ಬೈಕ್‌ಗಳಲ್ಲಿ ಬಂದು ಅಡ್ಡಗಟ್ಟಿ ಹಲ್ಲೆ ನಡೆಸಿದ್ದಾರೆ ಎಂದು ದೂರಲಾಗಿದೆ.

'ಯುವಕರು ಪತಿಗೆ ಹೊಡೆದು ನನ್ನನ್ನು ಕಾಡಿಗೆ ಎಳೆದೊಯ್ದು ವಿವಸ್ತ್ರಗೊಳಿಸಿ ಅತ್ಯಾಚಾರಕ್ಕೆ ಯತ್ನಿಸಿದರು. ಪ್ರಜ್ಞೆ ತಪ್ಪಿ ಬಿದ್ದಿದ್ದ ಪತಿ ಎಚ್ಚರಗೊಂಡು ಜೋರಾಗಿ ಕೂಗಿದರು. ನಾನೂ ಕೂಗಿಕೊಳ್ಳುತ್ತಿದ್ದುದನ್ನು ಕೇಳಿಸಿಕೊಂಡ ಸ್ಥಳೀಯರು ಸ್ಥಳಕ್ಕೆ ಬಂದಾಗ ಯುವಕರು ಪರಾರಿಯಾದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ದಂಪತಿಯಿಂದ ಹೇಳಿಕೆ ಪಡೆದಿದ್ದ ಪೊಲೀಸರು ಎರಡು ದಿನಗಳಾದರೂ ಮೊಕದ್ದಮೆ ದಾಖಲಿಸಿರಲಿಲ್ಲ. ಆಸ್ಪತ್ರೆಗೆ ಭೇಟಿ ನೀಡಿ, ಮಾಹಿತಿ ಪಡೆದು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದರೂ ಪ್ರಕರಣ ದಾಖಲಾಗಿರಲಿಲ್ಲ. ಪ್ರಕರಣ ಮುಚ್ಚಿಹಾಕಲು ಯತ್ನಿಸಿದ್ದರು. ತಪ್ಪಿತಸ್ಥ ಪೊಲೀಸರ ಮೇಲೆ ಕ್ರಮ ಜರುಗಿಸಬೇಕು' ಎಂದು ದಲಿತ ಸಂಘರ್ಷ ಸಮಿತಿ ಮುಖಂಡರು ಆಗ್ರಹಿಸಿದ್ದಾರೆ.

8 ವರ್ಷಗಳ ಸಂಭ್ರಮ ಬಿಜೆಪಿ ಅಭಿಯಾನ

ನವದೆಹಲಿ: ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎಂಟು ವರ್ಷಗಳಾಗುತ್ತಿದ್ದು, ಈ ಸಂಭ್ರಮವನ್ನು 15 ದಿನಗಳ ಅಭಿಯಾನದ ರೂಪದಲ್ಲಿ ಆಚರಿಸಲು ಬಿಜೆಪಿ ಸಿದ್ಧತೆ ನಡೆಸುತ್ತಿದೆ.

ಮೇ 30ರಿಂದ ಸಂಭ್ರಮಾಚರಣೆ ಆರಂಭವಾಗಲಿದೆ. 10

ಪರೀಕ್ಷೆಗೂ ಮುನ್ನ ವಾಟ್ಸ್‌ಆ್ಯಪ್ ಕರೆ!

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಂಧಿತರಾಗಿರುವ ಆರೋಪಿಗಳು, ಪರೀಕ್ಷೆಯ ಆರಂಭಕ್ಕೆ ಕೆಲ ಗಂಟೆಗಳ ಮುಂಚಿತವಾಗಿ ಅಕ್ರಮದಲ್ಲಿ ಭಾಗಿಯಾಗುವ ಅಭ್ಯರ್ಥಿಗಳಿಗೆ ವಾಟ್ಸ್‌ಆ್ಯಪ್ ಕರೆ ಮಾಡಿ ಕೆಲವು ಸೂಚನೆಗಳನ್ನು ನೀಡುತ್ತಿದ್ದರು ಎಂದು ಸಿಐಡಿ ತನಿಖೆಯಿಂದ ಗೊತ್ತಾಗಿದೆ. 4A

'ಲಂಕಾ: ವಾರದಲ್ಲಿ ಹೊಸ ಪ್ರಧಾನಿ'

ಕೊಲಂಬೊ(ಎಎಫ್‌ಪಿ): 'ಇದೇ ವಾರದೊಳಗೆ ದೇಶಕ್ಕೆ ಹೊಸ ಪ್ರಧಾನಿ ನೇಮಿಸಿ, ಸಚಿವ ಸಂಪುಟ ರಚಿಸಲಾಗುವುದು' ಎಂದು ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಷ ಬುಧವಾರ ತಿಳಿಸಿದ್ದಾರೆ. ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂವಿಧಾನಕ್ಕೆ ತಿದ್ದುಪಡಿ ತರಲಾಗುವುದು ಎಂದು ಹೇಳಿದ್ದಾರೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಯಡಿಯೂರು ವಾರ್ಡ್‌ನಲ್ಲಿ ಅನಧಿಕೃತ ನಿರ್ಮಾಣ • ಅಧಿಕಾರಿಗಳ ಮೌನ

5 ಮಹಡಿ ಕಟ್ಟಡ ಅಕ್ರಮ ನಿರ್ಮಾಣ

• ಪ್ರವೀಣ್ ಕುಮಾರ್ ಪಿ.ವಿ.

ಮುಖ್ಯಾಂಶಗಳು

- ಕರಿಯಪ್ಪ ರಸ್ತೆಯ ಪಾಪು ಕಾಟೇಜ್ ಬಳಿ ತಲೆ ಎತ್ತಿರುವ ಕಟ್ಟಡ
- ಪ್ರತಿ ಮಹಡಿಯೂ 47.84 ಚದರ ಮೀಗಳಷ್ಟು ವಿಸ್ತೀರ್ಣ
- ಕಟ್ಟಡ ತೆರವುಗೊಳಿಸುವಂತೆ ಸೂಚಿಸಿದ ತಾತ್ಕಾಲಿಕ ಆದೇಶಕ್ಕೆ ಕಿಮ್ಮತ್ತಿಲ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಯಡಿಯೂರು ವಾರ್ಡ್‌ನಲ್ಲಿ ಬಿಬಿಎಂಪಿಯಿಂದ ಮಂಜೂರಾತಿ ಪಡೆಯದೆಯೇ ಐದು ಮಹಡಿಗಳ ಕಟ್ಟಡವನ್ನು ನಿರ್ಮಿಸಲಾಗಿದೆ. ಪಾಲಿಕೆ ವಾರ್ಡ್ ಕಚೇರಿ ಸಮೀಪವೇ ಭಾರಿ ಕಟ್ಟಡ ಅಕ್ರಮವಾಗಿ ನಿರ್ಮಾಣವಾಗಿದ್ದರೂ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿರಲಿಲ್ಲ. ಸ್ಥಳೀಯರೊಬ್ಬರು ಈ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಿದ ಬಳಿಕವಷ್ಟೇ ಅಧಿಕಾರಿಗಳು ಕಟ್ಟಡದ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಕರಿಯಪ್ಪ ರಸ್ತೆಯ ಪಾಪು ಕಾಟೇಜ್ ಬಳಿ ಎಸ್.ಕರಿಯಪ್ಪ ರಸ್ತೆ ಬಳಿ ಸ್ವತ್ತಿನ ಸಂಖ್ಯೆಯಲ್ಲಿ 36/11ರಲ್ಲಿ ಐದು ಮಹಡಿಗಳ ಕಟ್ಟಡ ನಿರ್ಮಿಸಲಾಗಿದೆ. ಇದರ ಕಟ್ಟಡ ಯೋಜನೆಗೆ ಮಂಜೂರಾತಿ ನೀಡಿರುವ ಬಗ್ಗೆ ವಿ.ಶಶಿಕುಮಾರ್ ಎಂಬುವವರು ಮಾಹಿತಿ ಹಕ್ಕಿನಡಿ ಬಿಬಿಎಂಪಿಯಿಂದ ವಿವರ ಕೇಳಿದ್ದರು. ಬಿಬಿಎಂಪಿಯಿಂದ ಮಂಜೂರಾತಿಯನ್ನೇ ಪಡೆಯದೇ ಈ ಕಟ್ಟಡ ನಿರ್ಮಿಸಿರುವುದು ಗೊತ್ತಾಗಿದೆ. ಆ ಬಳಿಕ ಬನಶಂಕರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಅವರು ಕಟ್ಟಡದ ಮಾಲೀಕರಿಗೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248ರ ಅಡಿ ಇತ್ತೀಚೆಗೆ ಆದೇಶ ಹೊರಡಿಸಿದ್ದಾರೆ.

ಒಟ್ಟು 17.50 ಮೀ ಎತ್ತರವಿರುವ, ಐದು ಎಫ್‌ಎಆರ್ ಹೊಂದಿರುವ ಈ ಕಟ್ಟಡದ ಪ್ರತಿ ಮಹಡಿಯೂ 47.84 ಚದರ ಮೀಗಳಷ್ಟು ವಿಸ್ತೀರ್ಣವನ್ನು ಹೊಂದಿದೆ. ತಳಮಹಡಿ ಹಾಗೂ ಐದು ಮಹಡಿಗಳೂ ಅನಧಿಕೃತ ಎಂಬುದು ಬಿಬಿಎಂಪಿ ಅಧಿಕಾರಿಗಳು ಮಾರ್ಚ್ 31ರಂದು ನಡೆಸಿರುವ ತಪಾಸಣೆಯಿಂದ ತಿಳಿದುಬಂದಿದೆ. ಈ ಕಟ್ಟಡವನ್ನು ತೆರವುಗೊಳಿಸುವಂತೆ ಸೂಚಿಸಿ ಮಾಲೀಕರಿಗೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248 (1) ಹಾಗೂ (2)ರ ಅಡಿ ಎಇಇ ಅವರು ಏಪ್ರಿಲ್ 8ರಂದು ತಾತ್ಕಾಲಿಕ ಆದೇಶ ಜಾರಿಗೊಳಿಸಿದ್ದರು. ಅದಕ್ಕೆ ಕಟ್ಟಡದ ಮಾಲೀಕರು ಪ್ರತಿಕ್ರಿಯಿಸಿರಲಿಲ್ಲ. ಬಳಿಕ ಎಇಇ ಅವರು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248 (3)ರನ್ವಯ ಸ್ಥಿರೀಕರಣ ಆದೇಶವನ್ನು ಏಪ್ರಿಲ್ 19ರಂದು ಜಾರಿಗೊಳಿಸಿದ್ದಾರೆ.

‘2015ರ ಬಿಬಿಎಂಪಿ ವಲಯ ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವುದು ದೃಢಪಟ್ಟಿದೆ. ಕಟ್ಟಡ ಕೆಡವಲು ಆದೇಶಿಸಲಾಗಿದೆ. ಕಟ್ಟಡ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಬೇಕು. ಇದನ್ನು ಕೆಡವಲು ತಗಲುವ ವೆಚ್ಚವನ್ನೂ ಮಾಲೀಕರಿಂದಲೇ ವಸೂಲಿ ಮಾಡಲಾಗುತ್ತದೆ’ ಎಂದು ಸ್ಥಿರೀಕರಣ ಆದೇಶದಲ್ಲಿ ಎಇಇ ಸ್ಪಷ್ಟಪಡಿಸಿದ್ದಾರೆ.

ಜಯನಗರ 6ನೇ ಬ್ಲಾಕ್ 27ನೇ ಅಡ್ಡ ರಸ್ತೆಯಲ್ಲಿರುವ (ಸ್ವತ್ತಿನ ಸಂಖ್ಯೆ 5) ಇನ್ನೊಂದು ಕಟ್ಟಡಕ್ಕೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248 (2)ರಡಿ ಏಪ್ರಿಲ್ 29ರಂದು ನೋಟಿಸ್ ಜಾರಿಗೊಳಿಸಲಾಗಿದೆ. ಈ ಕಟ್ಟಡವನ್ನು ಅಧಿಕಾರಿಗಳು ಏಪ್ರಿಲ್ 26ರಂದು ಪರಿಶೀಲಿಸಿದಾಗ, ಮಂಜೂರಾತಿ ಪಡೆದ ಕಟ್ಟಡ ಯೋಜನೆ ಉಲ್ಲಂಘಿಸಿ ಶೇ 33ರಷ್ಟು ಭಾಗವನ್ನು ಹೆಚ್ಚುವರಿ ನಿರ್ಮಾಣ ಮಾಡಿರುವುದು ಪತ್ತೆಯಾಗಿತ್ತು.

‘ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ಬಾರದೆಯೇ ಐದು ಮಹಡಿಗಳ ಕಟ್ಟಡ ನಿರ್ಮಾಣವಾಗಲು ಸಾಧ್ಯವಿದೆಯೇ. ವಾರ್ಡ್‌ನ ರಾಜಕೀಯ ಮುಖಂಡರ ಬೆಂಬಲವೂ ಇದಕ್ಕಿರುವುದರಿಂದ ಕಟ್ಟಡ ಮಾಲೀಕರ ವಿರುದ್ಧ ಅವರು ಕ್ರಮಕೈಗೊಂಡಿಲ್ಲ. ಅನಧಿಕೃತ ನಿರ್ಮಾಣ ತಡೆಯಲು ಕ್ರಮ ಕೈಗೊಳ್ಳುವುದಾಗಿ ಬಿಬಿಎಂಪಿ ಮುಖ್ಯ ಆಯುಕ್ತರು ಹೈಕೋರ್ಟ್‌ಗೆ ಭರವಸೆ ನೀಡಿದ್ದಾರೆ. ಆದರೆ, ವಾರ್ಡ್‌ಮಟ್ಟದಲ್ಲಿ ಅನಧಿಕೃತ ನಿರ್ಮಾಣಗಳು ಅವ್ಯಾಹತವಾಗಿ ನಡೆಯುತ್ತಲೇ ಇವೆ’ ಎಂದು ಶಶಿಕುಮಾರ್ ಬೇಸರ ವ್ಯಕ್ತಪಡಿಸಿದರು.

ಎರಡು ಕಟ್ಟಡಗಳ ಅನಧಿಕೃತ ಭಾಗವನ್ನು ತೆರವುಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳು ತಿಂಗಳ ಹಿಂದಷ್ಟೇ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248ರ ಅಡಿ ನೋಟಿಸ್ ಜಾರಿಗೊಳಿಸಿದ್ದರು. ಈಗ ನಿಯಮ ಉಲ್ಲಂಘಿಸಿದ ಮತ್ತೆರಡು ಕಟ್ಟಡಗಳ ಮಾಲೀಕರ ವಿರುದ್ಧ ಕ್ರಮಕ್ಕೆ ಬಿಬಿಎಂಪಿ ಮುಂದಾಗಿದ್ದು, ಅನಧಿಕೃತ ಭಾಗದ ತೆರವಿಗೆ ಆದೇಶ ಹೊರಡಿಸಲಾಗಿದೆ.

ಎಂಜಿನಿಯರ್ ವಿರುದ್ಧ ಕ್ರಮ: ಮುಖ್ಯ ಆಯುಕ್ತ

‘ಅಕ್ರಮವಾಗಿ ಐದು ಮಹಡಿ ಕಟ್ಟಡ ನಿರ್ಮಿಸುವವರೆಗೂ ಸ್ಥಳೀಯ ಎಂಜಿನಿಯರ್‌ಗಳು ಸುಮ್ಮನಿರುವುದು ಸರಿಯಲ್ಲ. ಇಂತಹ ಅಸಡ್ಡೆಯನ್ನು ಸಹಿಸಲು ಸಾಧ್ಯವಿಲ್ಲ. ಇಂತಹ ಅಕ್ರಮ ನಿರ್ಮಾಣಕ್ಕೆ ಸಹಕರಿಸಿರುವ ಸ್ಥಳೀಯ ಎಂಜಿನಿಯರ್ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇವೆ. ಇದು ಎಲ್ಲರಿಗೂ ಪಾಠವಾಗಬೇಕು’ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ತಡೆಯಾಜ್ಞೆ ತೆರವಿಗೆ ಆಯೋಗದಿಂದ ಅರ್ಜಿ

ಬಿಬಿಎಂಪಿ ಚುನಾವಣೆ: ತಜ್ಞರ ಸಲಹೆ ಪಡೆದ ರಾಜ್ಯ ಚುನಾವಣಾ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾಯಿತ ಕೌನ್ಸಿಲ್‌ಗಳ ಅಧಿಕಾರದ ಅವಧಿ ಪೂರ್ಣಗೊಂಡ ನಂತರ ಸ್ಥಳೀಯ ಸಂಸ್ಥೆಗಳಲ್ಲಿ ನಿರ್ವಾತ ಸೃಷ್ಟಿಯಾಗಲು ಅವಕಾಶ ನೀಡದೇ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದ ಬೆನ್ನಲ್ಲೇ ರಾಜ್ಯ ಚುನಾವಣಾ ಆಯೋಗವು ಕಾನೂನು ತಜ್ಞರ ಸಲಹೆ ಪಡೆದಿದೆ. ಬಿಬಿಎಂಪಿ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸುವಂತೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಆಯೋಗವು ನಿರ್ಧರಿಸಿದೆ.

‘ಬಿಬಿಎಂಪಿ ಚುನಾವಣೆ ಸಂಬಂಧ ‘ಸುಪ್ರೀಂ’ ನೀಡಿರುವ ತಡೆಯಾಜ್ಞೆ ತೆರವುಗೊಳಿಸಲು ತಕ್ಷಣವೇ ಅರ್ಜಿ ಸಲ್ಲಿಸುತ್ತೇವೆ. ಈ ಪ್ರಕರಣದಲ್ಲಿ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದು ರಾಜ್ಯ ಸರ್ಕಾರ. ಹಾಗಾಗಿ ನಾವು ಮಧ್ಯಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿ ಅರ್ಜಿ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ಸೂಚನೆಯನ್ನು ಉಲ್ಲೇಖಿಸಿ ರಾಜ್ಯ ಸರ್ಕಾರಕ್ಕೂ ಪತ್ರ ಬರೆಯುತ್ತೇವೆ’ ಎಂದು ರಾಜ್ಯ ಚುನಾವಣಾ ಆಯುಕ್ತ ಬಿ.ಬಸವರಾಜು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಬಿಎಂಪಿಗೆ ಚುನಾವಣೆ ನಡೆಸುವುದಕ್ಕೆ ವಾರ್ಡ್‌ಗಳ ಮರುವಿಂಗಡಣೆಯ ಗೊಂದಲಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ನೀಡಿರುವ ಆದೇಶವು ನಿವಾರಿಸಿದೆ. ತಡೆಯಾಜ್ಞೆ ತೆರವುಗೊಳ್ಳದೇ ಚುನಾವಣೆ ನಡೆಸುವುದು ಸಮಂಜಸವಾಗದು. ಎಂಬ ಅಭಿಪ್ರಾಯವನ್ನು ಕಾನೂನು ತಜ್ಞರು ನೀಡಿದ್ದಾರೆ ಎಂದು ರಾಜ್ಯ ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

‘243 ವಾರ್ಡ್‌ಗಳ ಕರಡು ಸಿದ್ಧ’

‘ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿ ರೂಪಿಸಿರುವ ವಾರ್ಡ್ ಮರುವಿಂಗಡಣೆಯ ಕರಡು ಪಟ್ಟಿ ಸಿದ್ಧವಾಗಿದೆ’ ಎಂದು ಬಿಬಿಎಂಪಿ ಬುಧವಾರ ತಿಳಿಸಿದೆ.

ಸುದ್ದಿಗಾರರ ಜೊತೆ ಮಾತನಾಡಿದ ವಿಶೇಷ ಆಯುಕ್ತ (ಕಲ್ಯಾಣ) ಬಿ.ಶರತ್, ‘ಬಿಬಿಎಂಪಿ ವಾರ್ಡ್‌ಗಳನ್ನು ಮರುವಿಂಗಡಣೆಗೊಳಿಸಿ ಅವುಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲಾಗಿದ್ದು, ಇದರ ಕರಡು ಪಟ್ಟಿ ಸಿದ್ಧವಿದೆ. ಇದನ್ನು ಬಹಿರಂಗಪಡಿಸಿಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆ ಸ್ವೀಕರಿಸಿ ಶೀಘ್ರವೇ ಅಂತಿಮಗೊಳಿಸುತ್ತೇವೆ’ ಎಂದು ತಿಳಿಸಿದರು.

243 ವಾರ್ಡ್‌ಗಳ ಮರುವಿಂಗಡಣೆಗೆ ಸರ್ಕಾರ ಬಿಬಿಎಂಪಿ ಒಂದೂವರೆ ವರ್ಷದ ಹಿಂದೆಯೇ ಸಮಿತಿಯನ್ನು ರಚಿಸಿತ್ತು. ಮುಖ್ಯ ಆಯುಕ್ತರ ಅಧ್ಯಕ್ಷತೆಯ ಈ ಸಮಿತಿಯು ಕರಡು ಪಟ್ಟಿಯನ್ನು ಸಿದ್ಧಗೊಳಿಸಿದೆ. ಆದರೆ ಅದನ್ನು ಇನ್ನೂ ಸರ್ಕಾರಕ್ಕೆ ಕಳುಹಿಸಿರಲಿಲ್ಲ. ಸುಪ್ರೀಂ ಕೋರ್ಟ್ ಮಂಗಳವಾರ ಆದೇಶ ನೀಡಿದ ಬಳಿಕ ಬಿಬಿಎಂಪಿಯ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ವಾರ್ಡ್‌ಗಳ ಮರುವಿಂಗಡನೆಗೆ ಕುರಿತು ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ್ದಾರೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.



ಏಕಶಿಲಾ ಮೂರ್ತಿ ಲೋಕಾರ್ಪಣೆ ಮೈಸೂರು ರಸ್ತೆಯ ಬ್ಯಾಟರಾಯಣಪುರದ ಗಾಳಿ ಆಂಜನೇಯಸ್ವಾಮಿ ಟ್ರಸ್ಟ್ ವತಿಯಿಂದ ಪ್ರತಿಷ್ಠಾಪನೆ ಮಾಡಿರುವ 21 ಅಡಿ ಎತ್ತರದ ಆಂಜನೇಯಸ್ವಾಮಿ ಏಕಶಿಲಾ ಮೂರ್ತಿ ಬುಧವಾರ ಲೋಕಾರ್ಪಣೆಗೊಂಡಿತು –ಪ್ರಜಾವಾಣಿ ಚಿತ್ರ

ಟೊಮೆಟೊ ಫ್ಲೂ: ಕೇರಳ ಗಡಿಯಲ್ಲಿ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳಲ್ಲಿ ಕಂಡು ಬರುವ ಟೊಮೆಟೊ ಫ್ಲೂ ರೋಗದ ಹರಡುವಿಕೆ ತಡೆಗಟ್ಟಲು ಕೇರಳ ಗಡಿಜಿಲ್ಲೆಗಳಲ್ಲಿ ಕಟ್ಟೆಚ್ಚರದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದು ಈಗಾಗಲೇ ಇರುವ ಕಾಯಿಲೆಯಾಗಿದ್ದು, ಯಾರೂ ಆತಂಕಪಡುವ ಅಗತ್ಯವಿಲ್ಲ’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

’ಕೇರಳದಲ್ಲಿ ಈ ರೋಗದ ಪ್ರಕರಣಗಳು ಪತ್ತೆಯಾಗಿರುವುದರಿಂದ ಮಂಗಳೂರು, ಉಡುಪಿ, ಕೊಡಗು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಿಗೆ ಕೇರಳದಿಂದ ಆಗಮಿಸುವ ಪ್ರಯಾಣಿಕರ ಮೇಲೆ ನಿಗಾ ಇರಿಸಲು ಸೂಚನೆ ನೀಡಲಾಗಿದೆ’ ಎಂದರು.

‘ರಾಜ್ಯದ ಯಾವುದೇ ಆಸ್ಪತ್ರೆಗಳ ಹೊರರೋಗಿ ವಿಭಾಗಗಳಲ್ಲಿ ಈ ರೋಗ ಲಕ್ಷಣ ಕಂಡು ಬರುವ ಮಕ್ಕಳ ಬಗ್ಗೆ ಕೂಡಲೇ ಮಾಹಿತಿ ನೀಡಬೇಕು ಎಂದು ಸೂಚಿಸಲಾಗಿದೆ. ಈ ಬಗ್ಗೆ ಹೆಚ್ಚಿನ ನಿಗಾ ಇರಿಸಲು ಎಲ್ಲಾ ಜಿಲ್ಲೆಗಳ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರ ಕಚೇರಿಯಿಂದ ಲಿಖಿತ ನಿರ್ದೇಶನ ನೀಡಲಾಗಿದೆ. ಅಪರೂಪದ ವೈರಸ್ ಆಗಿರುವ ಟೊಮೆಟೊ ಜ್ವರದ ಪ್ರಕರಣಗಳು ಕೇರಳ ರಾಜ್ಯದ ಅರ್ಯಂಕಾರು, ಅಂಚಲ್ ಹಾಗೂ ನೆಡುವತೂರ್‌ನಲ್ಲಿ ಕಂಡು ಬಂದಿವೆ. ಟೊಮೆಟೊ ಜ್ವರಕ್ಕೂ ಕೊರೊನಾಗೂ ಯಾವುದೇ ರೀತಿಯ ಸಂಬಂಧವಿಲ್ಲ. ಇದು ಕೇರಳದಲ್ಲಿ ಈಗಾಗಲೇ ಇರುವ ಕಾಯಿಲೆಯಾಗಿದೆ’ ಎಂದು ತಿಳಿಸಿದ್ದಾರೆ.

ರೋಗ ಲಕ್ಷಣ

- ಸಾಮಾನ್ಯವಾಗಿ 5 ವರ್ಷ ವಯಸ್ಸಿನ ಒಳಗಿನ ಮಕ್ಕಳಲ್ಲಿ ಕಂಡು ಬರುತ್ತದೆ.
- ಚರ್ಮದ ತುರಿಕೆ, ಕೆಂಪಾಗುವುದು, ನೀರಡಿಕೆ ಮೊದಲಾದ ಲಕ್ಷಣಗಳನ್ನು ಹೊಂದಿವೆ.
- ತೀವ್ರ ಜ್ವರ, ಮೈ ಕೈ ನೋವು, ಕೀಲು ನೋವು, ಆಯಾಸ ಮೊದಲಾದ ಲಕ್ಷಣಗಳೂ ಕಂಡುಬರುತ್ತವೆ.



ನಗರದಲ್ಲಿ ಇಂದು

ನವೋದ್ಯಮಗಳ ನಾವೀನ್ಯತಾ ಉತ್ಪನ್ನಗಳ ಬಿಡುಗಡೆ ಮತ್ತು ಜೈವಿಕ ಬ್ಯಾಂಕ್ ಉದ್ಘಾಟನೆ– ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು– ಕಿರಣ್ ಮಜುಂದಾರ್ ಶಾ, ಜಿತೇಂದ್ರ ಕುಮಾರ್, ಸ್ಥಳ–ಹೆಲಿಕ್ಸ್ ಬಯೊಟೆಕ್ ಪಾರ್ಕ್, ಐಬ್ಯಾಬ್ ಆವರಣ, ಎಲೆಕ್ಟ್ರಾನಿಕ್ಸ್ ಸಿಟಿ 1ನೇ ಹಂತ, ಬೆಳಿಗ್ಗೆ 9.30

‘ನಿರ್ಮಾಣ್–2022’: ಸುರಂಗ ಮತ್ತು ಭೂಗತ ನಿರ್ಮಾಣ ವಿಷಯ ಕುರಿತ ಸಮ್ಮೇಳನ, ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿ– ಅಂಜುಂ ಪರ್ವೇಜ್, ಆಯೋಜನೆ– ಇನ್‌ಸ್ಟ್ರಕ್ಟ್, ಸ್ಥಳ–ದಿ ಲಲಿತ್ ಅಶೋಕ್ ಹೋಟೆಲ್, ಬೆಳಿಗ್ಗೆ 9.30

ನಾಗೇಂದ್ರ ಆರ್.ಗುಂಬಳ್ಳಿ ಅವರ ‘ಅರಿವು’ ಪುಸ್ತಕ ಬಿಡುಗಡೆ: ಸಚಿವ ಆರ್. ಅಶೋಕ, ಆಯೋಜನೆ–ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ–ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11



‘ಗುಂಡಾಯಣ’ ಹಾಸ್ಯನಾಟಕ–ಲಕ್ಷ್ಮೀ ಚಂದ್ರಶೇಖರ್

‘ಗುಂಡಾಯಣ’ ಹಾಸ್ಯನಾಟಕ ಪ್ರದರ್ಶನ: ಅಭಿನಯ–ಸುಂದರ್ ಹಾಗೂ ಲಕ್ಷ್ಮೀ ಚಂದ್ರಶೇಖರ್, ಆಯೋಜನೆ–ಕ್ರಿಯೇಟಿವ್ ಥಿಯೇಟರ್, ಸ್ಥಳ–ರಂಗಶಂಕರ, ಸಂಜೆ 7.30

‘ಮೈತ್ರೀ ಉತ್ಸವ–7’: ಚಿತ್ರಕಲಾ ಪ್ರದರ್ಶನ, ಆಯೋಜನೆ–ಆಂಕ್ಕಾನ್ ಆರ್ಟ್ ಸ್ಟುಡಿಯೊ, ಸ್ಥಳ–ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11ರಿಂದ ಸಂಜೆ 5 (ಮೇ 15ರವರೆಗೆ ಇದೆ)

ಅಂಬೇಡ್ಕರ್ ಜಯಂತಿ: ಅತಿಥಿ– ಬರಗೂರು ರಾಮಚಂದ್ರಪ್ಪ, ಆಯೋಜನೆ–ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಸ್ಥಳ– ಧನ್ವಂತರಿ ಸಭಾಂಗಣ, ವಿ.ವಿ.ಆವರಣ, ಜಯನಗರ, ಮಧ್ಯಾಹ್ನ 3.30

ಅಂತರರಾಷ್ಟ್ರೀಯ ಶುಶ್ರೂಷಕರ ದಿನ ಮತ್ತು ‘ಫ್ಲಾರೆನ್ಸ್ ನೈಟಿಂಗೇಲ್ ಶುಶ್ರೂಷ ಅಧಿಕಾರಿಗಳ ಪ್ರಶಸ್ತಿ’ ಪ್ರದಾನ: ಬಸವರಾಜ ಬೊಮ್ಮಾಯಿ, ಆಯೋಜನೆ–ಆರೋಗ್ಯ ಇಲಾಖೆ, ಸ್ಥಳ– ಕೃಷ್ಣಾ, ಸಂಜೆ 5

ವಾರ್ಷಿಕ ವಸಂತ ಸಂಗೀತೋತ್ಸವ: ಗಾಯನ–ಐಶ್ವರ್ಯ ವಿದ್ಯಾ ರಘುನಾಥ್, ವಾದ್ಯ ಸಹಕಾರ–ಚಾರುಲತ ರಾಮಾನುಜನ್, ಬಿ.ಎಸ್.ಪ್ರಶಾಂತ್, ಬಿ.ಜಿ.ಕಿರಣ್ ಕುಮಾರ್, ಆಯೋಜನೆ– ಶ್ರೀರಾಮ ಲಲಿತ ಕಲಾ ಮಂದಿರ, ಸ್ಥಳ–ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್.ರಸ್ತೆ, ಸಂಜೆ 5.30

ನೆನಪಿನಂಗಳದಲ್ಲಿ–ಕೆ.ವಿ.ಆರ್. ಟ್ಯಾಗೋರ್: ಅತಿಥಿಗಳು–ಪ್ರಧಾನ ಗುರುದತ್, ಎಚ್.ಎನ್.ಸುರೇಶ್, ವೈ.ಕೆ. ಮುದ್ದುಕೃಷ್ಣ, ಭಾಷಣ–ಎನ್.ಎಸ್. ಶ್ರೀಧರಮೂರ್ತಿ, ಅಧ್ಯಕ್ಷತೆ–ಡಿ.ಸಿ.ಶ್ರೀಧರ್, ಆಯೋಜನೆ–ಸಹ್ಯಾದ್ರಿ ಸಂಘ, ಸ್ಥಳ– ಭಾರತೀಯ ವಿದ್ಯಾಭವನ, ಸಂಜೆ 6

‘ಮಕ್ಕಳ ಮನೋವಿಕಾಸದಲ್ಲಿ ಸಮಾಜದ ಪಾತ್ರ’ ಉಪನ್ಯಾಸ: ಡಿ.ಎನ್.ಗೀತಾ, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

‘ಹರಿದಾಸ ಝೇಂಕಾರ’ ಸಂಗೀತ ಕಾರ್ಯಕ್ರಮ: ಚಿಂತಲಪಲ್ಲಿ ವಿ.ಶ್ರೀನಿವಾಸ್, ವಾದ್ಯ ಸಹಕಾರ– ಎಂ.ಎಸ್.ಸತ್ಯನಾರಾಯಣ, ಶ್ರೀನಿವಾಸ್ ಅನಂತರಾಮಯ್ಯ, ಸ್ಥಳ– ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7

ಸಂಕ್ಷಿಪ್ತ ಸುದ್ದಿ

ಧ್ವನಿವರ್ಧಕ: ‘ಸುಪ್ರೀಂ’ ಆದೇಶ ಜಾರಿ

ಬೆಂಗಳೂರು: ಶಬ್ದ ಮಾಲಿನ್ಯ ತಡೆಯುವ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಆದೇಶವನ್ನು ರಾಜ್ಯದಾದ್ಯಂತ ಯಾವುದೇ ತಾರತಮ್ಯ ಇಲ್ಲದೆ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಸುಪ್ರೀಂ ಆದೇಶದಂತೆ ಶಬ್ದ ಮಾಲಿನ್ಯ ನಿಯಂತ್ರಣ ನಿಯಮಗಳ ಅನುಷ್ಠಾನಕ್ಕೆ ಹೊಸ ಸುತ್ತೋಲೆ ಹೊರಡಿಸಲಾಗಿದೆ. ಮಸೀದಿ, ಚರ್ಚ್, ದೇವಸ್ಥಾನ ಸೇರಿದಂತೆ ಯಾವುದೇ ಸ್ಥಳದಲ್ಲಿ ಧ್ವನಿವರ್ಧಕ ಬಳಕೆಯಲ್ಲಿ ನಿಯಮ ಉಲ್ಲಂಘನೆ ಅದರೂ ಕ್ರಮ ಕೈಗೊಳ್ಳಲಾಗುವುದು’ ಎಂದರು. ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಧ್ವನಿವರ್ಧಕ ಬಳಕೆಗೆ ಅವಕಾಶವಿಲ್ಲ. ಯಾವ ಪ್ರದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಧ್ವನಿವರ್ಧಕ ಬಳಸಬಹುದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಖಾಸಗಿ ಸ್ಥಳಗಳಲ್ಲೂ ಈ ನಿರ್ಬಂಧ ಅನ್ವಯ’ ಎಂದರು.

‘ಸಚಿವರ ಮೇಲೆ ಅವಿಶ್ವಾಸ ಸಾಬೀತು’

ಬೆಂಗಳೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ‘ಟೆಂಡರ್ ಪರಿಶೀಲನಾ ಸಮಿತಿ’ ರಚಿಸುವ ಮೂಲಕ ತಮ್ಮ ಸಚಿವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಟೆಂಡರ್ ಕಾಮಗಾರಿಗಳಲ್ಲಿ ಶೇ 40ರ ಕಮಿಷನ್ ದಂಧೆ ನಡೆಯುತ್ತಿದೆ ಎಂದು ಗುತ್ತಿಗೆದಾರರು ಹಾಗೂ ಎಎಪಿ ಆರೋಪಿಸಿತ್ತು. ಈ ವಿಚಾರ ಅಲ್ಲಗಳೆಯುತ್ತಿದ್ದ ಬೊಮ್ಮಾಯಿ ಈಗ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ಅವರ ನೇತೃತ್ವದಲ್ಲಿ ಸಮಿತಿ ರಚಿಸಿದ್ದಾರೆ. ಅವರಿಗೆ ತಮ್ಮ ಸಚಿವರ ಮೇಲೆ ನಂಬಿಕೆಯಿಲ್ಲ’ ಎಂದರು.

ನಿಧನ ವಾರ್ತೆ

ಡಾ.ನರೇಂದ್ರ ಕುಮಾರ್



ಉಜಿರೆ: ಬಿಜೆಪಿ ಬೆಂಗಳೂರು ಉತ್ತರ ವಲಯ ಪರಿಶಿಷ್ಟ ಪಂಗಡ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಡಾ. ನರೇಂದ್ರ ಕುಮಾರ್ (45) ಬುಧವಾರ ಧರ್ಮಸ್ಥಳದಲ್ಲಿ ಹೃದಯಾಘಾತದಿಂದ ನಿಧನರಾದರು. ಪತ್ನಿ ಸಂದರ್ಶಿನಿ, ಪುತ್ರ ಪ್ರಜ್ವಲ್ ಮತ್ತು ಪುತ್ರಿ ಕಶಿಕಾ ಇದ್ದಾರೆ. ಬೆಂಗಳೂರಿನಲ್ಲಿರುವ ತಮ್ಮ ಶ್ರೀ ಜ್ಞಾನಾಕ್ಷಿ ವಿದ್ಯಾಮಂದಿರದ ಶಿಕ್ಷಕಿಯರನ್ನು ತರಬೇತಿಗಾಗಿ ಪುತ್ತೂರಿನ ವಿವೇಕಾನಂದ ಕಾಲೇಜಿಗೆ ಮಂಗಳವಾರ ಕರೆದುಕೊಂಡು ಬಂದಿದ್ದ ಅವರು, ತಮ್ಮ ಕುಟುಂಬದ ಜೊತೆ ಧರ್ಮಸ್ಥಳದ ಅತಿಥಿ ಗೃಹದಲ್ಲಿ ತಂಗಿದ್ದರು. ಬುಧವಾರ ಬೆಳಿಗ್ಗೆ ಎದೆನೋವು ಕಾಣಿಸಿಕೊಂಡಿದ್ದು, ಹೃದಯಾಘಾತದಿಂದ ನಿಧನರಾದರು.



ಐದು ತಿಂಗಳಿಂದ ಮಲ್ಲೇಶ್ವರ ನಿವಾಸಿಗಳ ನಿತ್ಯ ಪರದಾಟ

ರಾಜಕಾಲುವೆ ದಾಟಲು ಸರ್ಕಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದಿಂದ ಗುಟ್ಟಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ರಾಜಕಾಲುವೆಗೆ ಅಡ್ಡಲಾಗಿ ಹೊಸ ಸೇತುವೆ ನಿರ್ಮಿಸಲು ಹಳೇ ಸೇತುವೆ ಒಡೆದು ಐದು ತಿಂಗಳಾದರೂ ಕಾಮಗಾರಿ ಆರಂಭಗೊಂಡಿಲ್ಲ. ಸಂಚಾರಕ್ಕೆ ರಸ್ತೆ ಸಂಪರ್ಕ ಕಡಿತಗೊಂಡು ನಿವಾಸಿಗಳು ಪರದಾಡುತ್ತಿದ್ದಾರೆ.

ಮಲ್ಲೇಶ್ವರದಿಂದ ವೈಯಾಲಿ ಕಾವಲ್, ಗುಟ್ಟಹಳ್ಳಿ ಮತ್ತು ಬಳ್ಳಾರಿ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದು. ದತ್ತಾತ್ರೇಯ ದೇವಸ್ಥಾನದ ಪಕ್ಕದಲ್ಲಿಹಾದುಹೋಗಿರುವರಾಜಕಾಲುವೆಗೆ ಅಡ್ಡಲಾಗಿ ಸೇತುವೆಯೊಂದು ಇತ್ತು. ಹೊಸ ಸೇತುವೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಹಳೇ ಸೇತುವೆಯನ್ನು ಒಡೆದಿರುವ ಬಿಬಿಎಂಪಿ ಅಧಿಕಾರಿಗಳು, ಐದು ತಿಂಗಳಿಂದ ಕಾಮಗಾರಿಯನ್ನೇ ಆರಂಭಿಸಿರಲಿಲ್ಲ.



ಮಲ್ಲೇಶ್ವರದ ದತ್ತಾತ್ರೇಯ ದೇವಸ್ಥಾನದ ಬಳಿ ರಾಜಕಾಲುವೆ ಮೇಲೆ ಹಾಕಿರುವ ಪೈಪ್‌ಗಳ ಮೇಲೆ ಕಷ್ಟಪಟ್ಟು ದಾಟುತ್ತಿರುವ ಸ್ಥಳೀಯರು —ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ದನ್

ಕಾಮಗಾರಿ ನಿರ್ವಹಿಸಲು ಹಾಕಿರುವ ಪೈಪ್‌ಗಳ ಮೇಲೆ ಸ್ಥಳೀಯರು ಕಸರತ್ತು ಮಾಡಿಕೊಂಡು ರಾಜಕಾಲುವೆ ದಾಟಬೇಕಾದ ಸ್ಥಿತಿ ಇದೆ. ಆಯತಪ್ಪಿ ಬಿದ್ದರೆ ರಾಜಕಾಲುವೆಯಲ್ಲಿ ಹರಿಯುತ್ತಿರುವ ಕೊಳಚೆ ನೀರಿನಲ್ಲಿ ಬೀಳುವ ಅಪಾಯ ಇದೆ. ಬೇರೆ ದಾರಿ ಇಲ್ಲದೆ ಪೈಪ್‌ಗಳ ಮೇಲೆಯೇ ದಾಟುತ್ತಿದ್ದಾರೆ. ವಾಹನ ಸವಾರರಂತೂ ಕಿಲೋ ಮೀಟರ್‌ಗಟ್ಟಲೆ ಸುತ್ತಾಡಿ ಹೋಗಬೇಕಾದ ಅನಿವಾರ್ಯತೆ ಇದೆ.

ಸೇತುವೆ ಒಡೆದು ಐದು ತಿಂಗಳಾಗಿದ್ದು, ಅದರ ಅಡಿಯಲ್ಲಿದ್ದ ಅಗತ್ಯ ಮೂಲ ಸೌಕರ್ಯದ ಕೊಳವೆಗಳನ್ನು ಸ್ಥಳಾಂತರ ಮಾಡುವ ಕೆಲಸವೇ ಇನ್ನೂ ಪೂರ್ಣಗೊಂಡಿಲ್ಲ. ಒಳಚರಂಡಿ ಕೊಳವೆಗಳು, ಬೆಸ್ಕಾಂ ಮತ್ತು ಬಿಎಸ್‌ಎನ್‌ಎಲ್ ಕೇಬಲ್‌ಗಳನ್ನು ಸ್ಥಳಾಂತರ ಮಾಡಿಕೊಳ್ಳುವ ಕೆಲಸವೇ ಇನ್ನೂ ಪರಿಪೂರ್ಣಗೊಂಡಿಲ್ಲ. ಆದ್ದರಿಂದ ಸೇತುವೆ ಕಾಮಗಾರಿ ಆರಂಭಿಸುವುದು ವಿಳಂಬವಾಯಿತು ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ.

‘ಜಲಮಂಡಳಿಯ ಒಳಚರಂಡಿ ಕೊಳವೆಗಳ ಸ್ಥಳಾಂತರವೇ ದೊಡ್ಡ ತಲೆನೋವಾಗಿತ್ತು. ಸೇತುವೆ ನಿರ್ಮಾಣ ಕಾಮಗಾರಿ ಆರಂಭಿಸಿದ ಕೂಡಲೇ ಮಳೆ ಶುರುವಾಗಿದೆ. ಮಳೆ ಬಿಡುವು ನೀಡಿದರೆ ತ್ವರಿತಗತಿಯಲ್ಲಿ ಕಾಮಗಾರಿ ನಿರ್ವಹಿಸಿ 15 ದಿನಗಳಲ್ಲಿ ಪೂರ್ಣಗೊಳಿಸುತ್ತೇವೆ’ ಎಂದು ಬಿಬಿಎಂಪಿ ರಾಜಕಾಲುವೆ ವಿಭಾಗದ ಪಶ್ಚಿಮ ವಲಯದ ಕಾರ್ಯಪಾಲಕ ಎಂಜಿನಿಯರ್ ಎಸ್.ಜಗದೀಶ್ ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದರು.

ಇದೇ 26ರಿಂದ ಮನೆ ಬಾಗಿಲಿಗೆ ಮಾವು

ಬೆಂಗಳೂರು: ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು (ಕೆಎಸ್‌ಎಂಡಿಎಂಸಿ) ಅಂಚೆ ಇಲಾಖೆ ಸಹಯೋಗದಲ್ಲಿ ಇದೇ 26ರಿಂದ ಮಾವುಪ್ರಿಯರ ಮನೆ ಬಾಗಿಲಿಗೆ ವಿವಿಧ ತಳಿಯ ಮಾವು ತಲುಪಿಸಲಿದೆ.

ಗ್ರಾಹಕರಿಗಾಗಿ ಈಗಾಗಲೇ ಆನ್‌ಲೈನ್ ಸೇವೆ ಆರಂಭಿಸಿರುವ ನಿಗಮವು ನೆಚ್ಚಿನ ಮಾವು ಖರೀದಿಸಲು ಆನ್‌ಲೈನ್ ಬುಕಿಂಗ್ ಸೇವೆಗೂ ಅವಕಾಶ ಕಲ್ಪಿಸಿದೆ.

ಮಾವು ಮಾರಾಟ ಪೋರ್ಟಲ್ https://karsirimangoes.karnataka.gov.inಗೆ ಲಾಗಿನ್ ಆಗಿ ತಮಗೆ ಬೇಕಾದ ಮಾವಿನ ಹಣ್ಣಿನ ತಳಿ ಹಾಗೂ ಖರೀದಿಸುವ ಪ್ರಮಾಣವನ್ನು ತಿಳಿಸಬಹುದು. ತಮ್ಮ ವಿಳಾಸ, ಗ್ರಾಹಕರ ಮೊಬೈಲ್ ಸಂಖ್ಯೆ ನಮೂದಿಸಬೇಕು.

‘ಬೆಳೆಗಾರರಿಂದ ನೇರವಾಗಿ ಗ್ರಾಹಕರಿಗೆ ಮಾವು ತಲುಪಿಸಲು ಈ ಸಲವೂ ಸೇವೆ ಆರಂಭಿಸಿದ್ದೇವೆ. ಇದೇ 26ರಿಂದ ಮಾವು ಗ್ರಾಹಕರ ಕೈಸೇರಲಿದೆ’ ಎಂದು ಕೆಎಸ್‌ಎಂಡಿಎಂಸಿ ಅಧ್ಯಕ್ಷ ಕೆ.ವಿ. ನಾಗರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಭವಿಷ್ಯದಲ್ಲಿ ನೀರಿಗೆ ಹಾಹಾಕಾರ

ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ದೇವೇಗೌಡ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರದ ನಿರ್ಲಕ್ಷ್ಯದಿಂದಾಗಿ ನಮ್ಮ ನೀರು ನಾವು ಪಡೆಯಲು ಆಗಲಿಲ್ಲ. ಈಗಲೇ ಸಮಸ್ಯೆ ಪರಿಹರಿಸಿಕೊಳ್ಳದಿದ್ದರೆ ಭವಿಷ್ಯದಲ್ಲಿ ನೀರಿನ ಹಾಹಾಕಾರ ಎದುರಿಸಬೇಕಾಗಲಿದೆ’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಕಳವಳ ವ್ಯಕ್ತಪಡಿಸಿದರು.

ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನಲ್ಲಿ ನೀರಿಗೆ ಈಗಲೇ ಕಷ್ಟವಾಗಿದೆ, ಮುಂದಿನ ದಿನಗಳು ಇನ್ನೂ ಕಷ್ಟವಾಗಲಿವೆ’ ಎಂದರು.

‘ಈಗ ಅಭಿವೃದ್ಧಿ ಹೆಸರಿನಲ್ಲಿ ಜನರ ಹಣ ಲೂಟಿ ಮಾಡಲಾಗುತ್ತಿದೆ. ಮೊನ್ನೆ ಬಿದ್ದ ಸಣ್ಣ ಮಳೆಗೆ ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಕ್ರೀಡಾಂಗಣದ ಚಾವಣಿಯೇ ಬಿದ್ದು ಹೋಗಿದೆ. ಇದು ಇವರ ಅಭಿವೃದ್ಧಿಯ ಶೈಲಿ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ಭೋಜೇಗೌಡ, ಮುಖಂಡರಾದ ಟಿ.ಎ. ಶರವಣ, ಬಾಗೇಗೌಡ, ಜೆಡಿಎಸ್ ನಗರ ಘಟಕದ ಅಧ್ಯಕ್ಷ ಆರ್.ಪ್ರಕಾಶ್, ಪ್ರಮುಖರ ಸಮಿತಿಯ ಸದಸ್ಯೆ ರೂತ್ ಮನೋರಮಾ ಇದ್ದರು.



ಗವಿಪುರದಲ್ಲಿ ನಡೆದ ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ಎಚ್‌.ಡಿ.ದೇವೇಗೌಡ ಮಾತನಾಡಿದರು. ಮುಖಂಡರಾದ ಟಿ.ಎ.ಶರವಣ, ಸಿ.ಎಂ. ಇಬ್ರಾಹಿಂ, ಎಚ್‌.ಡಿ.ಕುಮಾರಸ್ವಾಮಿ ಇದ್ದರು —ಪ್ರಜಾವಾಣಿ ಚಿತ್ರ

‘ಮಕ್ಕಳ ಚಿಂತೆ ಬಿಡಿ: ಜೆಡಿಎಸ್ ಬೆಂಬಲಿಸಿ’

ಪೀಣ್ಯ ದಾಸರಹಳ್ಳಿ: ‘ಎರಡು ಬಾರಿ ಮುಖ್ಯಮಂತ್ರಿ ಆಗಿದ್ದೇನೆ. ಅಧಿಕಾರದ ಹಪಾಹಪಿ ಇಲ್ಲ. ಜನ ಸೇವೆಯೇ ನಮಗೆ ಮುಖ್ಯ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಹೆಗ್ಗನಹಳ್ಳಿಯ ಜಿಕೆಡಬ್ಲ್ಯೂ ಬಡಾವಣೆಯಲ್ಲಿ ಆಯೋಜಿಸಿದ್ದ ಜನತಾ ಜಲಧಾರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಜನ ಸಾಲಗಾರರಾಗಬೇಡಿ, ಶುಲ್ಕ ಭರಿಸಲು ಕಣ್ಣೀರು ಹಾಕಬೇಡಿ, ಬದಲಿಗೆ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಿ. ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಉತ್ತಮ ಶಿಕ್ಷಣ ಒದಗಿಸುವ ಶಾಲೆ ನಿರ್ಮಿಸಲಾಗುವುದು’ ಎಂದರು. ಶಾಸಕ ಆರ್. ಮಂಜುನಾಥ್ ಮಾತನಾಡಿ, ‘ಕಡಿಮೆ ಅವಧಿಗೆ ಮುಖ್ಯಮಂತ್ರಿಯಾಗಿದ್ದ ಎಚ್‌.ಡಿ. ಕುಮಾರಸ್ವಾಮಿ ಅವರು ಜನಪರ ಯೋಜನೆಗಳನ್ನು ಜಾರಿಗೆ ತಂದರು. ಕೆರೆ, ನದಿ, ಅಣೆಕಟ್ಟುಗಳನ್ನು ಅಭಿವೃದ್ಧಿಪಡಿಸಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಜನತಾ ಜಲಧಾರೆ ಕಾರ್ಯಕ್ರಮ ನಡೆಸಲಾಗುತ್ತಿದೆ’ ಎಂದರು.

ವಿತರಕ ಆಧಾರಿತ ಸೂಕ್ಷ್ಮ ನೀರಾವರಿ ಜಾರಿಗೆ ಆಗ್ರಹ

ಬೆಂಗಳೂರು: ‘ರೈತರಿಗೆ ಸೂಕ್ಷ್ಮ ನೀರಾವರಿ (ಹನಿ ಮತ್ತು ತುಂತುರು) ಉಪಕರಣಗಳನ್ನು ಅಳವಡಿಸಲು ಸರ್ಕಾರ ವಿತರಕರಿಗೆ ಪರವಾನಗಿ ನೀಡಬೇಕು. ಸಹಾಯಧನಕ್ಕಾಗಿ ವಿತರಕರ ಬಿಲ್‌ಗಳನ್ನೇ ಪರಿಗಣಿಸಬೇಕು’ ಎಂದು ರಾಜ್ಯ ಸೂಕ್ಷ್ಮ ನೀರಾವರಿ ವಿತರಕರ ಸಂಘದ ಅಧ್ಯಕ್ಷ ಅಬ್ದುಲ್ ಖಾದಿರ್ ಒತ್ತಾಯಿಸಿದರು.

ಬುಧವಾರ ಇಲ್ಲಿ ಮಾತನಾಡಿ, ‘ನೀರಾವರಿ ಉಪಕರಣಗಳನ್ನು ಉತ್ಪಾದನಾ ಸಂಸ್ಥೆಗಳಿಂದ ಪಡೆದು ರೈತರಿಗೆ ವಿತರಿಸುವ ಕೆಲಸ ವಿತರಕರು ಮಾಡುತ್ತಿದ್ದರು. ಆದರೆ, ಉತ್ಪಾದನಾ ಸಂಸ್ಥೆಗಳೇ ನೀರಾವರಿ ಉಪಕರಣಗಳನ್ನು ಅಳವಡಿಸಬೇಕೆಂದು ತೋಟಗಾರಿಕೆ ಇಲಾಖೆ 2020ರಲ್ಲಿ ಆದೇಶ ಹೊರಡಿಸಿತು. ಇದರಿಂದ ವಿತರಕರಿಗೆ ಬಹಳ ತೊಂದರೆಯಾಗಿದೆ’ ಎಂದು ಹೇಳಿದರು.

‘ರಾಜ್ಯದಲ್ಲಿ 4 ಸಾವಿರಕ್ಕೂ ಹೆಚ್ಚು ವಿತರಕರು ಸ್ವಯಂ ಉದ್ಯೋಗ ಕಂಡುಕೊಂಡಿದ್ದು, ಇದರಿಂದ ಲಕ್ಷಾಂತರ ಮಂದಿ ಬದುಕು ಕಟ್ಟಿಕೊಂಡಿದ್ದರು. ಇಲಾಖೆಯ ಈ ನಿರ್ಧಾರದಿಂದ ವಿತರಕರ ಕುಟುಂಬಗಳೆಲ್ಲ ಬೀದಿಗೆ ಬರಲಿವೆ’ ಎಂದು ಅವರು ಹೇಳಿದರು.

ಬಂಡವಾಳ ಹೂಡಲು ಆಹ್ವಾನ

ಬೆಂಗಳೂರು: ‘ಕರ್ನಾಟಕ ಬಂಡವಾಳ ಹೂಡಿಕೆಗೆ ಸೂಕ್ತ ಸ್ಥಳ. ಈ ರಾಜ್ಯದಲ್ಲಿ ನಿಮ್ಮದೇ ಆದ ಪ್ರಪಂಚವನ್ನು ಸೃಷ್ಟಿಸಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿವಿಧ ದೇಶಗಳ ರಾಯಭಾರಿಗಳನ್ನು ಉದ್ದೇಶಿಸಿ ಹೇಳಿದರು.

ನವದೆಹಲಿಯಲ್ಲಿ ಮಂಗಳವಾರ ವಿವಿಧ ದೇಶಗಳ ರಾಯಭಾರಿಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ನವೆಂಬರ್‌ನಲ್ಲಿ ‘ಇನ್ವೆಸ್ಟ್ ಕರ್ನಾಟಕ 2022’ ಜಾಗತಿಕ ಹೂಡಿಕೆದಾರರ ಸಭೆಯಲ್ಲಿ ಪಾಲ್ಗೊಳ್ಳುವಂತೆ ರಾಯಭಾರಿಗಳಿಗೆ ಆಹ್ವಾನಿಸಿದರು.

ಕೈಗಾರಿಕಾ ಕ್ಷೇತ್ರಗಳಿಗೆ ಅನುಕೂಲ ಮಾಡಲು ರಾಜ್ಯದ ವಿವಿಧ ಕಡೆಗಳಲ್ಲಿ 13 ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಉತ್ತಮವಾಗಿದೆ. ಕರ್ನಾಟಕವು ದೇಶದಲ್ಲೇ ಶಾಂತಿಯುತ ರಾಜ್ಯ ಎಂದು ಖ್ಯಾತಿ ಗಳಿಸಿದೆ. ಅಲ್ಲದೇ, ಹೂಡಿಕೆಯ ನೆಚ್ಚಿನ ತಾಣವೂ ಆಗಿದೆ. ಆದ್ದರಿಂದ ಹೂಡಿಕೆದಾರರು ನಮ್ಮ ರಾಜ್ಯದಲ್ಲಿ ಹೂಡಿಕೆ ಮಾಡಬೇಕು ಎಂದು ಮನವಿ ಮಾಡಿದರು.

‘ಬೆಂಗಳೂರು ನವೋದ್ಯಮಗಳ ರಾಜಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಮುಖ ನವೋದ್ಯಮಗಳ ಕಚೇರಿಗಳು ಇಲ್ಲಿವೆ. ಐಟಿ ಕಂಪನಿಗಳನ್ನು ಸೆಳೆಯುವಲ್ಲಿ ಸಿಲಿಕಾನ್ ಸಿಟಿಗೆ ಬೆಂಗಳೂರು ಪೈಪೋಟಿ ಒಡ್ಡುತ್ತಿವೆ. ಕೃತಕ ಬುದ್ಧಿಮತ್ತೆ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪ್ರಯೋಗಾಲಯಗಳು ಕರ್ನಾಟಕದಲ್ಲಿವೆ. 400 ಸಂಶೋಧನಾ ಕೇಂದ್ರಗಳಿದ್ದು, ಅವುಗಳಲ್ಲಿ 180 ವಿಶ್ವಮಟ್ಟದ ಸಂಶೋಧನಾ ಕೇಂದ್ರಗಳಾಗಿವೆ’ ಎಂದು ತಿಳಿಸಿದರು.

ಸಭೆಯಲ್ಲಿ ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಮಾತನಾಡಿದರು.

ಬಿಸಿಲು: ಶಾಲೆಗಳಿಗೆ ಹೊಸ ಮಾರ್ಗಸೂಚಿ

ನವದೆಹಲಿ (ಪಿಟಿಐ): ದೇಶದ ಹಲವು ಭಾಗಗಳಲ್ಲಿ ಬಿಸಿಲಿನ ಝಳ ಹೆಚ್ಚಾಗಿದ್ದು, ಗರಿಷ್ಠ ತಾಪಮಾನ ತಲುಪಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯ ಬುಧವಾರ ವಿದ್ಯಾರ್ಥಿಗಳ ಆರೋಗ್ಯ ದೃಷ್ಟಿಯಿಂದ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ಸಮವಸ್ತ್ರದಲ್ಲಿ ವಿನಾಯಿತಿ ನೀಡಲು ಸಲಹೆ ನೀಡಿದೆ.

ವಿದ್ಯಾರ್ಥಿಗಳು ಸಡಿಲವಾದ, ತಿಳಿ ಬಣ್ಣದ, ಹತ್ತಿ ತುಂಬು ತೋಳಿನ ಬಟ್ಟೆ, ಲೆದರ್ ಶೂ ಬದಲಿಗೆ ಕ್ಯಾನ್ವಾಸ್ ಶೂ, ಕುತ್ತಿಗೆ ಪಟ್ಟಿಗೆ (ಟೈ) ವಿನಾಯಿತಿ ನೀಡಬಹುದು ಎಂದು ತಿಳಿಸಲಾಗಿದೆ.

ಬೆಳಿಗ್ಗೆ 7 ಗಂಟೆಯಿಂದಲೇ ಶಾಲೆಗಳನ್ನು ತೆರೆದು ಮಧ್ಯಾಹ್ನದ ವೇಳೆಗೆ ತರಗತಿ ಕೊನೆಗೊಳಿಸಬಹುದು. ಕ್ರೀಡೆ ಸೇರಿದಂತೆ ಇತರೆ ಹೊರಾಂಗಣ ಚಟುವಟಿಕೆಗಳನ್ನು ಮುಂಜಾನೆಗೆ ಹೊಂದಾಣಿಕೆ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದೆ.

ಶಾಲಾ ವಾಹನಗಳಲ್ಲಿ ಆಸನ ಸಾಮರ್ಥ್ಯಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ತುಂಬಬಾರದು. ಕುಡಿಯುವ ನೀರು, ಪ್ರಥಮ ಚಿಕಿತ್ಸಾ ಕಿಟ್ ಲಭ್ಯವಿರಬೇಕು. ಶಾಲಾ ವಾಹನಗಳನ್ನು ನೆರಳಿನ ಪ್ರದೇಶದಲ್ಲಿಯೇ ನಿಲುಗಡೆ ಮಾಡಬೇಕು ಎಂದು ಸೂಚಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಇಲ್ಲಿ ಕೆಳಗೆ ವಿವರಿಸಲಾಗಿರುವ ಷೆಡ್ಯೂಲ್ ಪ್ರಾಪರ್ಟಿ ಅನ್ನು ಅದರ ಮಾಲೀಕರಾದ ಶ್ರೀ ತಿಮ್ಮಯ್ಯ ಬಿನ್ ಲೇಟ್ ಶ್ರೀ. ಮುನಿಯಪ್ಪ, ಶ್ರೀಮತಿ. ಗೌರಮ್ಮ ಕೋಂ. ಶ್ರೀ. ತಿಮ್ಮಯ್ಯ ಮತ್ತು ಶ್ರೀ. ಲಕ್ಷ್ಮೀನಾರಾಯಣ ಬಿನ್ ಶ್ರೀ ತಿಮ್ಮಯ್ಯ, ಎಲ್ಲರ ವಿಳಾಸ ನೆಲ್ಲೂರ್ ಗ್ರಾಮ, ಕೃಷ್ಣಾಗಿರಿ ಜಿಲ್ಲೆ, ಹೊಸೂರ್, ತಮಿಳುನಾಡು ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ, ಹಣಕಾಸು ಸಂಸ್ಥೆಗೆ ಅಥವಾ ಸಂಘಕ್ಕೆ ಯಾವುದೇ ಕ್ಲೇಮ್, ಹಕ್ಕು, ಚಾರ್ಜ್ ಅಥವಾ ಹಿತಾಸಕ್ತಿ ಇದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 10 ದಿನಗಳೊಳಗೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಪೂರಕ ದಾಖಲಾತಿಗಳ ಸಮೇತ ಸಲ್ಲಿಸುವುದು, ಇಲ್ಲವಾದಲ್ಲಿ ಉದ್ದೇಶಿತ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ. ನಿಗದಿತ ಕಾಲಾವಧಿಯ ನಂತರ ಸಂದಾಯವಾಗುವ ಯಾವುದೇ ಕ್ಲೇಮ್‌ಗಳು ನನ್ನ ಕಕ್ಷಿದಾರರಿಗೆ ಯಾವುದೇ ನಿರ್ಬಂಧಗಳನ್ನು ರೂಪಿಸುವುದಿಲ್ಲ ಮತ್ತು ನನ್ನ ಕಕ್ಷಿದಾರರು ಸದರಿ ಸ್ವತ್ತಿನ ಖರೀದಿ ಪ್ರಕ್ರಿಯೆಯನ್ನು ಮುಂದುವರಿಸುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಮಂಚನಹಳ್ಳಿ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೂರ್ವ ಬೆಂಗಳೂರು ವಿಳಾಸದ ಸರ್ವೆ ನಂ. 18/4 (ಹಳೆಯ ನಂ. 18/7) ರಲ್ಲಿ ಸ್ಥಿತಗೊಂಡಿರುವ 1 ಎಕರೆ 03 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಭೂಮಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವ : ಶ್ರೀ. ಸದಾಶಿವಯ್ಯನವರ ಜಮೀನು (ಸರ್ವೆ ನಂ. 147/2)
ಪಶ್ಚಿಮ : ಶ್ರೀ. ಕೃಷ್ಣಪ್ಪನವರ ಜಮೀನು (ಸರ್ವೆ ನಂ. 18/3)
ಉತ್ತರ : ರಸ್ತೆ
ದಕ್ಷಿಣ : ಕೆರೆ

ಪ್ರೇಮ್ ಸಾಯಿ
ಲಾ ಚೇಂಬರ್ಸ್ ಆಫ್ ಪ್ರೇಮ್ ಸಾಯಿ ಪರವಾಗಿ, ವಕೀಲರು ಮತ್ತು ಸಾಲಿಸಿಟರ್ಸ್, 707, 7ನೇ ಮಹಡಿ, ದೇವತಾ ಪ್ಲಾಜಾ, ರೆಸಿಡೆನ್ಸಿ ರಸ್ತೆ, ಬೆಂಗಳೂರು–25.

PUBLIC NOTICE

This is to inform you that, my client is intending to purchase the Schedule Property from its owners H.C. SOMANATH and H.C. HARSHAVARDHAN, both are Sons of Late H.G. Chinnappa residing in Bengaluru City, if any person(s) having any claims, right, title, interest in respect of the said Schedule Property by way of inheritance, minor claim, share, sale, mortgage, lien, gift, possession or encumbrance whatsoever over the Schedule Property may forward their objection to the undersigned in writing to the address given below within 10 (Ten) days from the date of publication of this notice, along with supporting documents failing which it will be deemed that there are no claims, right, title or interest by anybody and my clients will proceed with the completion of sale transaction presuming that there are no objection and will get register the absolute sale deed of the Schedule Property.

SCHEDULE PROPERTY

All that Piece and Parcel of the Property Bearing Municipal Khata No. 10/1 (Old No.13), Bearing PID No.28/159-10/1 now the Vacant space situated at D. Kashappa Lane, BVK Iyengar Road cross, Bengaluru-53, measuring East to West 18.6 Feet, North to South 18 Feet, Totally Measuring 334.80 Sq.Ft, with it all its Appurtenance thereto, Bounded on:
EAST by : Property Bearing Khata No. 10/4, **WEST by:** Property Bearing Khata No.7, **NORTH by :** Property Bearing Khata No.6/1 and **SOUTH by:** Property Bearing Khata No.7/2.

G.S. PATIL, Advocate
No. 16, Parkalmutt Building, Subhash Nagar, Dhanvanthri Road, Bengaluru-9. Mobile: 9844360619 / 8618186171

PUBLIC NOTICE
To Place your Classified Ads Contact:
9880856233

JOB OPPORTUNITIES

General

PROSPECTIVE CAREER, Retired, VRS, Professionals, Senior Citizens, Business People, Substantial Income. International Recognition. 97400-90431/ 8884445665

WANTED EXPERIENCED, Efficient Retired officials andEntrepreneurs Male /Female for INDIA'S MOST TRUSTED BRAND 9886326012

Hotel

REPUTED CATERING Company in Bengaluru OPERATION MANAGER- Male/ Female, experience in catering & kitchen management. MARKETING EXECUTIVE, STORE-KEEPER, KITCHEN MANAGER contact: 9900141311, 9008408811 Email: industrialcaterers@gmail.com

Teachers/ Professors

WISDOM/ TAWAKKAL International School, Want Female TEACHERS, CO-ORDINATORS for Mathematics Science Social English PT for Primary and High School. Walk-in Interview. Contact: 9141695454.

AUTOMOTIVE

Four Wheelers Selling

Tata

DAMAGED BY ACCIDENT.TATA TIAGO.XT1.2RTN 2021.Petrol KL-73.D4437.at KROPEX AUTO Singasandra. Hosur Road,for Sale.with.RC Quote.after inspection within Seven.days SampatSurveyor: 9900182098.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

BUILDERS ESSENTIAL

Water Proofing

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS.9448572697

REAL ESTATE SELLING

House

Nagarabhavi

NAGARABAVI 40X42 E/S Corner House Near BDA Complex 30X40 East Site Near Ambedkar College: 9449121380

PERSONAL

Change of Name

I, NADEEM AHMED, residing at No. 1635, 5th main, near ICICI Bank ATM, K.S. Town, Bangalore 560060, have changed my minor son's name from ABDUR REHMAN SHARIEF to ABDUR REHMAN SHARIEFF, vide affidavit dated 07.05.2022 before Notary Ravi, Bangalore. Henceforth he shall be known as ABDUR REHMAN SHARIEFF only.

I, ASHIKA GANGADHAR GURUMATH, residing at No. 357 4th main 14th cross Sadashivnagar Bangalore 560080, have changed my name to ASHIKA GURUMATH, vide affidavit dated 11.05.2022 before Notary J.M. Umesha Murthy, Bangalore. Henceforth I shall be called ASHIKA GURUMATH only

CHANGE OF NAME
I, CALEB FERNANDEZ Residing at No. 226, Wheeler Road Extension, Cooke Town, Bengaluru- 560084, have changed my name to CALEB D'COUTHO vide affidavit dated 05.05.2022, before Notary L.Gopalakrishna, Bangalore. Henceforth I shall be called CALEB D'COUTHO only.

RAJESHWAR YADAW, Brother/o, 14834619L NK/MT, VIJAY KUMAR YADAV, Vill- Padar Mithabel Chauri Chaura Gorakhpur Uttar Pradesh, changed name from RAJESHWAR YADAW to RAJESHWAR YADAV 09/05/2022, Notary K.V. Mani, Bangalore

I, STEPHEN KUMAR, R/o#22 28th cross Old Bagalur Layout St Thomas Town Post Bengaluru-84, have changed my name to KUMAR D. My D.O.B. is wrongly mentioned in Baptism Certificate as 28.12.1982, correct D.O.B. is 27.12.1981 vide affidavit dated 28.04.2022 before Notary Meer Hassan, Bengaluru.

I, VARSANTA, Spouse of No. 1291508 Rank Ex Late NK Name Kodanda residing at No. 70/1, Ground floor 3rd main road 3rd cross PrakashNagar Bangalore 560021. have changed my name VARSANTA to VASANTHA .K, affidavit dated 06.05.2022 before Notary Mahesha JJ, Bangalore.

Doctorate conferred

Dr J.Harsha, Director,
Central Water Commission, Bengaluru, has been conferred a Doctorate for his thesis titled, "An Integrated Study of Water Resources Management on Water Scarcity and Drought for a River Basin" by the Visvesvaraya Technological University, Belagavi, Karnataka. The thesis was carried on under the guidance of Dr. AS Ravikumar, Professor, and Head, Department of Civil Engineering, UVCE, and Dr. BL Shivakumar, Professor, RVCE, Bengaluru, Visvesvaraya Technological University.



UTTAM BISWAS, JC682039N, SUB/ASH Vill- Sarkarpara Gobardanga Barasat, 24 North Parganas, West Bengal, changed Daughter's name from PAYAL BISWAS to PAYEL BISWAS, 10/05/2022, Notary K.V. Mani, Bangalore

VIRENDRA YADAW, Father/o, 14834619L NK /MT, VIJAY KUMAR YADAV, Vill- Padar Mithabel Chauri Chaura Gorakhpur Uttar Pradesh, changed name from VIRENDRA YADAW to VIRENDRA YADAV 09/05/2022, Notary K.V. Mani Bangalore

I, POOJASHREE PRAMODH JAMI, D/o SRINIVAS MUJUMDAR M, R/o No. 90/14, 1st Cross, Vittalnagar West, Bangalore 560026 have changed my name to POOJASHREE MUJUMDAR. S vide affidavit dated 30/04/2022 before notary S. Venkatasubba Reddy, Bangalore

BENETHA DEVI W/o JC-674150H- Nb/Sub-A.N CHAUBEY R/a Karuna, Malahi, Sursand, Sitamarhi, Bihar changed name from BENETHA DEVI to BINITA DEVI notary K.V.Mani Bangalore.

VIJAY KUMAR YADAW, 14834619L, NK /MT, Vill- Padar Mithabel Chauri Chaura Gorakhpur Uttar Pradesh, changed name from VIJAY KUMAR YADAW to VIJAY KUMAR YADAV, 09/05/2022, Notary K.V. Mani, Bangalore

SANJAI KUMAR PANDEY, JC821002A, SUB/ASH, Vill- Jokaha, Sukrauli Chaudhary, Harraiya Basti, Uttar Pradesh changed name from SANJAI KUMAR PANDEY to SANJAY KUMAR PANDEY 11/05/2022, Notary K.V. Mani, Bangalore

I, MR. HAYAKA BABU, S/o Haid Khan, Residing at #427, Ganigara Street, KEB Road, Kadugodi, Bangalore- 560067, have changed my Name to GAIBU KHAN, vide Affidavit dated 11-05-2022, sworn before NOTARY VEENA .J, BANGALORE.

I, MOHAMMED KHALEEM ISMAIL S/o Late. Mohammed Ismail, R/at No.53, 59th B Cross, 4th N Block, Rajajinagar, Bangalore- 560010 have changed my name to MOHAMMED KALEEM vide affidavit dated: 11/5/2022 Before Notary C.K.Anupama Bangalore.

I,RAJESH.N S/O T K Narashimha Shetty, R/at #174,1st Floor,4th Main,Mallathahalli Lake,ITI Layout Behind SBI Bank,Mallathahalli, Bangalore-560056, Have Changed My Name to Arun Vide Affidavit Dated 09-05-2022 Before Notary H R Karunakara, Bengaluru

SMT G HEMALATA, Wife/o 6492563W HAV, GURUBELLI SRINIVASA RAO, Vill- Tatitoru, Tagarapovalasa Bheemili Visakhapatnam, Andhra Pradesh, changed name from SMT G HEMALATA to GURUBELLI HEMA LATHA, 11/05/2022 Notary K.V. Mani, Bangalore

M MAHESWARI Wife/o 14828637X, HAV/MT, MUTHUK KUMAR M, Vill- Mudukkumeendanpatti Nalattinpudur Kovilpatti Tuticorin, Tamil Nadu, changed name from M MAHESWARI to P MAHESWARI 10/05/2022, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ನೇಮಕಾತಿ ವಿಭಾಗದ ಮತ್ತಷ್ಟು ಸಿಬ್ಬಂದಿ ವಿಚಾರಣೆ ಸಾಧ್ಯತೆ

ಪರೀಕ್ಷೆಗೂ ಮುನ್ನ ವಾಟ್ಸ್‌ಆ್ಯಪ್ ಕರೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಂಧಿತರಾಗಿರುವ ಆರೋಪಿಗಳು, ಪರೀಕ್ಷೆ ಆರಂಭಕ್ಕೆ ಕೆಲ ಗಂಟೆಗಳ ಮುಂಚಿತವಾಗಿ ಅಕ್ರಮದಲ್ಲಿ ಭಾಗಿಯಾಗುವ ಅಭ್ಯರ್ಥಿಗಳಿಗೆ ವಾಟ್ಸ್‌ಆ್ಯಪ್ ಕರೆ ಮಾಡಿ ಕೆಲ ಸೂಚನೆಗಳನ್ನು ನೀಡುತ್ತಿದ್ದರು ಎಂಬುದು ಸಿಐಡಿ ತನಿಖೆಯಿಂದ ಗೊತ್ತಾಗಿದೆ.

'150 ಪ್ರಶ್ನೆಗಳ ಪೈಕಿ ಇಂತಿಷ್ಟೇ ಪ್ರಶ್ನೆಗಳಿಗೆ ಉತ್ತರಿಸುವಂತೆ ಆರೋಪಿಗಳು ಅಭ್ಯರ್ಥಿಗಳಿಗೆ ತಾಕೀತು ಮಾಡುತ್ತಿದ್ದರು. ಇಷ್ಟೇ ಸಮಯದ ನಂತರ ಒಎಂಆರ್ ಶೀಟ್‌ನೊಂದಿಗೆ ಪರೀಕ್ಷಾ ಕೇಂದ್ರದಿಂದ ಹೊರಬರಬೇಕೆಂದೂ ನಿರ್ದೇಶಿಸುತ್ತಿದ್ದರು. ಭದ್ರತಾ ಸಿಬ್ಬಂದಿಯ ನೆರವಿನಿಂದ 'ಸ್ಟ್ರಾಂಗ್ ರೂಂ'ನಲ್ಲೇ ಒಎಂಆರ್ ಶೀಟ್‌ಗಳನ್ನು ತಿದ್ದುತ್ತಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

ತೀವ್ರಗೊಂಡ ವಿಚಾರಣೆ: ಪ್ರಕರಣ ಸಂಬಂಧ ನೇಮಕಾತಿ ವಿಭಾಗದ ನೌಕರರು ಸೇರಿ ಒಟ್ಟು 6 ಜನರನ್ನು ಮಂಗಳವಾರ ಬಂಧಿಸಿದ್ದ ಸಿಐಡಿ ಅಧಿಕಾರಿಗಳು ಇವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

'ಬಂಧಿತರ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಅವರು ಯಾರೊಂದಿಗೆ ಸಂಪರ್ಕದಲ್ಲಿದ್ದರು, ಅಕ್ರಮದಲ್ಲಿ ಇವರ ಪಾತ್ರ ಏನು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ನೇಮಕಾತಿ ವಿಭಾಗದ ಮತ್ತಷ್ಟು ಸಿಬ್ಬಂದಿ ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆ ಇದೆ. ಈ ಕುರಿತು ಅಗತ್ಯ ಪುರಾವೆಗಳನ್ನು ಕಲೆಹಾಕಲಾಗುತ್ತಿದೆ. ಪೂರಕ ಸಾಕ್ಷ್ಯಗಳು ದೊರೆತ ಕೂಡಲೇ ಅವರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಮಧ್ಯವರ್ತಿ ಶರತ್, ಅಭ್ಯರ್ಥಿಗಳೊಂದಿಗೆ ವ್ಯವಹಾರ ಕುದುರಿಸುತ್ತಿದ್ದ. ಭದ್ರತೆಗೆ ನಿಯೋಜನೆಯಾಗಿದ್ದ ನಗರ ಸಶಸ್ತ್ರ ಮೀಸಲು ಪಡೆಯ ಸಬ್‌ಇನ್‌ಸ್ಪೆಕ್ಟರ್ ಮಂಜುನಾಥ್ ಸೇರಿದಂತೆ ಇತರರು ಅಕ್ರಮ ನಡೆಸಲು ಆತನಿಗೆ ಸಹಕಾರ ನೀಡುತ್ತಿದ್ದರು ಎಂಬುದು ವಿಚಾರಣೆಯಿಂದ ಗೊತ್ತಾಗಿದೆ' ಎಂದೂ ಹೇಳಿವೆ.

ಅಕ್ರಮ ಸಾಬೀತಾದರೆ ಸಿಬ್ಬಂದಿ ವಜಾ

'ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಹಲವು ಪೊಲೀಸ್ ಸಿಬ್ಬಂದಿಯ ಹೆಸರು ಕೇಳಿಬಂದಿದೆ. ಆರೋಪಿತರನ್ನೆಲ್ಲಾ ಅಮಾನತು ಮಾಡಲಾಗಿದೆ' ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದ್ದಾರೆ.

'ಸಿಬ್ಬಂದಿ ಮೇಲಿನ ಆರೋಪ ಸಾಬೀತಾದರೆ ಅವರನ್ನು ಕೆಲಸದಿಂದಲೇ ವಜಾ ಮಾಡಲಾಗುತ್ತದೆ' ಎಂದೂ ಹೇಳಿದ್ದಾರೆ.

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣ

12 ಜನರ ಜಾಮೀನು ಅರ್ಜಿ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಂಧಿತ ದಿವ್ಯಾ ಹಾಗರಗಿ ಪತಿ ರಾಜೇಶ್ ಹಾಗರಗಿ ಸೇರಿ 12 ಆರೋಪಿಗಳು ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ಇಲ್ಲಿನ ಮೂರನೇ ಜೆಎಂಎಫ್ ನ್ಯಾಯಾಲಯ ಹಾಗೂ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳು ಬುಧವಾರ ತಿರಸ್ಕರಿಸಿವೆ.

ಸೋಮವಾರ ವಿಚಾರಣೆ ನಡೆಸಿದ್ದ ಮೂರನೇ ಜೆಎಂಎಫ್ ನ್ಯಾಯಾಲಯದ ನ್ಯಾಯಾಧೀಶ ಬಸವರಾಜ ನೇಸರಗಿ ಅವರು ಬುಧವಾರಕ್ಕೆ ತೀರ್ಪನ್ನು ಕಾಯ್ದಿರಿಸಿದ್ದರು.

ಜಾಮೀನು ನೀಡಿದರೆ ವಿಚಾರಣೆಗೆ ಹಿನ್ನಡೆಯಾಗಲಿದ್ದು, ಹೊರಬಂದ ಬಳಿಕ ಆರೋಪಿಗಳು ಸಾಕ್ಷ್ಯ ನಾಶಕ್ಕೆ ಯತ್ನಿಸುವ ಸಾಧ್ಯತೆ ಇದೆ ಎಂದು ಸಿಐಡಿ ಪರ ವಕೀಲ, ಸಹಾಯಕ ಸರ್ಕಾರಿ ಅಭಿಯೋಜಕ ಶಿವಶರಣಪ್ಪ ಹೋತಪೇಟ ಅವರು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರು.

ಇದನ್ನು ಪರಿಗಣಿಸಿದ ನ್ಯಾಯಾಧೀಶರು ಆರೋಪಿಗಳಾದ ಮಹಾಂತೇಶ ಪಾಟೀಲ, ಹಯ್ಯಾಳಿ ನಿಂಗಣ್ಣ ದೇಸಾಯಿ, ರುದ್ರಗೌಡ ಬಲರಾಯಪ್ಪ, ಶರಣಪ್ಪ ಬೋರಗಿ, ವಿಶಾಲ ಬಸವರಾಜ ಶಿರೂರ, ಮಲ್ಲಿಕಾರ್ಜುನ ಮೇಳಕುಂದಿ, ದಿವ್ಯಾ ಅವರಿಗೆ ಆಶ್ರಯ ನೀಡಿದ ಮಹಾರಾಷ್ಟ್ರದ ಸುರೇಶ ಕಾಟೆಗಾಂವ, ಕಾಳಿದಾಸ ಹಾಗೂ ದಿವ್ಯಾ ಕಾರು ಚಾಲಕ ಸದ್ದಾಂಗೆ ಜಾಮೀನು ತಿರಸ್ಕರಿಸಿದರು.

ಇತರ ಮೂವರು ಆರೋಪಿಗಳಾದ ರಾಜೇಶ್ ಹಾಗರಗಿ, ಅಭ್ಯರ್ಥಿ ಪ್ರವೀಣಕುಮಾರ್ ಹಾಗೂ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಶಿಕ್ಷಕಿ ಸುಮಾ ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಶುಕ್ಲಾಕ್ಷ ಪಾಲನ್ ಅವರು ಎಲ್ಲ ಮೂವರ ಅರ್ಜಿಗಳನ್ನು ತಿರಸ್ಕರಿಸಿದರು.

ಸಿಐಡಿ ಪರವಾಗಿ ಒಂದನೇ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಎಸ್.ಆರ್.ನರಸಿಂಹಲು ಹಾಜರಿದ್ದರು.

ದಿವ್ಯಾ ಬಳಸಿದ್ದ ಮೊಬೈಲ್ ಪತ್ತೆ

ಪಿಎಸ್‌ಐ ಅಕ್ರಮ ನೇಮಕಾತಿ ವೇಳೆ ದಿವ್ಯಾ ಹಾಗರಗಿ ಬಳಸಿದ್ದ ಮೊಬೈಲ್ ಫೋನನ್ನು ಸಿಐಡಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಮಹಾರಾಷ್ಟ್ರದಲ್ಲಿ ಬಂಧನದ ವೇಳೆ ಹಳೆಯ ಮೊಬೈಲ್ ಫೋನ್ ಸಿಕ್ಕರೆ ಎಲ್ಲ ಮಾಹಿತಿ ಹೊರಬೀಳಲಿದೆ ಎಂದು ಗಾಬರಿಯಿಂದ ಮೊಬೈಲ್ ಬಿಸಾಕಿದ್ದರು. ಆದರೆ, ಧಾವಂತದಲ್ಲಿ ಬಿಸಾಕಿದ್ದ ಮೊಬೈಲ್‌ಅನ್ನು ಆಗಷ್ಟೇ ಖರೀದಿಸಿದ್ದರು. ಹಳೆಯ ಮೊಬೈಲ್ ಇವರ ಬಳಿಯೇ ಇತ್ತು. ಅದನ್ನು ವಶಪಡಿಸಿಕೊಂಡಿರುವ ಅಧಿಕಾರಿಗಳು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಿದ್ದಾರೆ.

ಬಂಧಿತ ವೈಜನಾಥ ಪತ್ನಿ ಜೈಲರ್: ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಬಂಧಿತ, ಪ್ರಸ್ತುತ ಸಿಐಡಿ ವಶದಲ್ಲಿರುವ 6ನೇ ಕೆಎಸ್‌ಆರ್‌ಪಿ ಬಟಾಲಿಯನ್‌ನ ಸಹಾಯಕ ಕಮಾಂಡೆಂಟ್ ವೈಜನಾಥ ರೇವೂರನ ಪತ್ನಿ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಜೈಲರ್ ಆಗಿದ್ದಾರೆ.

ಜ್ಯೋತಿ ಪಾಟೀಲ ಅಮಾನತು

ಶಹಾಬಾದ್: ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಬಂಧನಕ್ಕೊಳಗಾದ ಇಲ್ಲಿನ ನಗರಸಭೆಯ ದ್ವಿತೀಯ ದರ್ಜೆ ಸಹಾಯಕಿ (ಎಸ್‌ಡಿಎ) ಜ್ಯೋತಿ ಪಾಟೀಲ ಅವರನ್ನು ಅಮಾತುಗೊಳಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.



ಜ್ಯೋತಿ ಪಾಟೀಲ

ಕಾಂಗ್ರೆಸ್ ಉಚ್ಚಾಟಿತ ಮುಖಂಡ ಶರತ್ ರಾಮಣ್ಣ ಬಂಧನ

ಮಂಡ್ಯ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗಮಂಗಲದ ಉದ್ಯಮಿ ಶರತ್ ರಾಮಣ್ಣ ಅವರನ್ನು ಸಿಐಡಿ ಪೊಲೀಸರು ಸೋಮವಾರ ರಾತ್ರಿ ಬಂಧಿಸಿ, ಬೆಂಗಳೂರಿಗೆ ಕರೆದೊಯ್ದಿದ್ದಾರೆ.

'ಹಾಸನ ಜಿಲ್ಲೆಯ ಶ್ರವಣಬೆಳಗೊಳ ಮೂಲದ ವ್ಯಕ್ತಿಯೊಬ್ಬರಿಂದ ₹40 ಲಕ್ಷ ಪಡೆದ ಆರೋಪದಡಿ ಅವರನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಎಂ.ಟೆಕ್ ಪದವೀಧರರಾಗಿರುವ ಅವರು ಚಲನಚಿತ್ರ ನಿರ್ಮಾಣದಲ್ಲೂ ತೊಡಗಿದ್ದು, ಹಣಕಾಸು ವಹಿವಾಟು ನಡೆಸುತ್ತಿದ್ದರು. ನಾಗಮಂಗಲ ಪುರಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದರು.



ಶರತ್ ರಾಮಣ್ಣ

ಲೋಕಸಭಾ ಚುನಾವಣೆಯಲ್ಲಿ ಸುಮಲತಾ ಪರವಾಗಿ ಪ್ರಚಾರ ನಡೆಸಿದರೆಂಬ ಕಾರಣಕ್ಕೆ ಕಾಂಗ್ರೆಸ್‌ನಿಂದ ಅವರನ್ನು ಉಚ್ಚಾಟನೆ ಮಾಡಲಾಗಿತ್ತು. ನಾಗಮಂಗಲದಲ್ಲಿ ಅವರ ಒಡೆತನದ ವಾಣಿಜ್ಯ ಕಟ್ಟಡದಲ್ಲೇ ತಾಲ್ಲೂಕು ಕಾಂಗ್ರೆಸ್ ಕಚೇರಿ, ಕಾಂಗ್ರೆಸ್ ಮುಖಂಡ ಎನ್.ಚಲುವರಾಯಸ್ವಾಮಿ ಅವರ ಕಚೇರಿ ಇದೆ.

ಬಂಧಿತ ಆರೋಪಿ ಅಣ್ಣ ಆತ್ಮಹತ್ಯೆ

ಹೊಳೆನರಸೀಪುರ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ಸಂಬಂಧ ಬಂಧಿತರಾಗಿರುವ ಹೊಳೆನರಸೀಪುರದ ಅಭ್ಯರ್ಥಿ ಮನುಕುಮಾರ್ ಅವರ ಅಣ್ಣ ಗುಂಜೇವು ಗ್ರಾಮದ ವಾಸು (39) ಮಂಗಳವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಮ್ಮನ ಬಂಧನ ನಂತರ ವಾಸು, ಮಾನಸಿಕವಾಗಿ ನೊಂದಿದ್ದರು ಎನ್ನಲಾಗಿದೆ. ಪಿಎಸ್‌ಐ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮನುಕುಮಾರ್ 50ನೇ ರ‍್ಯಾಂಕ್ ಪಡೆದಿದ್ದರು. ತಮ್ಮ ಪಿಎಸ್‌ಐ ಆಗಲಿ ಎಂದು ಅವರು ಸಾಲ ಮಾಡಿ ಹಣ ನೀಡಿದ್ದರು ಎನ್ನಲಾಗಿದೆ.

ಕೋವಿಡ್ ಪಿಡುಗು ಸಂದರ್ಭದಲ್ಲಿ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ನೌಕರನಾಗಿ ಸೇರಿದ್ದ ಅವರನ್ನು ಇತ್ತೀಚೆಗೆ ವಜಾ ಮಾಡಲಾಗಿತ್ತು. 'ಕೆಲಸದಿಂದ ತೆಗೆದು ಹಾಕಿದ್ದಕ್ಕೆ ತೀವ್ರ ಮನನೊಂದಿದ್ದ. ಅದರಿಂದಲೇ ಸಾವಿನ ನಿರ್ಧಾರ ಮಾಡಿರಬಹುದು. ತಮ್ಮನ ಬಂಧನಕ್ಕೂ, ಅಣ್ಣನ ಆತ್ಮಹತ್ಯೆಗೂ ಸಂಬಂಧವಿಲ್ಲ. ಮಗನನ್ನು ಸಿಐಡಿ ಪೊಲೀಸರು ಮನೆಗೂ ಕರೆದುಕೊಂಡು ಬಂದಿದ್ದರು. ನಮ್ಮ ಪರಿಸ್ಥಿತಿ ನೋಡಿ ಲಕ್ಷಾಂತರ ರೂಪಾಯಿ ದುಡ್ಡು ಕೊಡುವ ಸ್ಥಿತಿಯಲ್ಲಿಲ್ಲ ಎಂದು ವಾಪಸ್ ಹೋದರು. ಏಳು ವರ್ಷದಿಂದ ಬೆಂಗಳೂರಿನಲ್ಲಿ ನೆಲೆಸಿದ್ದ ಮಗ ಪಿಎಸ್‌ಐ ಆಗಿದ್ದಾನೆಂಬುದೇ ಗೊತ್ತಿರಲಿಲ್ಲ' ಎಂದು ತಾಯಿ ಶಿವಮ್ಮ ತಿಳಿಸಿದರು.



ವಾಸು

'ಕೆಲಸ ಕಳೆದುಕೊಂಡ ಬಳಿಕ ಖಿನ್ನತೆಗೆ ಒಳಗಾಗಿ ವಾಸು ಮದ್ಯ ಸೇವಿಸುತ್ತಿದ್ದರು. ಸಹೋದರರ ಸಂಬಂಧ ಚೆನ್ನಾಗಿರಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಡಿಕೆಶಿ ಹೇಳಿಕೆಗೆ ರಮ್ಯಾ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಸ್ವಯಂ ರಕ್ಷಣೆಗಾಗಿ ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಅವರನ್ನು ಭೇಟಿಮಾಡಿದ್ದರು' ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಕಾಂಗ್ರೆಸ್‌ನ ಮಾಜಿ ಸಂಸದೆಯೂ ಆಗಿರುವ ಚಿತ್ರನಟಿ ರಮ್ಯಾ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ರಮ್ಯಾ

'ವಿವಿಧ ಪಕ್ಷಗಳ ನಾಯಕರು ಆಗಾಗ ಭೇಟಿಯಾಗುತ್ತಾರೆ. ಒಟ್ಟಿಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಹಲವು ನಾಯಕರ ಕುಟುಂಬಗಳ ನಡುವೆ ವೈವಾಹಿಕ ಸಂಬಂಧಗಳೂ ಇವೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್‌ನ ಕಟ್ಟಾಳು ಎಂ.ಬಿ. ಪಾಟೀಲ ಅವರ ಕುರಿತು ಹೀಗೆ ಹೇಳಿರುವುದು ನನಗೆ ಆಶ್ಚರ್ಯ ತಂದಿದೆ. ಪಕ್ಷವು ಒಗ್ಗಟ್ಟಿನಿಂದ ಚುನಾವಣೆ ಎದುರಿಸಬೇಕಲ್ಲವೆ' ಎಂದು ರಮ್ಯಾ ಬುಧವಾರ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

ಬಳಿಕ ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ವಿರುದ್ಧ ಕೆಲವರು ವಾಗ್ದಾಳಿ ನಡೆಸಿರುವ ಸಂದೇಶಗಳ ತುಣುಕುಗಳನ್ನೂ ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಅವರು, 'ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರಿಗೆ 'ಕಚೇರಿ'ಯಿಂದಲೇ ಈ ಸಂದೇಶಗಳನ್ನು ಕಳುಹಿಸಿ, ನನ್ನನ್ನು 'ಟ್ರೋಲ್' ಮಾಡುವಂತೆ ಸೂಚಿಸಲಾಗಿದೆ. ಸಮಸ್ಯೆಯಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ. ನನ್ನ ರಕ್ಷಣೆಯನ್ನು ನಾನೇ ಮಾಡಿಕೊಳ್ಳುತ್ತೇನೆ' ಎಂಬ ಟ್ವೀಟ್ ಮಾಡಿದ್ದಾರೆ. ಅದನ್ನು ಡಿ.ಕೆ. ಶಿವಕುಮಾರ್ ಅವರಿಗೂ 'ಟ್ಯಾಗ್' ಮಾಡಿದ್ದಾರೆ.

'ಶಿವಕುಮಾರ್ ಅವರೇ ನಿಮ್ಮನ್ನು ಪಕ್ಷಕ್ಕೆ ಪರಿಚಯಿಸಿ, ಅವಕಾಶ ಮಾಡಿಕೊಟ್ಟವರು. ಮಂಡ್ಯದಿಂದ ರಾತ್ರಿ ಪಲಾಯನ ಮಾಡಿದ ಮಾಜಿ ಸಂಸದರೇ ಈಗ ಏಕಾಏಕಿ ಕಾಂಗ್ರೆಸ್ ಪಕ್ಷ ಮತ್ತು ನಾಯಕರ ಮೇಲೆ ನಿಮಗೆ ಪ್ರೀತಿ ಬಂದಿದ್ದು ಏಕೆ' ಎಂಬ ಪ್ರಶ್ನೆಗಳು ಅವರು ಹಂಚಿಕೊಂಡಿರುವ ಸಂದೇಶಗಳಲ್ಲಿವೆ.

'ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ್ದೆ'

'ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಎಂ.ಬಿ. ಪಾಟೀಲರ ನಿವಾಸಕ್ಕೆ ಭೇಟಿನೀಡಿದ್ದಾರೆ ಎಂದು ಪತ್ರಕರ್ತರು ಬಂದು ನನ್ನ ಬಳಿ ಪ್ರತಿಕ್ರಿಯೆ ಕೇಳಿದ್ದರು. ಅವರ ಪ್ರಶ್ನೆಗಳಿಗೆ ನಾನು ಆ ರೀತಿ ಪ್ರತಿಕ್ರಿಯೆ ನೀಡಿದ್ದೆ. ಉಳಿದಂತೆ ಬೇರೇನೂ ಗೊತ್ತಿಲ್ಲ. ಈಗ ಆ ವಿಚಾರದ ಬಗ್ಗೆ ಚರ್ಚೆ ಬೇಡ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತ ಪ್ರಶ್ನೆಗೆ ಉತ್ತರಿಸಿದರು.

ಏಳು ಸಾಧಕರಿಗೆ ಮಾಸ್ತಿ ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್ ವತಿಯಿಂದ ನೀಡಲಾಗುವ 2022ನೇ ಸಾಲಿನ ಮಾಸ್ತಿ ಪ್ರಶಸ್ತಿಗೆ ಏಳು ಸಾಧಕರು ಆಯ್ಕೆಯಾಗಿದ್ದಾರೆ.

ನಾಡಿನ ಖ್ಯಾತ ಸಾಹಿತಿಗಳಾದ ಡಾ.ಕೆ.ವಿ. ನಾರಾಯಣ (ಭಾಷಾ ವಿಜ್ಞಾನ), ಡಾ.ಓ.ಎಲ್. ನಾಗಭೂಷಣಸ್ವಾಮಿ (ಅನುವಾದ), ಶಶಿಕಲಾ ವಸ್ತ್ರದ (ಕಾವ್ಯ), ರಾಘವೇಂದ್ರ ಪಾಟೀಲ (ಕಥೆ), ಚಂದ್ರಶೇಖರ ನಂಗಲಿ (ವಿಮರ್ಶೆ) ಹಾಗೂ ಹುಣಸವಾಡಿ ರಾಜನ್ (ಪತ್ರಿಕೋದ್ಯಮ), 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ (ಅಂಕಣ ಸಾಹಿತ್ಯ) ಅವರಿಗೆ ಕನ್ನಡ ಸಾಹಿತ್ಯ ಕ್ಷೇತ್ರದ ಪ್ರತಿಷ್ಠಿತ ಮಾಸ್ತಿ ಪ್ರಶಸ್ತಿ ಸಂದಿದೆ ಎಂದು ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ತಿಳಿಸಿದ್ದಾರೆ.

ಪ್ರಶಸ್ತಿಯು ಫಲಕ ಮತ್ತು ₹25 ಸಾವಿರ ನಗದು ಒಳಗೊಂಡಿದೆ. ಆಯ್ಕೆ ಸಮಿತಿಯಲ್ಲಿ ಅಧ್ಯಕ್ಷರಾಗಿ ಮಾವಿನಕೆರೆ ರಂಗನಾಥನ್, ಸದಸ್ಯರಾಗಿ ಪ್ರೊ. ಎಂ.ಎಚ್. ಕೃಷ್ಣಯ್ಯ, ಜಿ.ಎನ್. ರಂಗನಾಥರಾವ್, ಬಿ.ಆರ್. ಲಕ್ಷ್ಮಣರಾವ್, ಬಿ.ಎಸ್. ವೆಂಕಟಾಚಲಪತಿ, ಕೆ. ರಮೇಶ್, ಉಷಾ ಕೇಸರಿ ಹಾಗೂ ಸದಸ್ಯ ಕಾರ್ಯದರ್ಶಿ ಎನ್. ನರೇಂದ್ರ ಬಾಬು ಇದ್ದರು.


ಜೂನ್ 18ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.



ಕೆ.ವಿ. ನಾರಾಯಣ




ನಾಗಭೂಷಣ ಸ್ವಾಮಿ




ಶಶಿಕಲಾ ವಸ್ತ್ರದ




ರಾಘವೇಂದ್ರ ಪಾಟೀಲ



ಡಾ.ಚಂದ್ರಶೇಖರ ನಂಗಲಿ



ಹುಣಸವಾಡಿ ರಾಜನ್



ರವೀಂದ್ರ ಭಟ್ಟ

ನಿಧನ ವಾರ್ತೆ

ಶಂಕರನಾರಾಯಣ



ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ, ಜಾನಪದ ವಿದ್ವಾಂಸ ಡಾ.ತೀ.ನಾ. ಶಂಕರನಾರಾಯಣ (80) ಬುಧವಾರ ನಿಧನರಾದರು.

ಮೂಲತಃ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ತೀರ್ಥಪುರದ ಶಂಕರನಾರಾಯಣ ಅವರು ಕುವೆಂಪು ವಿ.ವಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ನಂತರ ಶಿವಮೊಗ್ಗದಲ್ಲೇ ನೆಲೆಸಿದ್ದರು. ಅವರು ಪ್ರಸಿದ್ಧ ಸಾಹಿತಿ ತೀ.ನಂ.ಶ್ರೀ ಅವರ ಮೊಮ್ಮಗ. ಶಿವಮೊಗ್ಗ ಕರ್ನಾಟಕ ಸಂಘದ ಅಧ್ಯಕ್ಷರಾಗಿ 2009–12ನೇ ಸಾಲಿನಲ್ಲಿ ಸೇವೆ ಸಲ್ಲಿಸಿದ್ದರು.

ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ಅಶೋಕನಗರದ ಮುಖ್ಯರಸ್ತೆಯ ಎಆರ್‌ಬಿ ಕಾಲೊನಿಯ ಅವರ ನಿವಾಸದಲ್ಲಿ ಮೃತರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಗುರುವಾರ ಸಂಜೆ ಬೆಂಗಳೂರಿನಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ನಾರಾಯಣ ಕೆ. ಉಚ್ಚಿಲ



ಮಂಗಳೂರು: ಸ್ವಾತಂತ್ರ್ಯ ಹೋರಾಟಗಾರ ನಾರಾಯಣ ಕೆ. ಉಚ್ಚಿಲ (104) ಗೋರಿಗುಡ್ಡೆಯ ತಮ್ಮ ಮಗಳ ಮನೆಯಲ್ಲಿ ಮಂಗಳವಾರ ನಿಧನರಾದರು. ಅವರಿಗೆ ನಾಲ್ವರು ಪುತ್ರಿಯರು, ಪುತ್ರ ಇದ್ದಾರೆ. ಬುಧವಾರ ಅಂತ್ಯ ಸಂಸ್ಕಾರ ನಡೆಯಿತು.

ಸೋಮೇಶ್ವರ ಉಚ್ಚಿಲದಲ್ಲಿ 1918ರ ಅ.26ರಂದು ಜನಿಸಿದ್ದ ನಾರಾಯಣ ಉಚ್ಚಿಲ ನಾಲ್ಕು ದಿನ ಮಾತ್ರ ಶಾಲೆಗೆ ಹೋದವರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ನಾರಾಯಣ ಉಚ್ಚಿಲ ಬ್ರಿಟಿಷ್ ಪೊಲೀಸರ ತಲೆಗೆ ಹೊಡೆದು ಜೀಪಿಗೆ ಬೆಂಕಿ ಇಟ್ಟು, ಸುಟ್ಟು ಹಾಕಿ ಭೂಗತರಾಗಿದ್ದರು.

ಅಕ್ರಮ: ಆರೋಪಪಟ್ಟಿಯಲ್ಲಿ ಹೆಸರು ಉಲ್ಲೇಖಿಸದಿರಲು ₹70 ಲಕ್ಷ ಲಂಚ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮಗಳಲ್ಲಿ ತನ್ನ ಹೆಸರು ಕೇಳಿಬಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುತ್ತಿದ್ದ ರುದ್ರಗೌಡ ಪಾಟೀಲ ಅಲಿಯಾಸ್ ಆರ್.ಡಿ.ಪಾಟೀಲ, ಅವರಿಗೆ ಹಣದ ಆಮಿಷ ಒಡ್ಡಿ ಪ್ರಕರಣ ಮುಚ್ಚಿಹಾಕಲು ಮುಂದಾಗುತ್ತಿದ್ದ ಎಂಬುದು ಗೊತ್ತಾಗಿದೆ.

ಪಿಎಸ್‌ಐ ನೇಮಕಾತಿ ಅಕ್ರಮದ ಪ್ರಮುಖ ಆರೋಪಿಯಾಗಿರುವ ಅವರು ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ (ಎಇ) ಹಾಗೂ ಕಿರಿಯ ಎಂಜಿನಿಯರ್ (ಜೆಇ) ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲೂ ಅಕ್ರಮ ಎಸಗಿರುವ ಶಂಕೆ ವ್ಯಕ್ತವಾಗಿದೆ.

2021ರ ಡಿಸೆಂಬರ್ 14 ರಂದು ನಡೆದಿದ್ದ ಎಇ ಹಾಗೂ ಜೆಇ ನೇಮಕಾತಿ ಪರೀಕ್ಷೆಯಲ್ಲಿ ವೀರಣ್ಣಗೌಡ ಡಿ.ಚಿಕ್ಕೇಗೌಡ ಎಂಬಾತ 'ವಾಕಿಟಾಕಿ' ಬಳಸಿ ಉತ್ತರ ಬರೆಯುತ್ತಿದ್ದ. ಆತನನ್ನು ಬಂಧಿಸಿದ್ದ ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು, ತೀವ್ರ ವಿಚಾರಣೆ ನಡೆಸಿದ್ದರು. ಈ ಪ್ರಕರಣದಲ್ಲಿ ಆರ್.ಡಿ.ಪಾಟೀಲ ಕೂಡ ಭಾಗಿಯಾಗಿರುವುದು ತನಿಖೆಯಿಂದ ಗೊತ್ತಾಗಿತ್ತು.

'ಪ್ರಕರಣದ 7ನೇ ಆರೋಪಿಯಾಗಿರುವ ಪಾಟೀಲ ಅವರು ಚಾರ್ಜ್‌ಶೀಟ್‌ನಲ್ಲಿ ತಮ್ಮ ಹೆಸರು ಉಲ್ಲೇಖಿಸದಂತೆ ಅಧಿಕಾರಿಗಳಿಗೆ ₹70 ಲಕ್ಷ ಲಂಚ ನೀಡಿದ್ದರು. ಈ ವಿಷಯವನ್ನು ಸ್ನೇಹಿತರ ಬಳಿ ಹೇಳಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಪ್ರಭಾವಿ ವ್ಯಕ್ತಿಗಳು, ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳಷ್ಟೇ ಅಲ್ಲದೇ ಕಾನ್‌ಸ್ಟೆಬಲ್‌ಗಳ ಜೊತೆಗೂ ಇವರು ಉತ್ತಮ ಒಡನಾಟ ಹೊಂದಿದ್ದರು. ಅವರು ಕೇಳಿದಷ್ಟು ಹಣ ಕೊಟ್ಟು ಅಕ್ರಮ ನಡೆಸುತ್ತಿದ್ದರು. ಪ್ರಕರಣ ದಾಖಲಾದರೆ ಅದನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕುತ್ತಿದ್ದರು' ಎಂದೂ ಹೇಳಿವೆ.

10 ದಿನ ಪೊಲೀಸ್ ಸುಪರ್ದಿಗೆ

ಎಇ ಹಾಗೂ ಜೆಇ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದ ತನಿಖೆ ಚುರುಕುಗೊಳಿಸಿರುವ ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿತ ಆರೋಪಿ ಆರ್.ಡಿ.ಪಾಟೀಲ ಅವರನ್ನು ಬುಧವಾರ ತಮ್ಮ ಸುಪರ್ದಿಗೆ ಪಡೆದರು.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದ ಆರ್.ಡಿ.ಪಾಟೀಲ ಅವರನ್ನು ಮಂಗಳವಾರ ಬಾಡಿ ವಾರೆಂಟ್ ಮೂಲಕ ಕಲಬುರಗಿಯಲ್ಲಿ ಬಂಧಿಸಿದ್ದ ಪೊಲೀಸರು ಬುಧವಾರ ನಗರದ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

'ಪಾಟೀಲ ಅವರಿಂದ ಸಾಕಷ್ಟು ಮಾಹಿತಿ ಕಲೆಹಾಕಬೇಕಿದೆ. ಹೀಗಾಗಿ 14 ದಿನ ಸುಪರ್ದಿಗೆ ನೀಡುವಂತೆ ಮನವಿ ಮಾಡಿದ್ದೆವು. ನಮ್ಮ ಮನವಿ ಪುರಸ್ಕರಿಸಿರುವ ನ್ಯಾಯಾಲಯ 10 ದಿನ ವಶಕ್ಕೆ ನೀಡಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಜೂ 20ರಿಂದ ಆಮರಣ ಉಪವಾಸ'

ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ನೇತೃತ್ವ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಸೇಂದಿ ಮಾರಲು ಅವಕಾಶ, ಆರ್ಯ ಈಡಿಗ ಸಮುದಾಯಕ್ಕೆ ಪ್ರತ್ಯೇಕ ನಿಗಮ ಸ್ಥಾಪನೆ ಸೇರಿ ವಿವಿಧ ಬೇಡಿಕೆಗಳನ್ನು ರಾಜ್ಯ ಸರ್ಕಾರ ಜೂನ್ 20ರೊಳಗೆ ಈಡೇರಿಸದಿದ್ದರೆ, ಜಿಲ್ಲಾಧಿಕಾರಿ ಕಚೇರಿ ಎದುರು ಅಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು' ಎಂದು ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಎಚ್ಚರಿಕೆ ನೀಡಿದರು.



ಆರ್ಯ ಈಡಿಗ ಸಮುದಾಯದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹಮ್ಮಿಕೊಂಡಿದ್ದ ಪಾದಯಾತ್ರೆ ಬುಧವಾರ ಕಲಬುರಗಿ ತಲುಪಿತು

ಮೇ 5ರಂದು ಚಿಂಚೋಳಿಯಿಂದ ಆರಂಭಗೊಂಡ ಪಾದಯಾತ್ರೆಯು 151 ಕಿ.ಮೀ. ಕ್ರಮಿಸಿ ಬುಧವಾರ ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ತಲುಪಿ ಕೊನೆಗೊಂಡ ಸಂದರ್ಭದಲ್ಲಿ ಮಾತನಾಡಿದ ಅವರು, 'ಜೂನ್ 21ರಂದು ಕಲ್ಯಾಣ ಕರ್ನಾಟಕ ಪ್ರದೇಶದ ರಾಷ್ಟ್ರೀಯ ಹೆದ್ದಾರಿಗಳನ್ನು ತಡೆದು, ಪ್ರತಿಭಟಿಸಲಾಗುವುದು' ಎಂದರು.

'ನೀರಾ ಇಳಿಸಲು, ಬೇರೆ ರಾಜ್ಯಗಳಿಂದ ಸೇಂದಿ ತಂದು ಕರ್ನಾಟಕದಲ್ಲಿ ಮಾರಲು ಅವಕಾಶ ನೀಡಬೇಕು. ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರಿನಲ್ಲಿ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಿ, ನಿಗಮಕ್ಕೆ ₹ 500 ಕೋಟಿ ಅನುದಾನ ನೀಡಬೇಕು. ಸಮಾಜಕ್ಕೆ ಆಗಿರುವ ಅನ್ಯಾಯ ಸರಿಪಡಿಸಬೇಕು' ಎಂದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ ಮಾತನಾಡಿ, 'ಎಂಎಸ್‌ಐಎಲ್ ಮದ್ಯ ಮಾರಾಟ ಮಳಿಗೆ ಹೆಚ್ಚಿನ ಲೈಸೆನ್ಸ್ ಸಮುದಾಯದ ನಿರುದ್ಯೋಗಿ ಯುವಕರಿಗೆ ಕೊಡಬೇಕು. ಸೇಂದಿ ಮಾರಾಟ ನಿಷೇಧದಿಂದ ಸಂಕಷ್ಟಕ್ಕೆ ಸಿಲುಕಿದವರಿಗೆ ಪರ್ಯಾಯ ಉದ್ಯೋಗಾವಕಾಶ ಕಲ್ಪಿಸಬೇಕು' ಎಂದರು. ಜೆಡಿಎಸ್ ಮುಖಂಡ ಬಾಲರಾಜ ಗುತ್ತೇದಾರ, 'ಅಬಕಾರಿ ಇಲಾಖೆ ಕೊಟ್ಟ 12 ಸಾವಿರಕ್ಕೂ ಹೆಚ್ಚು ಲೈಸೆನ್ಸ್‌ಗಳ ಪೈಕಿ ಈಡಿಗ ಸಮುದಾಯಕ್ಕೆ 3 ಸಾವಿರ ಲೈಸೆನ್ಸ್ ನೀಡಲಾಗಿದೆ. ಸಮುದಾಯದವರಿಗೆ ಹೆಚ್ಚಿನ ಆದ್ಯತೆ ನೀಡಬೇಕು' ಎಂದರು.

5 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ

ಕಲಬುರಗಿ ಜಿಲ್ಲೆಯ ಚಿಂಚೋಳಿ, ಕಾಳಗಿ, ಸೇಡಂ, ಚಿತ್ತಾಪುರ, ಶಹಾಬಾದ್, ಅಫಜಲಪುರ, ಆಳಂದ ಸೇರಿ ವಿವಿಧ ತಾಲ್ಲೂಕುಗಳಿಂದ ಬಂದಿದ್ದ 5 ಸಾವಿರಕ್ಕೂ ಹೆಚ್ಚಿನ ಈಡಿಗ ಸಮುದಾಯದ ಮುಖಂಡರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸಮುದಾಯದ ಕುಲಗುರು ಬ್ರಹ್ಮಶ್ರೀ ನಾರಾಯಣಗುರುಗಳ ಭಾವಚಿತ್ರ ಸಹಿತ ಮೆರವಣಿಗೆ ನಡೆಯಿತು.

ಮತಾಂತರ ನಿಷೇಧಕ್ಕೆ ಸುಗ್ರೀವಾಜ್ಞೆ

ಒಂದನೇ ಪುಟದಿಂದ...

ಅವರು ಅಂಕಿತ ಹಾಕಿದ ತಕ್ಷಣವೇ ಮಸೂದೆಯಲ್ಲಿರುವ ಕ್ರಮಗಳನ್ನು ಜಾರಿಗೊಳಿಸಲು ಅವಕಾಶವಿದೆ' ಎಂದು ಗೃಹ ಇಲಾಖೆ ಮೂಲಗಳು ತಿಳಿಸಿವೆ.

'ರಾಜ್ಯ ವಿಧಾನಸಭೆ ಚುನಾವಣೆಗೆ ಕೇವಲ ಒಂದು ವರ್ಷವಷ್ಟೆ ಉಳಿದಿದ್ದು, ಜಾನುವಾರು ಹತ್ಯೆ ಪ್ರತಿಬಂಧಕ ಹಾಗೂ ಜಾನುವಾರು ಸಂರಕ್ಷಣಾ ಕಾಯ್ದೆಯಂತೆ (ಗೋಹತ್ಯೆ ನಿಷೇಧ), ಮತಾಂತರ ನಿಷೇಧ ಮಸೂದೆ ಕೂಡಾ ಪಕ್ಷದ ಪ್ರಮುಖ ಕಾರ್ಯಸೂಚಿ. ಮತಾಂತರ ನಿಷೇಧ ಕಾಯ್ದೆ ಜಾರಿ ವಿಳಂಬದ ಬಗ್ಗೆ ಪಕ್ಷದ ವೇದಿಕೆಗಳಲ್ಲಿ ಈಗಾಗಲೇ ಹಲವು ಬಾರಿ ಚರ್ಚೆಯಾಗಿದೆ. ಗೋ ಹತ್ಯೆ ನಿಷೇಧ ಕಾಯ್ದೆಯನ್ನು ಕೂಡಾ ಮೊದಲು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿ, ಬಳಿಕ ವಿಧಾನಮಂಡಲದ ಅಂಗೀಕಾರ ಪಡೆಯಲಾಗಿತ್ತು. ಅದೇ ರೀತಿ ಸುಗ್ರೀವಾಜ್ಞೆ ಮೂಲಕ ಮತಾಂತರ ನಿಷೇಧ ಕಾಯ್ದೆಯನ್ನೂ ಜಾರಿಗೊಳಿಸುವಂತೆ ಸಲಹೆ ನೀಡಲಾಗಿದೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರಸ್ತಾವಿತ ಕಾಯ್ದೆಯ ಪ್ರಮುಖ ಅಂಶ

ಆಮಿಷ, ಪ್ರಲೋಭನೆ, ಉದ್ಯೋಗ, ಉಚಿತ ಶಿಕ್ಷಣ, ನಗದು, ಮದುವೆ ಆಗುವುದಾಗಿ ವಾಗ್ದಾನ, ಉತ್ತಮ ಜೀವನ ಶೈಲಿಯ ಭರವಸೆ, ದೈವಿಕ ಸಂತೋಷ, ಒತ್ತಾಯ, ವಂಚನೆ ಮೂಲಕ ಮತಾಂತರ ಮಾಡುವುದನ್ನು ನಿಷೇಧಿಸುವ ಅಂಶ ಈ ಕಾಯ್ದೆಯಲ್ಲಿದೆ. ಯಾವುದೇ ಒಂದು ಧರ್ಮದ ಆಚರಣೆಗಳನ್ನು ಅವಹೇಳನ ಮಾಡುವುದನ್ನೂ ಆಮಿಷ ಎಂದೇ ಪರಿಗಣಿಸಲಾಗಿದೆ. ವ್ಯಕ್ತಿಯೊಬ್ಬ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರವಾದಾಗ ಮಾತ್ರ ಕಾಯ್ದೆ ಅನ್ವಯವಾಗಲಿದೆ. ಆದರೆ, ಯಾವುದೋ ಕಾರಣಕ್ಕೆ ಮತಾಂತರಗೊಂಡು, ಮರಳಿ ಮಾತೃಧರ್ಮಕ್ಕೆ ಬರುವುದಾದರೆ ಈ ಕಾಯ್ದೆ ಅನ್ವಯವಾಗುವುದಿಲ್ಲ. ಮತಾಂತರ ಮಾಡಿದರೆ ದಂಡ ಮತ್ತು ಜೈಲು ಶಿಕ್ಷೆ ವಿಧಿಸಲಾಗುತ್ತದೆ.

'ಸಚಿವ ಸಂಪುಟ ವಿಸ್ತರಣೆ ಸದ್ಯಕ್ಕಿಲ್ಲ'

ಒಂದನೇ ಪುಟದಿಂದ...

ಶಾ ಮತ್ತು ನಡ್ಡಾ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, ಸಂಪುಟ ವಿಸ್ತರಣೆ ವಿಚಾರಕ್ಕೆ ಸಂಬಂಧಿಸಿದಂತೆ ಯಾವಾಗ ಏನು ಬೇಕಾದರೂ ಆಗಬಹುದು.

ಶಾ ಅವರ ಜತೆ ರಾಜಕೀಯ ಸ್ಥಿತಿಗತಿ, ಸಚಿವ ಸಂಪುಟ, ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಆದೇಶದ ಪರಿಣಾಮಗಳು, ಚುನಾವಣಾ ಆಯೋಗ ಕೈಗೊಳ್ಳಬಹುದಾದ ತೀರ್ಮಾನ ಬಗ್ಗೆ ಚರ್ಚಿಸಲಾಯಿತು. ಮುಂದಿನ ಎರಡು ಮೂರು ದಿನಗಳ ರಾಜಕೀಯ ಬೆಳವಣಿಗೆ ಆಧಾರದ ಮೇಲೆ ನಿರ್ಣಯ ತಿಳಿಸುವುದಾಗಿ ಶಾ ಮತ್ತು ನಡ್ಡಾ ಹೇಳಿದ್ದಾರೆ ಎಂದರು.

ಮುಂಬರುವ ರಾಜ್ಯಸಭಾ, ವಿಧಾನಪರಿಷತ್, ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಬಗ್ಗೆಯೂ ವಿಸ್ತೃತವಾದ ಚರ್ಚೆ ನಡೆಸಲಾಯಿತು. ಒಟ್ಟಾರೆ ರಾಜಕೀಯ ಸ್ಥಿತಿಗತಿಗಳ ಆಧಾರದ ಮೇಲೆ ನಿರ್ಣಯಗಳು ಆಗುತ್ತವೆ. ರಾಜ್ಯದ ಸ್ಥಿತಿಗತಿಗಳನ್ನು ಅವರಿಗೆ ವಿವರಿಸಲಾಗಿದೆ. ಮುಂದಿನ ಒಂದು ವಾರ ಬಹಳ ಮುಖ್ಯ. ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ದೊಡ್ಡ ಪ್ರಮಾಣದ ಚುನಾವಣೆ ಇರುವುದರಿಂದ ಅದರ ಪರಿಣಾಮಗಳೇನು ಎಂಬುದನ್ನು ಅಧ್ಯಯನ ಮಾಡಿ ತಿಳಿಸುವುದಾಗಿ ಹೇಳಿದ್ದಾರೆ ಎಂದರು.

ಸಂಪುಟ ವಿಸ್ತರಣೆಯ ತೀರ್ಮಾನವಾದ ಮೇಲೆ ಅದರ ಸ್ವರೂಪ ಗೊತ್ತಾಗಲಿದೆ. ಸಂಪುಟಕ್ಕೆ ಸೇರ್ಪಡೆಯಾಗುವವರ ಹೆಸರು ಚರ್ಚೆಯಾಗಿಲ್ಲ. ಹೆಸರುಗಳನ್ನು ತೀರ್ಮಾನ ಮಾಡುವ ಸಂದರ್ಭ ಬರಲಿಲ್ಲ. ಒಟ್ಟಾರೆ ಸ್ಥಿತಿಗತಿಗಳು, ಅದರ ಆಧಾರದ ಮೇಲೆ ಸಚಿವ ಸಂಪುಟದ ವಿಸ್ತರಣೆ ಬಗ್ಗೆ ಮಾತ್ರ ಚರ್ಚೆಯಾಗಿದೆ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ಇತ್ತೀಚೆಗೆ ವಿಜಯನಗರದಲ್ಲಿ ನಡೆದ ಕಾರ್ಯಕಾರಿಣಿ ಸಮಿತಿ ಸಭೆಗೆ ಬಂದಾಗಲೂ ಜೆ.ಪಿ.ನಡ್ಡಾ ಅವರೊಂದಿಗೆ ಈ ಬಗ್ಗೆ ಚರ್ಚೆ ಮಾಡಿದ್ದೆವು. ಅಮಿತ್ ಶಾ ಮತ್ತ ನಡ್ಡಾ ಸೇರಿ ಒಂದು ತೀರ್ಮಾನ ಮಾಡುತ್ತಾರೆ ಎಂದರು.

ಅಗ್ರಹಾರ ಕೃಷ್ಣಮೂರ್ತಿ ಅಮಾನತು ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರ ಅಮಾನತು ಆದೇಶವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ವಾಪಸ್ ಪಡೆದಿದೆ. ಈ ಮೂಲಕ ಅವರಿಗೆ ನೀಡಬೇಕಾದ ವೇತನ ಬಾಕಿ, ನಿವೃತ್ತಿ ವೇತನ ಮತ್ತಿತರ ಸೌಲಭ್ಯಗಳನ್ನು ಕಾನೂನು ಪ್ರಕಾರ ನೀಡುವುದಾಗಿ ಆದೇಶ ಹೊರಡಿಸಿದೆ.

ಅಕಾಡೆಮಿ ಕಾರ್ಯದರ್ಶಿಯಾಗಿದ್ದ ಅಗ್ರಹಾರ ಕೃಷ್ಣಮೂರ್ತಿ ಅವರನ್ನು ಪಕ್ಷಪಾತ ಮತ್ತು ದುರುಪಯೋಗದ ಆಪಾದನೆಗಳನ್ನು ಹೊರಿಸಿ 2012ರ ಆಗಸ್ಟ್ 31ರಂದು ಅಕಾಡೆಮಿ ಅಮಾನತುಗೊಳಿಸಿತ್ತು. ತಮ್ಮ ಮೇಲಿನ ಆರೋಪಗಳು ಮತ್ತು ಅಮಾನತು ಆದೇಶವನ್ನು ರಾಜ್ಯ ಹೈಕೋರ್ಟ್‌ನಲ್ಲಿ ಅಗ್ರಹಾರ ಅವರು ಪ್ರಶ್ನಿಸಿದ್ದರು.

2013ರ ಜನವರಿ 31ಕ್ಕೆ ನಿವೃತ್ತಿಯಾಗುವವರಿದ್ದರು. ನಿವೃತ್ತಿಗೆ ಮುನ್ನ ಅಮಾನತುಗೊಳಿಸಿದ್ದರಿಂದ ಅವರ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯಲಾಗಿತ್ತು. ಕೃಷ್ಣಮೂರ್ತಿ ಅವರ ವಿರುದ್ಧ ಹೊರಿಸಿದ್ದ ಎಲ್ಲ ಆರೋಪಗಳು ನಿರಾಧಾರ ಎಂದು ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ಆರು ವರ್ಷಗಳ ಹಿಂದೆಯೇ ತೀರ್ಪು ನೀಡಿತ್ತು. ಈ ತೀರ್ಪು ಪ್ರಶ್ನಿಸಿ ಅಕಾಡೆಮಿಯು ದ್ವಿಸದಸ್ಯ ಪೀಠದ ಮುಂದೆ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು 2022ರ ಜನವರಿ 19ರಂದು ತಳ್ಳಿ ಹಾಕಿದ್ದ ನ್ಯಾಯಪೀಠವು, ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಎತ್ತಿಹಿಡಿದಿತ್ತು.

'ಆರೋಪಿಸಿದವರಲ್ಲಿ ಸಿದ್ದಲಿಂಗ ಪಟ್ಟಣಶೆಟ್ಟಿ ಪ್ರಮುಖರು'



'30 ವರ್ಷಗಳ ಕಾಲ ಸಂಸ್ಥೆಗೆ ದುಡಿದಿದ್ದೆ. ಚೆನ್ನೈನಲ್ಲಿದ್ದ ಪ್ರಾದೇಶಿಕ ಕಚೇರಿಯನ್ನು ಹೋರಾಟ ಮಾಡಿ ಬೆಂಗಳೂರಿಗೆ ತಂದಿದ್ದೆ. ನನ್ನ ವಿರುದ್ಧ ಆರೋಪ ಮಾಡಿದ 3–4 ಮಂದಿಯಲ್ಲಿ ಸಿದ್ದಲಿಂಗ ಪಟ್ಟಣಶೆಟ್ಟಿ ಅವರೇ ಪ್ರಮುಖರು. ಕನ್ನಡಿಗನ ವಿರುದ್ಧ ಕನ್ನಡಿಗರೇ ಆರೋಪ ಮಾಡಿದರು. ಆರೋಪ ಮಾಡಿದವರೇ ವಿಚಾರಣಾ ಸಮಿತಿ ಸದಸ್ಯರಾದರು. ಇದು ಅಸಂವಿಧಾನಿಕವಾಗಿತ್ತು. ನನ್ನನ್ನು ತಪ್ಪಿತಸ್ಥರನ್ನಾಗಿ ಮಾಡುವ ಹುನ್ನಾರ ಮಾಡಿದರು' ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಪ್ರತಿಕ್ರಿಯಿಸಿದರು.

'ಏಕಪಕ್ಷೀಯವಾಗಿ ಮನಬಂದಂತೆ ಅಕಾಡೆಮಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಹಣಕಾಸು ದುರುಪಯೋಗ ಮತ್ತು ಕನ್ನಡಿಗರ ಪರ ಕಾರ್ಯನಿರ್ವಹಿಸಿದ್ದೇನೆ ಎಂದು ಆರೋಪಿಸಲಾಗಿತ್ತು. ನನ್ನ ಜೂನಿಯರ್‌ಗಳ ಮುಂದೆ ವಿಚಾರಣೆ ಮಾಡಿ ಅವಮಾನ ಮಾಡಿದರು. ಸಮರ್ಥಿಸಿಕೊಳ್ಳುವ ಅವಕಾಶವನ್ನೇ ನೀಡಲಿಲ್ಲ. ಕಾರ್ಯದರ್ಶಿಯಾಗಿದ್ದಾಗ ಅರ್ಹ ಕನ್ನಡ ಸಾಹಿತಿಗಳ ಹೆಸರುಗಳ ಪಟ್ಟಿಯನ್ನು ಪದ್ಮಶ್ರೀಗೆ ಶಿಫಾರಸ್ಸು ಮಾಡಿದ್ದೆ' ಎಂದರು.

ಬೈಕ್‌ನಲ್ಲಿ ಶವ ಸಾಗಿಸುವಾಗ ಸಿಕ್ಕಿಬಿದ್ದ ಆರೋಪಿಗಳು

ಅಪಘಾತದಿಂದ ಬೆಳಕಿಗೆ ಬಂದ ಕೊಲೆ ಪ್ರಕರಣ!

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ತಡರಾತ್ರಿ ಸಂಭವಿಸಿದ ಬೈಕ್ ಅಪಘಾತದ ತನಿಖೆಯ ವೇಳೆ ಬೆಂಗಳೂರಿನಲ್ಲಿ ನಡೆದಿದ್ದ ಮಹಿಳೆಯೊಬ್ಬರ ಕೊಲೆ ರಹಸ್ಯ ಬಯಲಾಗಿದೆ.

ಬೆಂಗಳೂರಿನ ಶ್ವೇತಾ(24) ಕೊಲೆಯಾದವರು. ಹಣಕಾಸು ವಿಚಾರವಾಗಿ ಸ್ನೇಹಿತೆ ಶ್ವೇತಾರನ್ನು ಕೊಲೆಗೈದ ಬೆಂಗಳೂರಿನ ರಾಜರಾಜೇಶ್ವರಿ ನಗರದ ಮುತ್ತುರಾಯನ ನಗರ ನಿವಾಸಿ ದುರ್ಗಾ, ಆಕೆ ಪತಿ ರಘು, ಸ್ನೇಹಿತರಾದ ನಾಗರಾಜು ಹಾಗೂ ವಿನೋದ್ ಅವರನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ಅಭಿ ತಲೆಮರೆಸಿಕೊಂಡಿದ್ದು ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.



ಹತ್ಯೆಯಾದ ಶ್ವೇತಾ



ದುರ್ಗಾ



ರಘು



ನಾಗರಾಜು

ಕೊಲೆ ನಡೆದದ್ದು ಎಲ್ಲಿ?: ಶ್ವೇತಾ ಹಾಗೂ ದುರ್ಗಾ ನಡುವೆ ಹಣಕಾಸಿನ ವಿಚಾರವಾಗಿ ಸೋಮವಾರ ರಾತ್ರಿ ಜಗಳ ನಡೆದಿತ್ತು. ಈ ವೇಳೆ ದುರ್ಗಾ ಬಡಿಗೆಯಿಂದ ಶ್ವೇತಾಳ ಮೇಲೆ ಹಲ್ಲೆ ನಡೆಸಿದ್ದು, ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ದುರ್ಗಾ ತನ್ನ ಪತಿ ರಘುಗೆ ಈ ವಿಚಾರ ತಿಳಿಸಿದ್ದು, ಆತ ತನ್ನ ಸ್ನೇಹಿತ ಅಭಿ ಎಂಬಾತನನ್ನು ಸ್ಥಳಕ್ಕೆ ಕರೆಯಿಸಿದ್ದ. ಅಭಿ ಉಳಿದ ಇಬ್ಬರು ಆರೋಪಿಗಳನ್ನು ಕರೆಯಿಸಿಕೊಂಡು ಶವವನ್ನು ಚನ್ನಪಟ್ಟಣದ ಕೆರೆ ಇಲ್ಲವೇ ಶ್ರೀರಂಗಪಟ್ಟಣದ ಕಾವೇರಿ ನದಿ ಸೇತುವೆ ಕೆಳಗೆ ಎಸೆಯಲು ಯೋಜನೆ ರೂಪಿಸಿದ್ದರು.

ಅದರಂತೆ ಎರಡು ಬೈಕ್‌ಗಳಲ್ಲಿ ದುರ್ಗಾ, ರಘು ಹಾಗೂ ಅಭಿ ಹೊರಟರೆ ಮತ್ತೊಂದು ಬೈಕ್‌ನಲ್ಲಿ ಶ್ವೇತಾಳ ಶವದೊಂದಿಗೆ ನಾಗರಾಜು ಹಾಗೂ ವಿನೋದ್ ಹೊರಟಿದ್ದರು. ಈ ಇಬ್ಬರು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಬರುವಾಗ ರಾಮನಗರ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ರಸ್ತೆ ಉಬ್ಬಿನಲ್ಲಿ ಬೈಕ್ ಸ್ಕಿಡ್ ಆಗಿದೆ.

ಅಪಘಾತದ ವಿಷಯ ತಿಳಿದು ಸ್ಥಳಕ್ಕೆ ಬಂದ ಪೊಲೀಸರಿಗೆ ಬೈಕ್ ಡಿಕ್ಕಿ ಹೊಡೆದು ಮಹಿಳೆ ಮೃತಪಟ್ಟಿದ್ದಾಳೆ ಎಂದು ಆರೋಪಿಗಳು ನಂಬಿಸುವ ನಾಟಕವಾಡಿದ್ದಾರೆ. ಅನುಮಾನಗೊಂಡ ಪೊಲೀಸರು ಶವವನ್ನು ಜಿಲ್ಲಾ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ಕಳುಹಿಸಿದಾಗ ಕೊಲೆಯ ರಹಸ್ಯ ಬೆಳಕಿಗೆ ಬಂದಿದೆ.

'ಆಕೆ ಸತ್ತು ಅದಾಗಲೇ ಅರ್ಧ ದಿನ ಕಳೆದಿದೆ' ಎಂದು ವೈದ್ಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ಮಾಹಿತಿ ಆಧರಿಸಿ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಮಹಿಳೆಯ ಶವವನ್ನು ತಾವೇ ಬೈಕ್‌ನಲ್ಲಿ ಸಾಗಿಸುತ್ತಿದ್ದುದಾಗಿ ಬಾಯಿಬಿಟ್ಟಿದ್ದಾರೆ. ಅವರು ನೀಡಿದ ಮಾಹಿತಿ ಆಧರಿಸಿ ಉಳಿದ ಇಬ್ಬರು ಆರೋಪಿಗಳನ್ನು ಪೊಲೀಸರು ಚನ್ನಪಟ್ಟಣದಲ್ಲಿ ಬಂಧಿಸಿದ್ದಾರೆ.

ಲ್ಯಾಪ್‌ಟಾಪ್ ಖರೀದಿ: ಬಸವರಾಜ ರಾಯರಡ್ಡಿ ಆರೋಪ

₹ 100 ಕೋಟಿ ಅಕ್ರಮ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲು ಲ್ಯಾಪ್‌ಟಾಪ್ ಖರೀದಿಯಲ್ಲಿ ₹ 100 ಕೋಟಿಗೂ ಹೆಚ್ಚು ಭ್ರಷ್ಟಾಚಾರ ನಡೆದಿದ್ದು, ಇದರಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಶಾಮೀಲಾಗಿದ್ದಾರೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಬಸವರಾಜ ರಾಯರಡ್ಡಿ ಆರೋಪಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಾನು ಉನ್ನತ ಶಿಕ್ಷಣ ಸಚಿವನಾಗಿದ್ದೆ. ಆಗ ತಲಾ ₹ 14,490ರ ದರದಲ್ಲಿ 38,000 ಲ್ಯಾಪ್‌ಟಾಪ್ ಖರೀದಿಸಿದ್ದೆವು. ನಂತರ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಉನ್ನತ ಶಿಕ್ಷಣ ಸಚಿವರಾಗಿದ್ದ ಜಿ.ಟಿ. ದೇವೇಗೌಡ ಅದೇ ಲ್ಯಾಪ್‌ಟಾಪ್ ಅನ್ನು ತಲಾ 28,320ರ ದರದಲ್ಲಿ ಖರೀದಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದ್ದರು. ಆದರೆ, ಆಗ ಖರೀದಿಯಾಗಿರಲಿಲ್ಲ. ಬಿಜೆಪಿ ಸರ್ಕಾರ ಬಂದ ಬಳಿಕ ಅದೇ ದರದಲ್ಲಿ ಖರೀದಿಸಲಾಗಿದೆ' ಎಂದು ದೂರಿದರು.

'ಹಿಂದೆ ಖರೀದಿಸಿದ್ದ ಮಾದರಿಯ ಲ್ಯಾಪ್‌ಟಾಪ್ ಅನ್ನೇ ದುಪ್ಪಟ್ಟು ದರಕ್ಕೆ ಖರೀದಿಸಲು ಮುಂದಾಗಿರುವ ಕುರಿತು ಅಶ್ವತ್ಥ ನಾರಾಯಣ ಅವರಿಗೆ ಮಾಹಿತಿ ನೀಡಿದ್ದೆವು. ಅವರು ಅಕ್ರಮ ತಡೆಯಲಿಲ್ಲ. ₹ 159.26 ಕೋಟಿ ವೆಚ್ಚವಾಗುತ್ತಿದ್ದ ಯೋಜನೆಗೆ ₹ 311.28 ಕೋಟಿ ವೆಚ್ಚ ಮಾಡಲಾಗಿದೆ. ಇದರಲ್ಲಿ ₹ 100 ಕೋಟಿಗೂ ಹೆಚ್ಚು ಅಕ್ರಮ ನಡೆದಿದೆ' ಎಂದರು.

ಕೆಪಿಸಿಸಿ ವಕ್ತಾರ ರಮೇಶ್ ಬಾಬು ಮಾತನಾಡಿ, 'ಉನ್ನತ ಶಿಕ್ಷಣ ಇಲಾಖೆಯಲ್ಲಿ ಕಟ್ಟಡಗಳ ನಿರ್ಮಾಣ ಕಾಮಗಾರಿಗಳ ಟೆಂಡರ್‌ನಲ್ಲೂ ಅಕ್ರಮ ನಡೆದಿದೆ. ಸ್ಮಾರ್ಟ್ ತರಗತಿ ಕೊಠಡಿಗಳ ನಿರ್ಮಾಣಕ್ಕೆ ₹ 200 ಕೋಟಿ ವೆಚ್ಚ ಮಾಡಲಾಗಿದೆ. ಇದರಲ್ಲಿ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪ್ರದೀಪ್ ಕೂಡ ಭಾಗಿಯಾಗಿದ್ದಾರೆ. ಲೋಕಾಯುಕ್ತರಿಂದ ತನಿಖೆ ನಡೆಸಬೇಕು' ಎಂದರು.

'ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ಖರೀದಿ'

ಬೆಂಗಳೂರು: ತಲಾ ₹ 28,320ರ ದರದಲ್ಲಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ನಿರ್ಧಾರ ಕಾಂಗ್ರೆಸ್– ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ನಡೆದಿತ್ತು. ಆಗ ನಡೆದಿರಬಹುದಾದ ಅಕ್ರಮಗಳನ್ನು ಬಿಜೆಪಿ ಸರ್ಕಾರದ ತಲೆಗೆ ಕಟ್ಟಲು ಬಸವರಾಜ ರಾಯರಡ್ಡಿ ಯತ್ನಿಸುತ್ತಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಆರೋಪಿಸಿದ್ದಾರೆ.

ರಾಯರಡ್ಡಿ ಹೇಳಿಕೆ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, 'ಸಿದ್ದರಾಮಯ್ಯ ಸರ್ಕಾರದಲ್ಲಿ ಇವರು ಉನ್ನತ ಶಿಕ್ಷಣ ಸಚಿವರಾಗಿದ್ದರು. ನಂತರ ಬಂದ ಸಮ್ಮಿಶ್ರ ಸರ್ಕಾರ ಲ್ಯಾಪ್‌ಟಾಪ್ ಖರೀದಿಗೆ ದರ ನಿಗದಿ ಮಾಡಿತ್ತು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಪೂರೈಕೆ ಮತ್ತು ವಿತರಣೆ ಮಾತ್ರ ಆಗಿದೆ. ಕೋತಿ ತಾನು ಮೊಸರು ತಿಂದು ಮೇಕೆಯ ಗಡ್ಡಕ್ಕೆ ಒರೆಸಿದ ರೀತಿಯಲ್ಲಿ ಈ ವ್ಯಕ್ತಿ ಆರೋಪ ಮಾಡಿದ್ದಾರೆ' ಎಂದಿದ್ದಾರೆ.

ಬಿಜೆಪಿ ಸರ್ಕಾರದ ಮೇಲೆ ಕೆಸರೆರಚುವ ಭರದಲ್ಲಿ ರಾಯರಡ್ಡಿ ತಮ್ಮ ಪಕ್ಷ ಎಸಗಿರಬಹುದಾದ ಅಕ್ರಮಗಳನ್ನೇ ಬಯಲು ಮಾಡಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಲ್ಯಾಪ್‌ಟಾಪ್ ಬದಲಿಗೆ ಟ್ಯಾಬ್ ವಿತರಿಸಲಾಗಿದೆ. ಅಲ್ಲಿಯೂ ಅಕ್ರಮ ನಡೆದಿದೆ ಎಂಬರ್ಥದಲ್ಲಿ ರಾಯರಡ್ಡಿ ಆರೋಪಿಸಿರುವುದು ಉಡಾಫೆಯ ಪರಮಾವಧಿ ಎಂದು ಹೇಳಿದ್ದಾರೆ.

'ರಾಯರಡ್ಡಿ ಅವರಿಗೆ ನೈತಿಕ ಪ್ರಜ್ಞೆ ಇಲ್ಲ. ಅವರಿರುವ ಕಾಂಗ್ರೆಸ್ಸಿನ ನರನಾಡಿಗಳಲ್ಲೆಲ್ಲ ಭ್ರಷ್ಟಾಚಾರ ಹರಿಯುತ್ತಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ, ಸ್ವಾಯತ್ತತೆ ಎಲ್ಲವನ್ನೂ ತರಲಾಗಿದೆ' ಎಂದಿದ್ದಾರೆ.

ಡಿಜಿಪಿ ರಾಜೀನಾಮೆ ಅಂಗೀಕಾರ ಬೇಡ

ರವೀಂದ್ರನಾಥ್ ವಿಚಾರ: ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿ, ವಿಪಕ್ಷಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಪೊಲೀಸ್ ಮಹಾನಿರ್ದೇಶಕರ (ಡಿಜಿಪಿ) ಹುದ್ದೆಯಿಂದ ವರ್ಗಾವಣೆ ಮಾಡಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ ಐಪಿಎಸ್ ಅಧಿಕಾರಿ ಡಾ. ರವೀಂದ್ರನಾಥ್ ಸಲ್ಲಿಸಿರುವ ರಾಜೀನಾಮೆಯನ್ನು ಅಂಗೀಕರಿಸದಂತೆ ವಿಧಾನಮಂಡಲದ ಪರಿಶಿಷ್ಟ ಜಾತಿ (ಎಸ್‌ಸಿ) ಹಾಗೂ ಪರಿಶಿಷ್ಟ ಪಂಗಡಗಳ (ಎಸ್‌ಟಿ) ಕಲ್ಯಾಣ ಸಮಿತಿ ಮತ್ತು ವಿರೋಧ ಪಕ್ಷಗಳು ಆಗ್ರಹಿಸಿವೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರನ್ನು ಭೇಟಿಮಾಡಿದ ವಿಧಾನ ಮಂಡಲದ ಎಸ್‌ಸಿ ಮತ್ತು ಎಸ್‌ಟಿ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ನೇತೃತ್ವದ ನಿಯೋಗ, ರವೀಂದ್ರನಾಥ್ ರಾಜೀನಾಮೆಯನ್ನು ಅಂಗೀಕರಿಸಬಾರದು ಎಂದು ಒತ್ತಾಯಿಸಿತು. ಶಾಸಕರಾದ ಎನ್. ಮಹೇಶ್, ಪಿ. ರಾಜೀವ್, ಅಬ್ಬಯ್ಯ ಪ್ರಸಾದ್, ಪ್ರೊ. ಲಿಂಗಣ್ಣ ನಿಯೋಗದಲ್ಲಿದ್ದರು.

ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕುಮಾರಸ್ವಾಮಿ, 'ನಕಲಿ ಜಾತಿ ಪ್ರಮಾಣಪತ್ರಗಳನ್ನು ಪಡೆದು, ಸರ್ಕಾರಿ ನೌಕರಿ ಪಡೆದಿರುವ ಪ್ರಕರಣಗಳ ಕುರಿತು ನಮ್ಮ ಸಮಿತಿ ವಿಚಾರಣೆ ನಡೆಸುತ್ತಿದೆ. ಸಮಿತಿ ನಿರ್ಧಾರದಂತೆ ರವೀಂದ್ರನಾಥ್ ಅವರು ಕೆಲವರಿಗೆ ನೋಟಿಸ್ ಜಾರಿ ಮಾಡಿದ್ದರು. ಅವರ ವರ್ಗಾವಣೆ ಸರಿಯಲ್ಲ. ಅವರು ನೀಡಿರುವ ರಾಜೀನಾಮೆ ಅಂಗೀಕರಿಸದಂತೆ ಒತ್ತಾಯಿಸಿದ್ದೇವೆ. ರವೀಂದ್ರನಾಥ್ ರಾಜೀನಾಮೆ ಹಿಂಪಡೆಯುವುದಕ್ಕೆ ತಮ್ಮ ಅಭ್ಯಂತರವಿಲ್ಲ ಎಂಬುದಾಗಿ ಮುಖ್ಯ ಕಾರ್ಯದರ್ಶಿ ತಿಳಿಸಿದ್ದಾರೆ' ಎಂದರು.

ಗಣ್ಯ ವ್ಯಕ್ತಿ ರಕ್ಷಣೆಗೆ ಯತ್ನ: ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, 'ದಲಿತ ಸಮುದಾಯಕ್ಕೆ ಸೇರಿದ ದಕ್ಷ ಅಧಿಕಾರಿಯಾದ ರವೀಂದ್ರನಾಥ್ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರು. ನಕಲಿ ಜಾತಿ ಪ್ರಮಾಣಪತ್ರ ನೀಡಿ ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಂಡಿದ್ದ ದೊಡ್ಡ ತಿಮಿಂಗಲಗಳಿಗೆ ಬಲೆ ಹಾಕಿದ್ದರು. ಸರ್ಕಾರ ಹಾಗೂ ಸಮಾಜಕ್ಕೆ ವಂಚನೆ ಮಾಡಿದ್ದವರ ಜಾತಕ ಬಿಚ್ಚಿಡಲು ಪ್ರಯತ್ನ ಮಾಡುತ್ತಿದ್ದರು' ಎಂದು ಹೇಳಿದ್ದಾರೆ.

ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಗೃಹ ಸಚಿವರ ಸಲಹೆಗಾರರಾಗಿದ್ದ 'ಗಣ್ಯ ವ್ಯಕ್ತಿ'ಗೆ ನೋಟಿಸ್ ನೀಡಿದ ಬಳಿಕ ರವೀಂದ್ರನಾಥ್ ಅವರನ್ನು ಎತ್ತಂಗಡಿ ಮಾಡಲಾಗಿತ್ತು. ಇದು ಕಾಂಗ್ರೆಸ್–ಬಿಜೆಪಿ ನಡುವಿನ ಒಳ ಒಪ್ಪಂದಕ್ಕೆ ಸಾಕ್ಷಿ. ಸರ್ಕಾರದ ಧೋರಣೆಗೆ ಬೇಸತ್ತು ಅಧಿಕಾರಿ ಸಲ್ಲಿಸಿರುವ ರಾಜೀನಾಮೆಯನ್ನು ಅಂಗೀಕರಿಸಬಾರದು ಎಂದು ಆಗ್ರಹಿಸಿದ್ದಾರೆ.

'ರಾಜೀನಾಮೆ ಅಂಗೀಕರಿಸಬಾರದು': 'ನಕಲಿ ಜಾತಿ ಪ್ರಮಾಣಪತ್ರಗಳ ಕುರಿತು ತನಿಖೆ ನಡೆಸುತ್ತಿದ್ದ ರವೀಂದ್ರನಾಥ್ ರಾಜೀನಾಮೆ ನೀಡಿರುವುದು ಬೇಸರದ ಸಂಗತಿ. ಅವರ ರಾಜೀನಾಮೆ ಅಂಗೀಕರಿಸುವುದು ಬೇಡ. ಸಾಮಾಜಿಕ ನ್ಯಾಯದ ಪರ ಕೆಲಸ ಮಾಡುತ್ತಿರುವ ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿರುವ ಸರ್ಕಾರ ರೇಣುಕಾಚಾರ್ಯ ಅಂಥವರ ರಕ್ಷಣೆಗೆ ನಿಂತಿದೆ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್‌.ಸಿ. ಮಹದೇವಪ್ಪ ಆರೋಪಿಸಿದ್ದಾರೆ.

'ರೇಣುಕಾಚಾರ್ಯ ಪ್ರಕರಣ ಕಾರಣ'

'ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರ ಮಗಳು ನಕಲಿ ಜಾತಿ ಪ್ರಮಾಣಪತ್ರ ಪಡೆದಿದ್ದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ರವೀಂದ್ರನಾಥ್ ನೋಟಿಸ್ ಜಾರಿಗೊಳಿಸಿದ್ದರು. ಈ ಕಾರಣಕ್ಕಾಗಿ ಅವರ ವರ್ಗಾವಣೆ ಮಾಡಲಾಗಿತ್ತು ಎಂಬ ಮಾಹಿತಿ ಇದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಸೇರಿದಂತೆ ಯಾರೇ ನಕಲಿ ಜಾತಿ ಪ್ರಮಾಣಪತ್ರ ಪಡೆದಿದ್ದರೂ ನಿಷ್ಪಕ್ಷಪಾತ ತನಿಖೆ ನಡೆಯಲಿ. ಡಿಸಿಆರ್‌ಇ ಡಿಜಿಪಿ ವರ್ಗಾವಣೆಯನ್ನು ರದ್ದುಗೊಳಿಸಬೇಕು. ಅವರ ರಾಜೀನಾಮೆ ಪತ್ರವನ್ನೂ ಅಂಗೀಕರಿಸಬಾರದು' ಎಂದು ಒತ್ತಾಯಿಸಿದರು.

ಆರೋಪಿಗಳ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ಬಜರಂಗದಳ ಕಾರ್ಯಕರ್ತ ಹರ್ಷ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿರುವ ಹತ್ತು ಜನ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಹೆಚ್ಚಿನ ತನಿಖೆಗಾಗಿ 90 ದಿನಗಳಿಂದ 180 ದಿನಗಳಿಗೆ ಹೆಚ್ಚಿಸಬೇಕೆಂಬ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಮನವಿಯನ್ನು ವಿಶೇಷ ನ್ಯಾಯಾಲಯ ಮಾನ್ಯ ಮಾಡಿದೆ.

ಈ ಕುರಿತಂತೆ ಎನ್‌ಐಎ ಪರ ವಕೀಲರು ಸಲ್ಲಿಸಿದ ಮನವಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯದ ಉಸ್ತುವಾರಿ ನ್ಯಾಯಾಧೀಶ ಕಸನಪ್ಪ ನಾಯಕ್ ಬುಧವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಎನ್‌ಐಎ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, 'ಪ್ರಕರಣದಲ್ಲಿ ಈಗಾಗಲೇ ಆರೋಪಿಗಳ ಗುರುತು ಪತ್ತೆಯ ಪೆರೇಡ್ ಪ್ರಕ್ರಿಯೆ ಮುಕ್ತಾಯಗೊಂಡಿದೆ. ಆದರೆ, ಪ್ರತ್ಯಕ್ಷ ಸಾಕ್ಷಿಗಳ ವಿಚಾರಣೆ ನಡೆಯಬೇಕಿದೆ. ಅಂತೆಯೇ, ಆರೋಪಿಗಳು ಬಳಸುತ್ತಿದ್ದ ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಸಿಡಿಆರ್ ವಿಶ್ಲೇಷಣೆಯು ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಇನ್ನೂ ನಡೆಯಬೇಕಿದೆ' ಎಂದು ತಿಳಿಸಿದರು.

'ಹತ್ಯೆ ನಡೆಸಿ ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸಲು ನಡೆಸಲಾದ ಪಿತೂರಿ ಮತ್ತು ಸಂಚನ್ನು ಕಾರ್ಯಗತಗೊಳಿಸಿದ ಬಗೆ, ಇದಕ್ಕಾಗಿ ಎಲ್ಲಿಂದ ಹಣಕಾಸಿನ ನೆರವು ಪಡೆಯಲಾಯಿತು ಎಂಬುದನ್ನೆಲ್ಲಾ ಪತ್ತೆ ಹಚ್ಚಬೇಕಿದೆ. ಆದಕಾರಣ, ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ–1967ರ ಕಲಂ 43ಡಿ (2)(ಬಿ) ಅಡಿಯಲ್ಲಿ 190 ದಿನಗಳಿಗೆ ವಿಸ್ತರಿಸಿ ಆದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು 180 ದಿನಗಳಿಗೆ ವಿಸ್ತರಿಸಿ ಆದೇಶಿಸಿದರು. 2022ರ ಫೆಬ್ರುವರಿ 20 ರಂದು ರಾತ್ರಿ 9 ಗಂಟೆಯ ವೇಳೆಯಲ್ಲಿ ಶಿವಮೊಗ್ಗದಲ್ಲಿ ಹರ್ಷ ಹತ್ಯೆಯಾಗಿತ್ತು.

ಅಪರಾಧ ಸುದ್ದಿ

434 ಕೋಟಿ ಮೌಲ್ಯದ ಹೆರಾಯಿನ್ ವಶ

ನವದೆಹಲಿ (ಪಿಟಿಐ): ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಂದಾಯ ಗುಪ್ತಚರ ಅಧಿಕಾರಿಗಳು ಸುಮಾರು ₹ 434 ಕೋಟಿ ಮೌಲ್ಯದ 62 ಕೆ.ಜಿ ಹೆರಾಯಿನ್ ಅನ್ನು ಬುಧವಾರ ವಶಪಡಿಸಿಕೊಂಡಿದ್ದಾರೆ. ಉಗಾಂಡಾದಿಂದ ಬಂದ ಈ ಸರಕನ್ನು ವಿಮಾನ ನಿಲ್ದಾಣದ ಕಾರ್ಗೊ ಆವರಣದಲ್ಲಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಇದು ಈ ವಿಮಾನ ನಿಲ್ದಾಣದಲ್ಲಿ ಇಲ್ಲಿವರೆಗಿನ ಅತಿ ಹೆಚ್ಚಿನ ಹೆರಾಯಿನ್ ವಶಪ್ರಕರಣ ಆಗಿದೆ.

₹20 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ: ಇಬ್ಬರ ಬಂಧನ

ಬೆಂಗಳೂರು: ಮಾದಕ ವಸ್ತು ಮಾರಾಟ ಜಾಲದಲ್ಲಿ ಸಕ್ರಿಯರಾಗಿದ್ದ ಇಬ್ಬರನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

'ಜೋವಿನ್ ಜಾನ್ಸನ್ ಹಾಗೂ ಪ್ರಣವ್ ಬಂಧಿತರು. ಇವರು ಮಾರತ್ತಹಳ್ಳಿ ಠಾಣೆಯ ವ್ಯಾಪ್ತಿಯಲ್ಲಿ ವಾಸವಿದ್ದರು. ಆರೋಪಿಗಳಿಂದ 200 ಗ್ರಾಂ ಎಂಡಿಎಂಎ ಹರಳು, ಎರಡು ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹20 ಲಕ್ಷ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆರೋಪಿಗಳು ಕೇರಳದಿಂದ ಕಡಿಮೆ ಬೆಲೆಗೆ ಎಂಡಿಎಂಎ ಹರಳು ಖರೀದಿಸಿ ನಗರಕ್ಕೆ ತರುತ್ತಿದ್ದರು. 1 ಗ್ರಾಂ ಹರಳನ್ನು ₹8 ಸಾವಿರ ಹಾಗೂ ₹10 ಸಾವಿರಕ್ಕೆ ಕಾಲೇಜು ವಿದ್ಯಾರ್ಥಿಗಳು ಹಾಗೂ ಪರಿಚಯಸ್ಥರಿಗೆ ಮಾರುತ್ತಿದ್ದರು. ಇವರ ವಿರುದ್ಧ ಮಾರತ್ತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದ್ದಾರೆ.

'ಆ್ಯಸಿಡ್ ದಾಳಿ: ಆರೋಪಿಯ ಸುಳಿವಿಲ್ಲ'

ಬೆಂಗಳೂರು: 'ಪ್ರೀತಿ ನಿರಾಕರಿಸಿದರೆಂಬ ಕಾರಣಕ್ಕೆ 24 ವರ್ಷದ ಯುವತಿ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿರುವ ಆರೋಪಿ ನಾಗೇಶ್ ಅಲಿಯಾಸ್ ನಾಗರಾಜ್ ಯಾವುದೇ ಸುಳಿವು ಬಿಟ್ಟಿಲ್ಲ' ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದ್ದಾರೆ.

'ಆರೋಪಿಯು ಪೂರ್ವ ಯೋಜಿತವಾಗಿ ದಾಳಿ ನಡೆಸಿದ್ದಾನೆ. ಈ ಪ್ರಕರಣವನ್ನು ನಾವು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದೇವೆ. ಲುಕ್‌ಔಟ್ ಸಹ ಹೊರಡಿಸಲಾಗಿದ್ದು, ಹೊರ ರಾಜ್ಯಗಳಿಗೂ ವಿಶೇಷ ತಂಡಗಳನ್ನು ಕಳುಹಿಸಿದ್ದೇವೆ. ಅಲ್ಲಿನ ಠಾಣೆಗಳಿಗೂ ಆತನ ಕುರಿತ ಮಾಹಿತಿ ರವಾನಿಸಿದ್ದೇವೆ' ಎಂದು ಹೇಳಿದ್ದಾರೆ.

ಪಾದಚಾರಿ ಮಾರ್ಗದಲ್ಲಿ ಅವಘಡ: ಗಾಯಕ ಅಜಯ್ ವಾರಿಯರ್‌ಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಮಾರ್ಗದ ಮೇಲೆ ನಡೆದುಕೊಂಡು ಹೋಗುವಾಗ ಬಿದ್ದು ಗಾಯಕ ಅಜಯ್ ವಾರಿಯರ್ ಭಾನುವಾರ ಗಾಯಗೊಂಡಿದ್ದರು. ಯಲಚೇನಹಳ್ಳಿ ಪ್ರದೇಶದಲ್ಲಿ ಮಳೆ ನೀರು ಚರಂಡಿಯ ಮೇಲುಹಾಸು ಕಿತ್ತು ಹೋಗಿದ್ದರಿಂದ ಈ ದುರ್ಘಟನೆ ನಡೆದಿತ್ತು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಬಿಬಿಎಂಪಿ ವಿಶೇಷ ಆಯುಕ್ತ (ಕಲ್ಯಾಣ) ಬಿ.ಶರತ್, 'ಅವರ ಆರೋಗ್ಯವನ್ನು ಬಿಬಿಎಂಪಿ ಅಧಿಕಾರಿಗಳು ವಿಚಾರಿಸಿದ್ದಾರೆ. ಅವರು ಪ್ರಥಮ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾರೆ. ಅವರಿಗೆ ಅಗತ್ಯ ನೆರವು ಒದಗಿಸಲು ಬಿಬಿಎಂಪಿ ಸಿದ್ಧವಿದೆ' ಎಂದು ತಿಳಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಸೂಚನೆ

ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ನಿರ್ಮಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ನಿರ್ಮಿಸಲು ಕ್ರಮಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು ಬಂಗಾರಪ್ಪ ನಗರ ಮತ್ತು ಶಿವನಪಾಳ್ಯದ ಮಸ್ಟರಿಂಗ್ ಕೇಂದ್ರಗಳಿಗೆ ಬುಧವಾರ ಭೇಟಿ ನೀಡಿ ಪೌರ ಕಾರ್ಮಿಕರನ್ನು ಮಾತನಾಡಿಸಿದರು. ವೇತನ ಸಕಾಲದಲ್ಲಿ ಪಾವತಿ ಆಗದಿರುವ ಬಗ್ಗೆ ಆಟೊಟಿಪ್ಪರ್ ಚಾಲಕರು ಮತ್ತು ಸಹಾಯಕರು ಅಹವಾಲು ಹೇಳಿಕೊಂಡರು.

'ಆಟೊಟಿಪ್ಪರ್ ಸಿಬ್ಬಂದಿಗೆ ನಿಗದಿತ ಸಮಯದಲ್ಲೇ ವೇತನ ಪಾವತಿಸಬೇಕು. ಆಯಾ ತಿಂಗಳೇ ಪಾಲಿಕೆಗೆ ಬಿಲ್ ಸಲ್ಲಿಸಿ ಹಣ ಪಡೆದುಕೊಳ್ಳಬೇಕು' ಎಂದು ಗುತ್ತಿಗೆದಾರರಿಗೆ ಮುಖ್ಯ ಆಯುಕ್ತರು ಸೂಚಿಸಿದರು.

ಆರ್‌.ಆರ್‌.ನಗರ ವಾರ್ಡ್‌ನ ಶ್ರೀನಿವಾಸ ಕ್ರಾಸ್ ಜಂಕ್ಷನ್ ಬಳಿ ರಾಜಕಾಲುವೆಯ ಮೀಸಲು ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಲಾದ ಕಟ್ಟಡವನ್ನು ಕೂಡಲೆ ತೆರವುಗೊಳಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

'ಉಲ್ಲಾಳು ವಾರ್ಡ್‌ನಲ್ಲಿ ₹ 1 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಒಣ ಕಸ ಸಂಗ್ರಹಣಾ ಘಟಕ ಕಾಮಗಾರಿಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸಬೇಕು. ಕಸದಿಂದ ದ್ರವ ತ್ಯಾಜ್ಯವನ್ನು (ಲಿಚೆಟ್) ಪ್ರತ್ಯೇಕಿಸಲು ಕ್ರಮ ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

'ಬೆಂಗಳೂರು ವಿಶ್ವವಿದ್ಯಾಲಯದ ಬಳಿ ಹಳೆಯ ಹೊರವರ್ತುಲ ರಸ್ತೆಯ ಹೊಯ್ಸಳ ವೃತ್ತದವರೆಗೆ 5.3 ಕಿ.ಮೀ ಉದ್ದದ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಬೇಕು. ತೋಟಗಾರಿಕಾ ವಿಭಾಗದ ನೆರವಿನಿಂದ ವಿಭಜಕದಲ್ಲಿ ಸಸಿಗಳನ್ನು ಬೆಳೆಸಬೇಕು' ಎಂದು ತುಷಾರ್ ಸೂಚನೆ ನೀಡಿದರು.

ಉತ್ತರಹಳ್ಳಿ ರಾಜಕಾಲುವೆಯಲ್ಲಿ ಸೇತುವೆ ಕಾಮಗಾರಿ ಪೂರ್ಣಗೊಂಡಿದೆ. ಇಲ್ಲಿ ಮಳೆ ನೀರು ಹರಿವಿಗೆ ಕಚ್ಚಾ ರಾಜ ಕಾಲುವೆ ಅಭಿವೃದ್ಧಿಪಡಿಸಿ, ಅದಕ್ಕೆ ಕಾಂಕ್ರಿಟ್ ತಡೆಗೋಡೆ ನಿರ್ಮಿಸುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಸೂಚನೆ ನೀಡಿದರು.

ಜೆ.ಪಿ ಪಾರ್ಕ್ ಉದ್ಯಾನವನದಲ್ಲಿ ₹ 37 ಕೋಟಿ ವೆಚ್ಚದಲ್ಲಿ ಕೈಗೊಂಡ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮುಖ್ಯ ಆಯುಕ್ತರು ಪರಿಶೀಲನೆ ನಡೆಸಿದರು.

ಮಲ್ಲತಹಳ್ಳಿ ಕೆರೆ: ಕಾಮಗಾರಿ ಪರಿಶೀಲನೆ

ಜ್ಞಾನ ಭಾರತಿ ವಾರ್ಡ್‌ನಲ್ಲಿರುವ 72.15 ಎಕರೆಯಷ್ಟು ವಿಸ್ತಾರವಾದ ಮಲ್ಲತಹಳ್ಳಿ ಕೆರೆಯನ್ನು ₹ 59 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಸ್ಥಳಕ್ಕೆ ಭೇಟಿ ನೀಡಿದ ಮುಖ್ಯ ಆಯುಕ್ತರು, 'ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ' ಎಂದು ನಿರ್ದೇಶನ ನೀಡಿದರು.



ಕಾರ್ಯಕ್ರಮವನ್ನು ಶಾಸಕ ಬಿ.ಎಸ್‌.ಯಡಿಯೂರಪ್ಪ ಉದ್ಘಾಟಿಸಿದರು. ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ, ಎಂ.ವಿ.ನಾಗರಾಜು, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಎನ್‌.ಆರ್‌.ಜಗದೀಶ್, ರಂಭಾಪುರಿ ಶ್ರೀಗಳು, ಕಾಡಸಿದ್ದೇಶ್ವರ ಮಠದ ಕರಿವೃಷಭ ಶ್ರೀಗಳು, ಮಹಂತಿನಮಠ ರೇಣುಕ ಶಿವಾಚಾರ್ಯರು, ಹಲಗೂರು ರುದ್ರಮುನಿಶ್ರೀಗಳು, ವಿಭೂತಿಪುರ ಮಠದ ಮಹಂತಲಿಂಗ ಶ್ರೀಗಳು, ಸಿದ್ದರಬೆಟ್ಟ ವೀರಭದ್ರ ಶಿವಾಚಾರ್ಯರು, ರುದ್ರಮೂರ್ತಿ ಇದ್ದಾರೆ.

'ಭಾರತ ಸರ್ವಧರ್ಮ ಸಹಿಷ್ಣು ರಾಷ್ಟ್ರ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಭಾರತ ಸರ್ವಧರ್ಮ ಸಹಿಷ್ಣು ರಾಷ್ಟ್ರ. ಜನರ ಸಹಿಷ್ಣುತೆಯ ಮನೋಭಾವವನ್ನು ಯಾರೂ ದುರುಪಯೋಗಪಡಿಸಿಕೊಳ್ಳಬಾರದು' ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಪಟ್ಟಣದ ಅಡೇಪೇಟೆಯಲ್ಲಿರುವ ಜೀರ್ಣೋದ್ಧಾರಗೊಂಡ ಮಹಂತಿನ ಮಠದ ಶಿವಯೋಗ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಆಧುನಿಕ ಜಗತ್ತಿನಲ್ಲಿ ಧಾರ್ಮಿಕ ಮನೋಭಾವ ಸಂಕುಚಿತಗೊಳ್ಳುತ್ತಿದೆ. ಮಠಗಳು ಧರ್ಮ ಜಾಗೃತಿ ಮೂಡಿಸುವಲ್ಲಿ ಹೆಚ್ಚಿನ ಶ್ರಮವಹಿಸಬೇಕಿದೆ' ಎಂದು ತಿಳಿಸಿದರು.

ರಂಭಾಪುರಿ ಪೀಠದ ವೀರಸೋಮೇಶ್ವರ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 'ಮಹಂತಿನ ಮಠ ಶಿಥಿಲಾವಸ್ಥೆಗೆ ತಲುಪಿತ್ತು. ಹಿಂದಿನ ಚಂದ್ರಮೌಳೇಶ್ವರ ಶ್ರೀಗಳ ಮತ್ತು ಸ್ಥಳೀಯರ ಸಂಘಟನೆಯ ಫಲವಾಗಿ ನವೀಕರಣಗೊಂಡಿದೆ' ಎಂದರು.

ಮಕ್ಕಳಿಗೆ ಮಾನಸಿಕ ಹಿಂಸೆ: ನಾರಾಯಣ ಶಾಲೆ ವಿರುದ್ಧ ಪ್ರಕರಣ

ಬೆಂಗಳೂರು: ಶಿಕ್ಷಕರು ಹಾಗೂ ಆಡಳಿತ ಮಂಡಳಿಯವರು ಮಕ್ಕಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾರೆ ಎಂದು ಆರೋಪಿಸಿ ಲಗ್ಗೆರೆಯ ನಾರಾಯಣ ಇ-ಟೆಕ್ನೊ ಶಾಲೆ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

'ಬೆಂಗಳೂರು ಉತ್ತರ ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ನೀಡಿರುವ ದೂರಿನ ಅನ್ವಯ ಶಾಲಾ ಆಡಳಿತ ಮಂಡಳಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ. 'ಶುಲ್ಕದ ವಿಚಾರವಾಗಿ ಕೆಲ ಪೋಷಕರು ಶಾಲಾ ಆಡಳಿತ ಮಂಡಳಿಯ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಆ ಪೋಷಕರ ಮಕ್ಕಳನ್ನೇ ಗುರಿಯಾಗಿಸಿಕೊಂಡು ಶಿಕ್ಷೆ ನೀಡಲಾಗಿದೆ. ಶಾಲಾ ಕೊಠಡಿಯಲ್ಲಿ ಮಕ್ಕಳನ್ನು ಇಡೀ ದಿನ ನಿಲ್ಲಿಸಲಾಗಿದೆ. ಅವರ ಜೊತೆ ಸೇರದಂತೆ ಇತರ ವಿದ್ಯಾರ್ಥಿಗಳಿಗೆ ಶಿಕ್ಷಕರೇ ಸೂಚಿಸುತ್ತಿದ್ದಾರೆ' ಎಂದು ದೂರಲಾಗಿದೆ.

ಸ್ಯಾನಿಟೈಸರ್ ಸುರಿದು ಬೆಂಕಿ ಹಚ್ಚಿಕೊಂಡಿದ್ದ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಡನ ಮನೆಯವರ ಹಿಂಸೆ ತಾಳಲಾರದೆ ಮುಖ ಹಾಗೂ ದೇಹದ ಮೇಲೆ ಸ್ಯಾನಿಟೈಸರ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದ ಮಹಿಳೆಯು ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ರಾತ್ರಿ ನಿಧನರಾಗಿದ್ದಾರೆ.

ಮೃತ ಮಹಿಳೆಯ ಪೋಷಕರು ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಆರ್‌.ಟಿ.ನಗರ ಠಾಣೆ ಪೊಲೀಸರು, ಆಕೆಯ ಪತಿ ಇಮ್ರಾನ್ ಹಾಗೂ ಆತನ ಸಹೋದರ ರಿಜ್ವಾನ್‌ನನ್ನು ಬಂಧಿಸಿದ್ದಾರೆ.

'ಮಠದಹಳ್ಳಿ ನಿವಾಸಿ ಶಾಜಿಯಾ ಬಾನು ಮೃತ ಮಹಿಳೆ. ಶಾಜಿಯಾ ಹಾಗೂ ಇಮ್ರಾನ್ 12 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಮೂವರು ಮಕ್ಕಳಿದ್ದರು. ಏಪ್ರಿಲ್ 20ರಂದು ದಂಪತಿ ನಡುವೆ ಜಗಳ ನಡೆದಿತ್ತು. ಇದರಿಂದ ಮನನೊಂದಿದ್ದ ಶಾಜಿಯಾ ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡಿದ್ದರು. ಬಳಿಕ ಸ್ಯಾನಿಟೈಸರ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದರು. ಅವರನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನೀನು ಕಪ್ಪಗಿದ್ದೀಯಾ ಎಂದು ಹೀಯಾಳಿಸಿ ಇಮ್ರಾನ್ ಹಾಗೂ ಆತನ ತಾಯಿ ನಮ್ಮ ಮಗಳಿಗೆ ಕಿರುಕುಳ ನೀಡಿದ್ದಾರೆ. ಮಕ್ಕಳನ್ನು ಮುಟ್ಟಲೂ ಆಕೆಗೆ ಬಿಡುತ್ತಿರಲಿಲ್ಲ. ಇದರಿಂದ ಮನನೊಂದು ಆಕೆ ಆತ್ಮಹತ್ಯೆಗೆ ಪ್ರಯತ್ನಿಸಿದ್ದಳು' ಎಂದು ಶಾಜಿಯಾ ಪೋಷಕರು ದೂರಿದ್ದಾರೆ.

ಸಿಸಿಐ ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಅಲಯನ್ಸ್ ಆಫ್ ಡಿಜಿಟಲ್ ಇಂಡಿಯಾ ಫೌಂಡೇಷನ್ (ಎಡಿಐಎಫ್) ಜತೆಗೆ ಗೋಪ್ಯ ಮಾಹಿತಿ ಹಂಚಿಕೊಳ್ಳುವಂತೆ ಗೂಗಲ್ ಸಂಸ್ಥೆಗೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ನೀಡಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಸಿಸಿಐ ಆದೇಶವನ್ನು ಪ್ರಶ್ನಿಸಿ ಗೂಗಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಗೂಗಲ್ ಎಲ್‌ಎಲ್‌ಸಿ ಹಾಗೂ ಗೂಗಲ್ ಐರ್ಲೆಂಡ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ನೇತೃತ್ವದ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಆದೇಶ ನೀಡಿದ್ದು, 'ಇದು ಪ್ರಕರಣದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಸ್ಪಷ್ಟಪಡಿಸಿದೆ. ಸಿಸಿಐ ಏಪ್ರಿಲ್ 18ರಂದು ಹೊರಡಿಸಿರುವ ಆದೇಶದ ಪ್ರಕಾರ ಗೂಗಲ್ ಸಂಸ್ಥೆ ಯಾವುದೇ ಗೋಪ್ಯ ಮಾಹಿತಿಯನ್ನು ಎಐಡಿಎಫ್ ಪಡೆಯಲು ಈಗ ಅನುಮತಿಸಲಾಗದು' ಎಂದು ತಿಳಿಸಿರುವ ನ್ಯಾಯಪೀಠ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ.

farnazfever

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿಯವರಿಗೆ ಮೀಸಲಾತಿ

ಅನ್ಯಾಯವಾದರೆ ಸರ್ಕಾರವೇ ಹೊಣೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂಕೋರ್ಟ್ ಆದೇಶದಿಂದ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗ ಗಳಿಗೆ ಅನ್ಯಾಯವಾದರೆ ಅದಕ್ಕೆ ರಾಜ್ಯ ಸರ್ಕಾರವೇ ಹೊಣೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಬುಧವಾರ ಪತ್ರಿಕಾ ಪ್ರಕಟಣೆ ನೀಡಿರುವ ಸಿದ್ದರಾಮಯ್ಯ ಅವರು, 'ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಂಗಳವಾರ ಆದೇಶದಿಂದ ಸಾಮಾಜಿಕ ನ್ಯಾಯದ ಅಸ್ತಿತ್ವಕ್ಕೆ ಧಕ್ಕೆ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಪರಿಸ್ಥಿತಿ ಕೈಮೀರಿ ಹೋಗುವ ಮೊದಲೇ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಸುಪ್ರೀಂಕೋರ್ಟ್ ಮಂಗಳವಾರ ನೀಡಿರುವ ಆದೇಶದಿಂದ ಸೃಷ್ಟಿಯಾಗಿರುವ ಬಿಕ್ಕಟ್ಟಿಗೆ ಪರಿಹಾರ ಪಡೆಯಲು ಸರ್ಕಾರ ಮುಂದಾಗಬೇಕು. ಹಿಂದುಳಿದ ವರ್ಗಗಳ ಆಯೋಗದ ವರದಿ ಆಧರಿಸಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಖಾತರಿಪಡಿಸಿ, ಅದರ ಆಧಾರದಲ್ಲಿ ಚುನಾವಣೆ ನಡೆಸಲು ಸುಪ್ರೀಂಕೋರ್ಟ್ ಅನುಮತಿ ಕೋರುವುದೊಂದೇ ಈಗ ಇರುವ ಮಾರ್ಗ ಎಂದಿದ್ದಾರೆ.

ಈ ವಿಚಾರದಲ್ಲಿ ಕಾನೂನು ಹೋರಾಟಕ್ಕೆ ಸರ್ಕಾರ ತಕ್ಷಣ ಸಜ್ಜಾಗಬೇಕು. ವಿರೋಧ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಹಿಂದುಳಿದ ವರ್ಗಗಳ ಆಯೋಗವು ಸಂಗ್ರಹಿಸಿರುವ ವಿಶ್ವಾಸಾರ್ಹ ದತ್ತಾಂಶಗಳನ್ನು ಬಳಸಿಕೊಂಡು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಮೂರು ಹಂತದ ಪರಿಶೀಲನೆ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಜಾತಿಗಳ ಜನರ ರಾಜಕೀಯ ಹಿಂದುಳಿದಿರುವಿಕೆಯನ್ನು ತಕ್ಷಣವೇ ಗುರುತಿಸಲು ಸಾಧ್ಯವಾಗದಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾತ್ರ ಮೀಸಲಾತಿ ನೀಡಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತೆ ಸುಪ್ರೀಂಕೋರ್ಟ್ ಹಿಂದೆಯೇ ಹೇಳಿತ್ತು. ಈಗ ಅದೇ ಮಾತನ್ನು ಪುನರುಚ್ಚರಿಸಿದೆ. ಈ ಆದೇಶ ದೇಶದಾದ್ಯಂತ ಅನ್ವಯ ಆಗಲಿದೆ ಎಂಬುದನ್ನೂ ಮತ್ತೊಮ್ಮೆ ಹೇಳಿದೆ. ಆದರೆ, ರಾಜ್ಯ ಸರ್ಕಾರ ಈ ವಿಚಾರದಲ್ಲಿ ಕಾನೂನು ಹೋರಾಟಕ್ಕೆ ಮುಂದಾಗದಿರುವುದು ವಿಷಾದನೀಯ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

'ಮೀಸಲಾತಿ ಕೊಟ್ಟೇ ಚುನಾವಣೆಗೆ ಸಿದ್ಧ'

ಮಂಗಳೂರು: 'ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗೆ ಶೇ 33 ಕ್ಕಿಂತ ಹೆಚ್ಚಿನ ಮೀಸಲಾತಿಯನ್ನು ನೀಡುವ ಮೂಲಕವೇ ನಾವು ಚುನಾವಣೆ ಎದುರಿಸಲು ಸಿದ್ಧರಿದ್ದೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಬುಧವಾರ ಹೇಳಿದರು.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೂರು ಹಂತದ ಪರಿಶೀಲನೆ ಪೂರ್ಣಗೊಳ್ಳುವವರೆಗೆ, ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ನೀಡಿ ಅಧಿಸೂಚನೆ ಹೊರಡಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನಾವು ಹಿಂದುಳಿದ ವರ್ಗಕ್ಕೆ ಸೇರಿದ ಸ್ಥಾನಗಳನ್ನು ಅವರಿಗೇ ಮೀಸಲಿಟ್ಟೇ ಚುನಾವಣೆ ಎದುರಿಸಲು ಸಿದ್ಧರಾಗಿದ್ದೇವೆ. ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಹಿಂದುಳಿದ ವರ್ಗದ ಅಭಿವೃದ್ಧಿಗೆ ಸಾಕಷ್ಟು ಯೋಜನೆಗಳನ್ನು ನೀಡಿದೆ. ಆದ್ದರಿಂದ ಮೀಸಲಾತಿ ನೀಡುವುದರಿಂದ ಪಕ್ಷಕ್ಕೆ ಚುನಾವಣೆಯಲ್ಲಿ ಯಾವುದೇ ತೊಡಕು ಆಗುವುದಿಲ್ಲ' ಎಂದು ಹೇಳಿದರು.

ಎಲ್ಲಾ ಸಮುದಾಯದವರನ್ನು ಪ್ರತಿನಿಧಿಸುವ 'ಪಂಚರತ್ನ ಸಮಿತಿ'ಯನ್ನೂ ರೂಪಿಸಲಾಗಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಆಧಾರದಲ್ಲಿ ಆಯೋಗವು ಚುನಾವಣಾ ದಿನಾಂಕ ಘೋಷಣೆ ಮಾಡುವುದನ್ನು ಕಾಯುತ್ತಿದ್ದೇವೆ' ಎಂದರು.

'ಸಮಸ್ಯೆ ಉದ್ಭವಿಸುತ್ತಿರಲಿಲ್ಲ'

ಮೈಸೂರು: 'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಯಾರಿಸಿದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಆಧರಿಸಿ ಚುನಾವಣೆ ಮಾಡಬಹುದಿತ್ತು. ಸರ್ಕಾರ ವರದಿಯನ್ನು ಸ್ವೀಕರಿಸಿ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿ ಚುನಾವಣೆ ಮಾಡಬಹುದು. ನಮ್ಮ ವರದಿ ಸ್ವೀಕರಿಸಿದ್ದರೆ ಸಮಸ್ಯೆಯೇ ಉದ್ಭವಿಸುತ್ತಿರಲಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸುದ್ದಿಗಾರರಿಗೆ ತಿಳಿಸಿದರು.

ಮಸೀದಿ ಮೇಲೆ ಭಗವಾಧ್ವಜ ಹಾರಾಟ: ಸುಖಾಂತ್ಯ

ಪ್ರಜಾವಾಣಿ ವಾರ್ತೆ

ಮೂಡಲಗಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಅರಭಾವಿಯ ಸತ್ತಿಗೇರಿ ಗಡ್ಡೆ ಸಮುದಾಯದ ಮಸೀದಿ ಮೇಲೆ ಕಿಡಿಗೇಡಿಗಳು ಕಟ್ಟಿದ್ದ ಭಗವಾಧ್ವಜವನ್ನು ಹಿಂದೂ ಹಾಗೂ ಮುಸ್ಲಿಂ ಸಮುದಾಯದ ಹಿರಿಯರ ಸಮ್ಮುಖದಲ್ಲಿ ಪೊಲೀಸರು ಬುಧವಾರ ಬೆಳಿಗ್ಗೆ ಕೆಳಕ್ಕಿಳಿಸಿದ್ದಾರೆ.

ಮಂಗಳವಾರ ಮಧ್ಯರಾತ್ರಿ ಇಲ್ಲವೇ ಬೆಳಗಿನ ಜಾವದಲ್ಲಿ ಕಿಡಿಗೇಡಿಗಳು ಧ್ವಜವನ್ನು ಕಟ್ಟಿರಬಹುದು ಎಂದು ಶಂಕಿಸಲಾಗಿದೆ. ನಸುಕಿನಲ್ಲಿ ಮುಸ್ಲಿಂ ಸಮಾಜದವರು ಪ್ರಾರ್ಥನೆಗೆ ಹೋದಾಗ ಧ್ವಜ ಕಟ್ಟಿದ್ದು ಕಂಡುಬಂದಿದೆ.

'ಗ್ರಾಮದಲ್ಲಿ ಹಿಂದೂ ಹಾಗೂ ಮುಸ್ಲಿಮರು ಸಾಮರಸ್ಯದಿಂದ ಬಾಳುತ್ತಿದ್ದು, ಜನರಲ್ಲಿ ಒಡಕು ಮೂಡಿಸುವ ಉದ್ದೇಶದಿಂದ ಈ ಕೃತ್ಯ ಮಾಡಲಾಗಿದೆ. ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಪೊಲೀಸರು ಪ್ರಕರಣ ದಾಖಲಿಸಬೇಕು' ಎಂದು ಎರಡೂ ಸಮುದಾಯ ಮುಖಂಡರು ಪ್ರಕರಣ ದಾಖಲಿಸಿದ್ದಾರೆ.

ಎಐಕೆಎಸ್‌ಗೆ ಸಿದ್ದನಗೌಡ ಪಾಟೀಲ ಅಧ್ಯಕ್ಷ

ಕಲಬುರಗಿ: ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ರಾಜ್ಯ ಮಂಡಳಿ ಅಧ್ಯಕ್ಷರನ್ನಾಗಿ ಡಾ. ಸಿದ್ದನಗೌಡ ಪಾಟೀಲ ಅವರನ್ನು ಇಲ್ಲಿ ನಡೆದ ಎಐಕೆಎಸ್ ರಾಜ್ಯ ಸಮ್ಮೇಳನದಲ್ಲಿ ಆಯ್ಕೆ ಮಾಡಲಾಯಿತು.

ಮೌಲಾ ಮುಲ್ಲಾ–ಕಾರ್ಯಾಧ್ಯಕ್ಷ, ಬಾಬುರಾವ ಹೊನ್ನಾ, ವೀರಣ್ಣ ಕೂಡ್ಲಿಗಿ–ಉಪಾಧ್ಯಕ್ಷರು, ಪಿ.ವಿ.ಲೋಕೇಶ–ಪ್ರಧಾನ ಕಾರ್ಯದರ್ಶಿ, ಕೆ.ಎಸ್. ಜನಾರ್ಧನ, ಐರಾಣಿ ಚಂದ್ರು–ಕಾರ್ಯದರ್ಶಿ ಮತ್ತು ಎಂ.ಸಿ.ಡೋಂದ್ರೆ–ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಅಲ್ಲದೇ 31 ಜನರನ್ನು ಮಂಡಳಿಯ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಸಾಮಾನ್ಯ ಜ್ಞಾನ

ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ 'ಗ್ರೂಪ್-ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಪ್ರಿಯಾಂಕ ಮೋಹಿತೆ ಯಾಕೆ ಸುದ್ದಿಯಲ್ಲಿದ್ದಾರೆ?

1) ಬೆಂಗಳೂರು ನಿವಾಸಿಯಾಗಿರುವ ಮಹಾರಾಷ್ಟ್ರದ ಸತಾರ ಮೂಲದ ಪ್ರಿಯಾಂಕಾ 8,586 ಮೀಟರ್ ಎತ್ತರದ ಕಾಂಚನಗಂಗಾ ಶಿಖರವನ್ನೇರಿದ್ದಾರೆ.

2) ಪ್ರಿಯಾಂಕಾ 8,000 ಮೀಟರ್‌ಗಿಂತ ಎತ್ತರವಿರುವ ಐದು ಶಿಖರಗಳನ್ನು ಏರಿದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ



ಪ್ರಿಯಾಂಕ ಮೋಹಿತೆ – ಟ್ವಿಟರ್ ಚಿತ್ರ

2) ಇತ್ತೀಚೆಗೆ ಭಾರತ ಮತ್ತು ನಾರ್ಡಿಕ್ ದೇಶಗಳ 2ನೇ ಶೃಂಗಸಭೆ ನಡೆಯಿತು. ಹಾಗಾದರೆ ಈ ಕೆಳಗಿನ ಗುಂಪುಗಳಲ್ಲಿ ಯಾವ ಗುಂಪು ನಾರ್ಡಿಕ್ ಗುಂಪನ್ನು ಪ್ರತಿನಿಧಿಸುತ್ತದೆ?

ಎ) ಫಿನ್ಲೆಂಡ್, ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಐಸ್‌ಲ್ಯಾಂಡ್
ಬಿ) ಫಿನ್ಲೆಂಡ್, ಬ್ರಿಟನ್, ನಾರ್ವೆ, ಸ್ವೀಡನ್, ಐಸ್‌ಲ್ಯಾಂಡ್
ಸಿ) ಜಪಾನ್, ನಾರ್ವೆ, ಸ್ವೀಡನ್, ಐಸ್‌ಲ್ಯಾಂಡ್
ಡಿ) ಮಾರಿಷಸ್, ಫಿನ್ಲೆಂಡ್, ಡೆನ್ಮಾರ್ಕ್, ಐಸ್‌ಲ್ಯಾಂಡ್

ಉತ್ತರ: ಎ


3) ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಿದ್ಧಪಡಿಸಿದ 'ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕ'ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?



ಎ) 150 ಬಿ) 160 ಸಿ) 180 ಡಿ) 140

ಉತ್ತರ: ಎ

4) ಹಿರಿಯ ರಂಗ ಕಲಾವಿದೆ ಏಣಗಿ ಬಾಳಪ್ಪನವರ ಧರ್ಮಪತ್ನಿ ಲಕ್ಷ್ಮೀಬಾಯಿ ಇತ್ತೀಚೆಗೆ ನಿಧನರಾದರು. ಇವರು ಯಾವ ಯಾವ ಭಾಷೆಗಳ ರಂಗಭೂಮಿಗಳಲ್ಲಿ ಕಲಾವಿದರಾಗಿ ದುಡಿದಿದ್ದರು?



ಎ) ಕನ್ನಡ ಮತ್ತು ಮರಾಠಿ
ಬಿ) ಮರಾಠಿ ಮತ್ತು ಗುಜರಾತಿ
ಸಿ) ಕನ್ನಡ ಮತ್ತು ತುಳು
ಡಿ) ಕೇವಲ ಕನ್ನಡ ಮಾತ್ರ

ಉತ್ತರ: ಎ

5) ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ಇಸ್ರೊ) ಚಂದ್ರ ಹಾಗೂ ಮಂಗಳ ಗ್ರಹಕ್ಕೆ ಗಗನ ನೌಕೆಗಳನ್ನು ಉಡ್ಡಯನ ಮಾಡಿ ಯಶಸ್ವಿಯಾಗಿದೆ. ಈಗ ಯಾವ ಗ್ರಹದ ಕಕ್ಷೆಗೆ ತನ್ನ ಬಾಹ್ಯಾಕಾಶ ನೌಕೆಯನ್ನು ಕಳುಹಿಸಲು ಸಿದ್ಧತೆ ನಡೆಸಿದೆ?

ಎ) ಶುಕ್ರ ಬಿ) ಬುಧ
ಸಿ) ಶನಿ ಡಿ) ನೆಪ್ಚೂನ್

ಉತ್ತರ: ಎ

6) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ನಮ್ಮ ದೇಶದಲ್ಲಿ ವಾರ್ಷಿಕ 800 ರಿಂದ 900 ಮೆ. ಟನ್ ಚಿನ್ನದ ಬೇಡಿಕೆ ಇದೆ. ಆದರೆ ಭಾರತದಲ್ಲಿ 1.70 ರಿಂದ 2 ಮೆ. ಟನ್ ಉತ್ಪಾದಿಸಲಾಗುತ್ತಿದೆ. ಉಳಿದದನ್ನು ಆಮದು ಮಾಡಿಕೊಳ್ಳಲಾಗುತ್ತದೆ.

2) ಭಾರತದಲ್ಲಿ ಕೋಲಾರದ ಚಿನ್ನದ ಗಣಿ, ಹಟ್ಟಿ ಚಿನ್ನದ ಗಣಿ, ಊಟಿ ಚಿನ್ನದ ಗಣಿ ಮತ್ತಿತರ ಕಡೆಗಳಲ್ಲಿ ಚಿನ್ನವನ್ನು ತೆಗೆಯಲಾಗುತ್ತಿದೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2 ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

7) ಕೆಳಗಿನ ಹೇಳಿಕೆಯನ್ನು ಗಮನಿಸಿ

1) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ 2021-22ರ ಕರೆನ್ಸಿ ಆ್ಯಂಡ್ ಫೈನಾನ್ಸ್ ವರದಿಯ ಪ್ರಕಾರ ಕೋವಿಡ್ ಬಿಕ್ಕಟ್ಟಿನಿಂದ ಉಂಟಾದ ಆರ್ಥಿಕ ನಷ್ಟ ತುಂಬಿಕೊಳ್ಳಲು ಭಾರತಕ್ಕೆ 12 ವರ್ಷಗಳೇ ಬೇಕಾಗಬಹುದು.

2) ಭಾರತದ ಆರ್ಥಿಕತೆಯು ಕೊರೊನಾದ ಸಂಕಷ್ಟದಿಂದಾಗಿ ₹52 ಲಕ್ಷ ಕೋಟಿಯಷ್ಟು ಉತ್ಪಾದನಾ ನಷ್ಟವನ್ನು ಅನುಭವಿಸಿದೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ನಿಮಗಿದು ಗೊತ್ತೆ? ಪೈರೊ ಮೀಟರ್



ಪೈರೊಮೀಟರ್ ಅನ್ನು (Pyrometer) ಅತ್ಯಧಿಕ ಉಷ್ಣಾಂಶ ಅಳೆಯಲು ಬಳಸುತ್ತಾರೆ. ಸಾಧಾರಣ ಥರ್ಮೊಮೀಟರ್‌ಗಳಿಂದ ಅಳೆಯಲಾಗದಂತಹ ಉಷ್ಣಾಂಶವನ್ನು ತಿಳಿಯಲು ಇದನ್ನು ಬಳಸಲಾಗುತ್ತದೆ. ಉದಾಹರಣೆಗೆ ಕುಲುಮೆಯೊಂದರ ಉಷ್ಣಾಂಶವನ್ನು ತಿಳಿಯಲು ಈ ಸಾಧನವನ್ನು ಬಳಸಲಾಗುತ್ತದೆ. 1752ರ ಹೊತ್ತಿಗೆ ಮೊದಲ ಬಾರಿಗೆ ಪೈರೊಮೀಟರ್ ಅನ್ನು ಉಪಯೋಗಿಸಿ ಉಷ್ಣಾಂಶ ಅಳೆಯಲಾಗಿದೆ ಎಂದು ಇತಿಹಾಸದಲ್ಲಿ ದಾಖಲಾಗಿದೆ. ಪೈರೊಮೀಟರ್ ಸಾಧನದ ಬಗ್ಗೆ ವಿವರವಾದ ಮಾಹಿತಿ ನೀಡಿದವರು ಯೂಲರ್(Euler).

ಎರಡು ರೀತಿಯ ಪೈರೊಮೀಟರ್‌ಗಳಿವೆ. 1. ರೇಡಿಯೇಷನ್ ಪೈರೊಮೀಟರ್ (Radition Pyrometer). 2. ಆಪ್ಟಿಕಲ್ ಪೈರೊಮೀಟರ್ (Optical Pyrometer).

ರೇಡಿಯೇಷನ್ ಪೈರೊಮೀಟರ್‌ನಲ್ಲಿ ಬಿಸಿಯಾದ ವಸ್ತುವಿನಿಂದ ಬರುವ ಶಾಖವನ್ನು ಥರ್ಮೊಪೈಲ್ (Thermopile) ಎಂಬ ಸಾಧನದಲ್ಲಿ ಸಂಗ್ರಹಿಸಲಾಗುವುದು. ಶಾಖವನ್ನು ಹಿಡಿದಿಟ್ಟುಕೊಳ್ಳುವುದರಿಂದ ಥರ್ಮೊಪೈಲ್ ಬಿಸಿಯಾಗಿ ಅದು ಒಂದು ವೋಲ್ಟೇಜ್ ಅನ್ನು ಉತ್ಪತ್ತಿ ಮಾಡುತ್ತದೆ. ಉಷ್ಣಾಂಶವನ್ನು ಅನುಸರಿಸಿ, ವೋಲ್ಟೇಜ್ ಹೆಚ್ಚುತ್ತದೆ. ಈ ವಿದ್ಯುತ್ ವೋಲ್ಟೇಜ್ ಎಷ್ಟಿರುತ್ತದೆ ಎಂಬುದನ್ನು ನಿರ್ಣಯಿಸುವ ಮೂಲಕ ಬಿಸಿಯಾಗಿರುವ ವಸ್ತುವಿನ ಉಷ್ಣಾಂಶವನ್ನು ತಿಳಿದುಕೊಳ್ಳಬಹುದು.

ಆಪ್ಟಿಕಲ್ ಪೈರೊಮೀಟರ್ (Optical Pyrometer) ಎಂಬ ಇನ್ನೊಂದು ಬಗೆಯ ಪೈರೊಮೀಟರ್ ಇದೆ. ಇದು ಬಿಸಿಯಾದ ವಸ್ತುವಿನಿಂದ ಬರುವ ಬೆಳಕನ್ನು ಗ್ರಹಿಸಿ ಉಷ್ಣಾಂಶವನ್ನು ತಿಳಿಸುತ್ತದೆ. ಆಪ್ಟಿಕಲ್ ಪೈರೊಮೀಟರ್ ಶಾಖದಿಂದ ಬೆಳಗುವ ಒಂದು ವಸ್ತುವಿನ ಉಷ್ಣಾಂಶವನ್ನು ತೋರಿಸುತ್ತದೆ. ಅಳತೆಗಳನ್ನು ಗುರುತು ಮಾಡಿದ ಇನ್‌ಕ್ಯಾಂಡೆಸೆಂಟ್ ಫಿಲಮೆಂಟ್ ಒಂದನ್ನು ಅದರಲ್ಲಿ ಅಳವಡಿಸಲಾಗುತ್ತದೆ. ನೋಟದಿಂದಲೇ ಈ ಉಷ್ಣಾಂಶವನ್ನು ನಾವು ತಿಳಿದುಕೊಳ್ಳಬಹುದು. ವಸ್ತುವಿನ ಉಷ್ಣಾಂಶಕ್ಕೆ ಅನುಗುಣವಾಗಿ, ಬೆಳಕಿನ ಉಜ್ವಲತೆ ಮತ್ತು ಬಣ್ಣ ಬದಲಾಯಿಸುತ್ತದೆ.

ಕರ್ಣಾಟಕ ಬ್ಯಾಂಕ್: ಕ್ಲರ್ಕ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕರ್ಣಾಟಕ ಬ್ಯಾಂಕ್, ತಮ್ಮ ಶಾಖೆಗಳಲ್ಲಿ ಖಾಲಿ ಇರುವ ಗುಮಾಸ್ತ(ಕ್ಲರ್ಕ್) ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಮೇ 10ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದ್ದು, ಅರ್ಜಿ ಸಲ್ಲಿಸಲು ಮೇ 21 ಕೊನೆ ದಿನ. ಆನ್‌ಲೈನ್ ಮೂಲಕ ಅರ್ಜಿ ನೋಂದಣಿ ಮಾಡಿ, ಅರ್ಜಿ ಶುಲ್ಕ ಪಾವತಿಸಬೇಕು.

- **ವಿದ್ಯಾರ್ಹತೆ:** ಯಾವುದೇ ಯುಜಿಸಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇ 60 ಅಂಕಗಳೊಂದಿಗೆ (ಪ್ರಥಮ ದರ್ಜೆ)/ ತತ್ಸಮಾನ ದರ್ಜೆಯ ಯಾವುದೇ ವಿಷಯದಲ್ಲಿ ಪದವೀಧರರಾಗಿರಬೇಕು.
- **ವಯೋಮಿತಿ:** ಮೇ 1, 2022ಕ್ಕೆ ಗರಿಷ್ಠ 26 ವರ್ಷಗಳು ವಯಸ್ಸಾಗಿರಬೇಕು.
- **ಅರ್ಜಿ ಶುಲ್ಕ (ಮರುಪಾವತಿಸಲಾಗದ):** ಸಾಮಾನ್ಯ ವರ್ಗಕ್ಕೆ ₹ 700, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ₹600 ಮತ್ತು ಜಿಎಸ್‌ಟಿ
- **ಆಯ್ಕೆ ವಿಧಾನ:** ಆನ್‌ಲೈನ್ ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಜೂನ್ ತಿಂಗಳಲ್ಲಿ ಪರೀಕ್ಷೆ ನಡೆಯಲಿದೆ.
- **ಪರೀಕ್ಷಾ ಕೇಂದ್ರಗಳು :** ಬೆಂಗಳೂರು, ಧಾರವಾಡ ಹುಬ್ಬಳ್ಳಿ, ಮಂಗಳೂರು, ಮುಂಬೈ, ಮೈಸೂರು, ನವದೆಹಲಿ ಮತ್ತು ಶಿವಮೊಗ್ಗ.

ಆನ್ ಲೈನ್ ಪರೀಕ್ಷೆಯ ಮಾದರಿ ಈ ಕೆಳಗಿನಂತಿರುತ್ತದೆ.

ಕ್ರ. ಸಂಖ್ಯೆ	ಪರೀಕ್ಷೆಯ ಹೆಸರು (ವಿಷಯ)	ಪ್ರಶ್ನೆಗಳ ಸಂಖ್ಯೆ	ಗರಿಷ್ಠ ಅಂಕಗಳು	ಅವಧಿ (ನಿಮಿಷಗಳಲ್ಲಿ)
1	ತಾರ್ಕಿಕತೆ ಸಾಮರ್ಥ್ಯ	40	40	30
2	ಆಂಗ್ಲ ಭಾಷೆ	40	40	30
3	ಸಾಂಖ್ಯಿಕ ಸಾಮರ್ಥ್ಯ	40	40	30
4	ಸಾಮಾನ್ಯ ಅರಿವು (ಬ್ಯಾಂಕಿಂಗ್ ಉದ್ಯಮದ ವಿಶೇಷ ಉಲ್ಲೇಖದೊಂದಿಗೆ)	40	40	25
5	ಕಂಪ್ಯೂಟರ್ ಜ್ಞಾನ	40	40	20
	ಮೊತ್ತ	200	200	135


ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ವೆಬ್ ಸೈಟ್ ನ್ನು ಪರಿಶೀಲಿಸಿ (https://karnatakabank.com/sites/default/files/2022-05/KBL-Clerks-Notification-2022.pdf)

ಮಾಹಿತಿ: ಬ್ರೆಟ್‌ಸಲ್ಯೂಷನ್ಸ್ (www.brets.in), ಸ್ಪರ್ಧಾತ್ಮಕ ತರಬೇತಿ ಕೇಂದ್ರ, ಬೆಂಗಳೂರು

ಉನ್ನತ ರ‍್ಯಾಂಕ್‌ಗೆ ಮೌಲಿಕ ಪ್ರಬಂಧ

ಗುರುರಾಜ್ ಎಸ್. ದಾವಣಗೆರೆ

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ–8



ಯುಪಿಎಸ್‌ಸಿ ಮುಖ್ಯ ಪರೀಕ್ಷೆಗೆ ತಯಾರಿ ನಡೆಸುವ ಪ್ರತಿಯೊಬ್ಬರೂ ಸಾಮಾನ್ಯ ಅಧ್ಯಯನದ ನಾಲ್ಕು ಪತ್ರಿಕೆಗಳ ಮೇಲೆ ಹೆಚ್ಚು ಗಮನ ಹರಿಸುತ್ತಾರೆ. ಆದರೆ ಮುಖ್ಯ ಪರೀಕ್ಷೆಯ ಮೊದಲ ಪತ್ರಿಕೆ ಪ್ರಬಂಧ ರಚನೆಯ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಶಾಲಾ ಸಮಯದಿಂದಲೂ ಪ್ರಬಂಧ ಬರೆಯುತ್ತಿದ್ದೇವೆ, ಅದಕ್ಕೇಕೆ ವಿಶೇಷ ತಯಾರಿ? ಎನ್ನುವ ಧೋರಣೆಯೂ ಅನೇಕರಲ್ಲಿ ಇರುತ್ತದೆ.

ವಾಸ್ತವವಾಗಿ ಯುಪಿಎಸ್‌ಸಿ ಮುಖ್ಯ ಪರೀಕ್ಷೆಯ ರ‍್ಯಾಂಕ್ ಹೆಚ್ಚಿಸುವಲ್ಲಿ ಪ್ರಬಂಧ ಪತ್ರಿಕೆಯ ಅಂಕಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಉಳಿದ ಎಂಟು ಪತ್ರಿಕೆಗಳಿಗೆ ನೀಡುವ ಪ್ರಾಮುಖ್ಯವನ್ನು ಪ್ರಬಂಧ ಪತ್ರಿಕೆಗೂ ನೀಡಿದರೆ ಮಾತ್ರ ಅಭ್ಯರ್ಥಿಗಳು ಸಂದರ್ಶನದ ಸುತ್ತಿಗೆ ಆಯ್ಕೆಯಾಗುವಲ್ಲಿ ಯಶಸ್ವಿಯಾಗುತ್ತಾರೆ. ಪ್ರಬಂಧ ಬರೆಯುವಲ್ಲಿ ಅಭ್ಯರ್ಥಿಗಳು ಬಳಸುವ ಪದಸಂಪತ್ತು, ವಾಕ್ಯರಚನಾ ಕೌಶಲ, ವಿಶ್ಲೇಷಣೆಗಳು ಇತರ ಪತ್ರಿಕೆಗಳ ಉತ್ತರಗಳ ಸತ್ವವನ್ನು ಹೆಚ್ಚಿಸುವಲ್ಲಿ ನೆರವಾಗುತ್ತವೆ.

> ಯುಪಿಎಸ್‌ಸಿ ಮುಖ್ಯ ಪರೀಕ್ಷೆಯ ರ‍್ಯಾಂಕ್ ಹೆಚ್ಚಿಸುವಲ್ಲಿ ಪ್ರಬಂಧ ಪತ್ರಿಕೆಯ ಅಂಕಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಅಭ್ಯರ್ಥಿಗಳು ಪ್ರಬಂಧದಲ್ಲಿ ಬಳಸುವ ಪದಸಂಪತ್ತು, ವಾಕ್ಯರಚನಾ ಕೌಶಲ, ವಿಶ್ಲೇಷಣೆಗಳು ಇತರ ಪತ್ರಿಕೆಗಳ ಉತ್ತರಗಳ ಸತ್ವವನ್ನು ಹೆಚ್ಚಿಸುವಲ್ಲಿ ನೆರವಾಗುತ್ತವೆ.

ಹತ್ತಲ್ಲ, ಇಪ್ಪತ್ತಲ್ಲ 250 ಅಂಕಗಳು!

ಶಾಲೆ ಮತ್ತು ಕಾಲೇಜು ವಿದ್ಯಾಭ್ಯಾಸದ ಪಠ್ಯಕ್ರಮದ ಭಾಷಾ ಪತ್ರಿಕೆಗಳಲ್ಲಿ ಹೆಚ್ಚೆಂದರೆ ಪ್ರಬಂಧ ರಚನೆಗೆ 20 ಅಂಕಗಳಿರುತ್ತವೆ. ಎರಡು ವಿಷಯಗಳನ್ನು ನೀಡಿ ಒಂದಕ್ಕೆ ಉತ್ತರಿಸುವಂತೆ ಕೇಳಿರುತ್ತಾರೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪ್ರಬಂಧಗಳಿಗೆ ನಿಗದಿಯಾದ ಒಟ್ಟು ಅಂಕಗಳು ಬರೋಬ್ಬರಿ 250! ಅಭ್ಯರ್ಥಿಗಳು 125 ಅಂಕಗಳ ಎರಡು ಪ್ರಬಂಧ ಬರೆಯಬೇಕು. ಪ್ರಶ್ನೆಪತ್ರಿಕೆಯಲ್ಲಿ ಎರಡು ವಿಭಾಗಗಳಿದ್ದು ಪ್ರತಿ ವಿಭಾಗದಲ್ಲಿ ನಾಲ್ಕು ವಿಷಯಗಳಿರುತ್ತವೆ. ಎರಡೂ ವಿಭಾಗಗಳಿಂದ ಒಂದೊಂದು ವಿಷಯ ಆಯ್ದುಕೊಂಡು 1000 ರಿಂದ 1200 ಪದಗಳ ಮಿತಿಯೊಳಗೆ ಪ್ರಬಂಧ ಬರೆಯಬೇಕೆಂಬ ನಿಬಂಧನೆಯಿದೆ. ವಿಷಯಕ್ಕೆ ಪೂರಕವಾಗುವ ಅಂಶಗಳನ್ನು ಸಮರ್ಥವಾಗಿ ಬರೆದರೆ 200 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಲು ಸಾಧ್ಯವಿದೆ.

ಒಂದೇ ಅಂಶದ ಜಪ ಬೇಡ

ಯಾವುದೇ ವಿಷಯಕ್ಕೆ ಸಂಬಂಧಪಡುವ ಅನೇಕ ಅಂಶಗಳಿರುತ್ತವೆ. ನಿಮಗೆ ಇಷ್ಟವೆನಿಸುವ ಒಂದೇ ಅಂಶವನ್ನು ಇಡೀ ಪ್ರಬಂಧದುದ್ದಕ್ಕೂ ಲಂಬಿಸಬೇಡಿ. ವಿಷಯದ ಮುಖ್ಯಾಂಶ, ಬೇಡಿಕೆ ಮತ್ತು ಉದ್ದೇಶಕ್ಕನುಗುಣವಾಗಿ ಸರಳ ಭಾಷೆಯಲ್ಲಿ, ವ್ಯಾಕರಣಬದ್ಧವಾಗಿ ಪ್ರಬಂಧ ಬರೆಯಿರಿ. ಒಂದು ವಿಷಯವನ್ನು ಹಲವು ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಸಾಧ್ಯತೆಗಳಿರುತ್ತವೆ. ಅದರ ಸದುಪಯೋಗ ಪಡೆಯಿರಿ. ವಿಷಯಾಂತರ ಮಾಡಿ ಏನೇನೋ ಬರೆಯಬೇಡಿ. ಬಹುತೇಕ ವಿಷಯಗಳು ಸಮಕಾಲೀನ ಸಾಮಾಜಿಕ ವ್ಯವಸ್ಥೆ, ಬದುಕು, ಆರ್ಥಿಕತೆ, ಶಿಕ್ಷಣರಂಗ, ತಂತ್ರಜ್ಞಾನ ಸಾಧನೆ - ಸಂಬಂಧಗಳ ಕುರಿತೇ ಆಗಿರುತ್ತವೆ. ಪುರುಷ ಪ್ರಾಧಾನ್ಯವನ್ನು ಪ್ರಶ್ನಿಸುವ ಮಹಿಳಾಪರ ವಿಷಯಗಳೂ ಇರುತ್ತವೆ.

ವಿಷಯದ ಆಯ್ಕೆ ಭಿನ್ನವಾಗಿರಲಿ

ಪತ್ರಿಕೆಯಲ್ಲಿ ಎಂಟು ವಿವಿಧ ವಿಷಯಗಳಿದ್ದು ಒಂದಕ್ಕಿಂತ ಒಂದು ಭಿನ್ನವಾಗಿರುತ್ತವೆ. ಬರೆಯಲು ಪ್ರಾರಂಭಿಸುವ ಮುನ್ನ ಆಯ್ಕೆ ಮಾಡಿಕೊಳ್ಳುವ ವಿಷಯಗಳು ಒಂದಕ್ಕೊಂದು ಸಂಬಂಧ ಪಡದಿದ್ದರೆ ಒಳ್ಳೆಯದು. ಆಗ ನಿಮಗೆ ವಿಭಿನ್ನ ವಿಷಯಗಳ ಬಗ್ಗೆ ಸಮರ್ಥವಾಗಿ ಬರೆಯುವ ಅವಕಾಶ ಸಿಗುತ್ತದೆ. ಉದಾಹರಣೆಗೆ ಭಾಗ ಒಂದರಿಂದ ವಿಜ್ಞಾನ – ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯ ಆಯ್ದುಕೊಂಡರೆ ಭಾಗ ಎರಡರಿಂದ ತತ್ವಶಾಸ್ತ್ರ, ಮಾನವಿಕ, ಜೀವವೈವಿಧ್ಯ, ಅಂತರ್ ವಿಮರ್ಶೆ, ಆತ್ಮಾವಲೋಕನದ ವಿಷಯವನ್ನು ಆಯ್ದುಕೊಂಡು ಬರೆಯುವ ಪ್ರಯತ್ನ ಮಾಡಿರಿ.

'ಕೋಟ್ – ಅನ್‌ಕೋಟ್'

ಪ್ರಬಂಧದಲ್ಲಿ ಯಾವುದಾದರೂ ಸಾಧಕರ, ತಜ್ಞರ, ನಾಯಕರ ಹೇಳಿಕೆಗಳನ್ನು ಉದಾಹರಿಸುವುದಾದರೆ ಅದನ್ನು ಪೂರ್ತಿಯಾಗಿ ತಪ್ಪಿಲ್ಲದೆ ಬರೆಯಿರಿ. ಇಸವಿ, ಅಂಕಿ – ಅಂಶಗಳೂ ಸರಿಯಾಗಿರಲಿ. ಪುಸ್ತಕದ ಹೆಸರು, ಲೇಖನ – ವರದಿಯ ಉಲ್ಲೇಖಗಳಿಗೆ ಸರಿಯಾದ ದಾಖಲೆ ಇರಲಿ. ಯಾವುದೇ ಸಂಸ್ಥೆ, ಸರ್ಕಾರ, ವ್ಯಕ್ತಿಯ ಕುರಿತಾದ ಒಮ್ಮುಖದ ಟೀಕೆ ಬೇಡ. ವಿಷಯ ಮಂಡನೆಯಲ್ಲಿ ಸಮಸ್ಯೆಗಳನ್ನು ಮಾತ್ರ ಹೇಳಿದರೆ ಸಾಲದು. ಪರಿಹಾರವನ್ನೂ ಸೂಚಿಸಿರಿ. ಎಷ್ಟೋ ವಿಚಾರಗಳು ಪ್ರಬಂಧಕ್ಕಿಂತ ಚರ್ಚೆಯ ವಿಷಯಗಳಂತಿರುತ್ತವೆ. ರೇಗಿಸುವಂತಿರುತ್ತವೆ. ಪ್ರಚೋದನೆಗೊಳಗಾಗದೆ ನಿಮ್ಮ ನಿಲುವನ್ನು ಮಂಡಿಸಿ. ತೀರಾ ಆದರ್ಶಮಯ ಹೇಳಿಕೆ, ಪರಿಹಾರ, ಊಹಾತ್ಮಕ, ಕಾಲ್ಪನಿಕ ಮಂಡನೆ ಬೇಡ. ಪ್ರಬಂಧ ವರದಿಯಂತಿರಬಾರದು. ಪ್ರಬಂಧದ ಧ್ವನಿ ಸಕಾರಾತ್ಮಕವಾಗಿರಲಿ. ಯಾವುದೋ ಒಂದು ಬದ್ಧತೆ ನಿಲುವಿಗೆ ಅಂಟಿಕೊಳ್ಳದೆ ಸಮನ್ವಯದ ನಿಲುವು ಪ್ರತಿಪಾದಿಸಿರಿ. ನೀವು ಅಧಿಕಾರಿಯಾಗುವವರು, ಜರ್ನಲಿಸ್ಟ್ ಅಲ್ಲ ಎಂಬುದನ್ನು ಮರೆಯದಿರಿ.

ವಿಶ್ಲೇಷಣಾತ್ಮಕ '360°' ಉತ್ತರ ಬೇಕು

ಪ್ರಬಂಧಕ್ಕೆ ಕೊಡುವ ವಿಷಯಗಳು ಅತ್ಯಂತ ಗಹನವಾಗಿರುತ್ತವೆ. ಅಭ್ಯರ್ಥಿಯ ಬುದ್ಧಿಶಕ್ತಿ, ಸಾಮಾಜಿಕ ಜ್ಞಾನ ವಾಕ್ಯರಚನಾ ಶೈಲಿ ಮತ್ತು ಭಾಷಾ ಪ್ರೌಢಿಮೆಯನ್ನು ಒರೆಗೆ ಹಚ್ಚುವ ವಿಷಯಗಳು ವಿಚಿತ್ರವೂ, ವಿಶೇಷವೂ ಕೆಲವೊಮ್ಮೆ ಅತಿ ಸವಾಲಿನವೂ ಆಗಿರುತ್ತವೆ. ಉದಾಹರಣೆಗೆ 'ಟೆಕ್ನಾಲಜಿ ಆ್ಯಸ್ ಸೈಲೆಂಟ್ ಫ್ಯಾಕ್ಟ್ರ್ಸ್ ಇನ್ ಇಂಟರ್‌ನ್ಯಾಷನಲ್ ರಿಲೇಶನ್ಸ್' ಎಂಬ ವಿಷಯವನ್ನೇ ಗಮನಿಸಿ. ಸಾವಿರ ಪದಗಳಿಗೆ ಹೊಂದುವಂತೆ ತಂತ್ರಜ್ಞಾನ ಮತ್ತು ಅಂತರರಾಷ್ಟ್ರೀಯ ಸಂಬಂಧಗಳೆರಡನ್ನೂ ಗಮನದಲ್ಲಿಟ್ಟುಕೊಂಡು ಪ್ರಬಂಧ ಬರೆಯಬೇಕು. ಅದಕ್ಕಾಗಿ ವಿಶೇಷ ಅಧ್ಯಯನ ಆಗಿರಬೇಕು.

ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ನಮ್ಮ ದೇಶದ ಸಾಧನೆ, ಹೊರದೇಶಗಳಿಂದ ತಂತ್ರಜ್ಞಾನ ಆಮದು, ಇಲ್ಲಿಂದ ನಡೆಯುವ ರಫ್ತು, ಅಂತರರಾಷ್ಟ್ರೀಯ ವ್ಯಾಪಾರ ನೀತಿ, ಆಂತರಿಕ ಆಮದು – ರಫ್ತು ನೀತಿ, ಇಲ್ಲಿನ ಉದ್ಯಮಗಳ ಪರ – ವಿರೋಧದ ನಿಲುವು, ಸಾಮರ್ಥ್ಯ, ಆರ್ಥಿಕ ಲಾಭ - ನಷ್ಟ ಮತ್ತು ವಿಶ್ವ ಮಾರುಕಟ್ಟೆಯಲ್ಲಿ ನಮ್ಮ ತಂತ್ರಜ್ಞಾನದ ಬಗೆಗಿರುವ ಬೆಲೆಯ ಅಂಶಗಳನ್ನೆಲ್ಲಾ ಪ್ರಬಂಧದ ಭಾಗವನ್ನಾಗಿಸಬೇಕು. ಇತ್ತೀಚಿನ ಸಾಧನೆಗಳ ಕುರಿತು ಬರೆಯಬೇಕು.

ಉದಾಹರಣೆಗೆ 1998ರಲ್ಲಿ ಪೊಖ್ರಾನ್‌ನಲ್ಲಿ ಅಣು ಬಾಂಬ್ ಸಿಡಿಸಿದ ನಮ್ಮ ದೇಶದ ಸಾಧನೆಯ ಕುರಿತು ವಿಶ್ವದಾದ್ಯಂತ ಪರ – ವಿರೋಧದ ಹೇಳಿಕೆಗಳು ವ್ಯಕ್ತವಾಗಿದ್ದವು. ಅದು ನಮ್ಮ ತಂತ್ರಜ್ಞಾನದ ಅತಿ ದೊಡ್ಡ ಸಾಧನೆಯಾಗಿತ್ತು. ನ್ಯೂಕ್ಲಿಯರ್ ಕ್ಲಬ್ ಸೇರಿಕೊಂಡ ಹೆಮ್ಮೆ ನಮ್ಮದಾಗಿತ್ತು. ಇದನ್ನು ಸಹಿಸದ ಹಿರಿ-ಕಿರಿಯ ದೇಶಗಳು ಭಾರತದೊಂದಿಗಿನ ವ್ಯಾಪಾರ – ವಹಿವಾಟಿನ ಒಪ್ಪಂದಗಳನ್ನು ಕಡಿದುಕೊಳ್ಳುವ ನಿಲುವು ವ್ಯಕ್ತ ಪಡಿಸಿದ್ದವು! ನಾವು ಶಾಂತಿ - ಸ್ವಸುರಕ್ಷತೆಗಾಗಿ ಈ ಪ್ರಯೋಗ ಎಂಬ ನಿಲುವು ತಾಳಿದ್ದರಿಂದ ಹೆಚ್ಚಿನ ಗೊಂದಲ ಮುಂದುವರಿಯಲಿಲ್ಲ. ಪ್ರಬಂಧದಲ್ಲಿ ಈ ಅಂಶಗಳು ಕಾಣಿಸಿಕೊಂಡರೆ ಅದರ ತೂಕವೇ ಬೇರೆ!

'ಕಲ್ಚರ್ ಈಸ್ ವಾಟ್ ವಿ ಆರ್, ಸಿವಿಲೈಜೇಶನ್ ಈಸ್ ವಾಟ್ ವಿ ಹ್ಯಾವ್', 'ಸಿಂಪ್ಲಿಸಿಟಿ ಈಸ್ ದ ಅಲ್ಟಿಮೇಟ್ ಸೋಫಿಸ್ಟಿಕೇಶನ್', 'ದಿ ಪ್ರೊಸೆಸ್ ಆಫ್ ಸೆಲ್ಫ್ ಡಿಸ್ಕವರಿ ಹ್ಯಾಸ್ ನೌ ಬೀನ್ ಟೆಕ್ನಾಲಜಿಕಲಿ ಔಟ್ ಸೋರ್ಸ್ಡ್', 'ದಿ ರಿಯಲ್ ಈಸ್ ರ‍್ಯಾಶನಲ್ ಅಂಡ್‌ದ ರ‍್ಯಾಶನಲ್ ಈಸ್ ರಿಯಲ್', 'ಹಿಸ್ಟರಿ ರಿಪೀಟ್ಸ್ ಇಟ್‌ಸೆಲ್ಫ್, ಫಸ್ಟ್ ಆ್ಯಸ್ ಟ್ರ್ಯಾಜಿಡಿ, ಸೆಕೆಂಡ್ ಆ್ಯಸ್ ಫಾರ್ಸ್'..ಹೀಗೆ ಜೀವನದ ಹಲವು ಮಗ್ಗುಲುಗಳನ್ನು ಸ್ಪರ್ಶಿಸುವ ಸಂಕೀರ್ಣ ವಿಷಯಗಳು ಪ್ರಬಂಧದ ಪತ್ರಿಕೆಯಲ್ಲಿರುತ್ತವೆ. ಹೆಣ್ಣುಮಕ್ಕಳ ಕಾರ್ಯಕ್ಷಮತೆಯನ್ನು ಹೊಗಳುವ 'ಹ್ಯಾಂಡ್ ದಟ್ ರಾಕ್ಸ್ ದಿ ಕ್ರೇಡಲ್, ರೂಲ್ಸ್ ದಿ ವರ್ಲ್ಡ್', ಶ್ರೇಷ್ಠತೆಯ ಪರಿಕಲ್ಪನೆಯನ್ನು ಪ್ರಶ್ನಿಸುವ 'ದೇರ್ ಆರ್ ಬೆಟರ್ ಪ್ರಾಕ್ಟೀಸಸ್ ಟು ಬೆಸ್ಟ್ ಪ್ರಾಕ್ಟೀಸಸ್, ಸಂಶೋಧನೆಯನ್ನು ಟೀಕಿಸುವ 'ವಾಟ್ ಈಸ್ ರಿಸರ್ಚ್, ಎ ಬ್ಲೈಂಡ್ ಥೇಟ್ ವಿಥ್ ನಾಲೆಡ್ಜ್' ಎಂಬ ಹೇಳಿಕೆಗಳನ್ನು ಪ್ರಬಂಧಗಳನ್ನಾಗಿ ವಿಸ್ತರಿಸುವ ಕ್ಷಮತೆ ಅಭ್ಯರ್ಥಿಗಳಿಗೆ ಬೇಕು. ಅದಕ್ಕಾಗಿ ವಿಸ್ತೃತ ಅಧ್ಯಯನ ಮಾಡಿರಲೇಬೇಕು.

(ಮುಂದಿನವಾರ ಪಾಠ–9: ಕಡ್ಡಾಯ ಪತ್ರಿಕೆ ಎ ಮತ್ತು ಬಿ ಎದುರಿಸುವುದು ಹೇಗೆ?)

ಅಸಿಸ್ಟೆಂಟ್ ಕಮಾಂಡೆಂಟ್ ಹುದ್ದೆ

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಹೇಗೆ?



ಕಾರ್ತಿಕ್

ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಾದ ಬಿಎಸ್‌ಎಫ್, ಸಿಐಎಸ್, ಎಫ್‌ಸಿಆರ್‌ಪಿಎಫ್, ಐಟಿಡಿಪಿ ಮತ್ತು ಎಸ್‌ಎಸ್‌ಬಿ ವಿಭಾಗಗಳಲ್ಲಿ ಖಾಲಿ ಇರುವ 253 'ಅಸಿಸ್ಟೆಂಟ್ ಕಮಾಂಡೆಂಟ್' ಹುದ್ದೆಗಳ ಭರ್ತಿಗಾಗಿ ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಅಧಿಸೂಚನೆ ಪ್ರಕಾರ, ಆಗಸ್ಟ್ 7ರಂದು ಪರೀಕ್ಷೆ ನಿಗದಿಯಾಗಿದೆ.

ಅಸಿಸ್ಟೆಂಟ್ ಕಮಾಂಡೆಂಟ್ ಹುದ್ದೆಯು ಗ್ರೂಪ್-ಎ ದರ್ಜೆಯ ಗೆಜೆಟೆಡ್ ಅಧಿಕಾರಿ ಹುದ್ದೆಯಾಗಿದೆ. ಇದು ಪೊಲೀಸ್ ಇಲಾಖೆಯ ಡೆಪ್ಯುಟಿ ಸೂಪರಿಂಟೆಂಡ್ (Deputy superintendent) ಹುದ್ದೆಗೆ ಸಮಾನಾಂತರ ಹುದ್ದೆಯಾಗಿದೆ. ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಯು ಐಜಿ(ಇನ್‌ಸ್ಪೆಕ್ಟರ್ ಜನರಲ್) ಮತ್ತು ಎಡಿಜಿ ರ‍್ಯಾಂಕ್‌ಗಳವರೆಗೆ ಪದೋನ್ನತಿ ಪಡೆಯಬಹುದು.

ಲಿಖಿತ ಪರೀಕ್ಷೆ, ದೇಹದಾರ್ಢ್ಯತೆ ಮತ್ತು ಸಹಿಷ್ಣುತೆ ಪರೀಕ್ಷೆ ಹಾಗೂ ಸಂದರ್ಶನ – ಹೀಗೆ ಮೂರು ಹಂತಗ ಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಪರೀಕ್ಷಾ ಸಿದ್ಧತೆಗೆ ಸೂತ್ರಗಳು

ಲಿಖಿತ ಪರೀಕ್ಷೆಯಲ್ಲಿ ಮುಖ್ಯವಾಗಿ ಅಭ್ಯರ್ಥಿಯ ಸಾಮಾನ್ಯ ಜ್ಞಾನವನ್ನು ಪರೀಕ್ಷಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಯು ಸಾಮಾನ್ಯ ಜ್ಞಾನ ಅಧ್ಯಯನಕ್ಕೆ ಆದ್ಯತೆ ನೀಡಬೇಕು.

- ಸಾಮಾನ್ಯ ವಿಜ್ಞಾನಕ್ಕಾಗಿ 6ರಿಂದ 12 ನೇ ತರಗತಿಯವರೆಗಿನ ಎನ್‌ಸಿಇಆರ್‌ಟಿ ಪುಸ್ತಕಗಳನ್ನು ಅಭ್ಯಸಿಸಬೇಕು.
- ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಸಂಸ್ಥೆಗಳು ಲಭ್ಯವಿದ್ದು, ಅನುಕೂಲವಿದ್ದಲ್ಲಿ, ಆ ಸಂಸ್ಥೆಗಳ ನೆರವನ್ನೂ ಪಡೆಯಬಹುದು.
- ಪ್ರತಿನಿತ್ಯ ದಿನಪತ್ರಿಕೆಗಳನ್ನು ಓದುತ್ತಾ ಪ್ರಚಲಿತ ವಿದ್ಯಮಾನಗಳನ್ನು ಟಿಪ್ಪಣಿ ಮಾಡಿಟ್ಟುಕೊಳ್ಳಬೇಕು.
- ಪುಸ್ತಕಗಳು, ಪತ್ರಿಕೆಗಳನ್ನು ಓದುವ ಜೊತೆಗೆ, ಈ ಸ್ಪರ್ಧಾತ್ಮಕ ಪರೀಕ್ಷೆಯ ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಬೇಕು(ಉತ್ತರಿಸಬೇಕು). ಜೊತೆಗೆ, ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವ ಮೂಲಕ ಅಭ್ಯಾಸ ಮಾಡಬೇಕು.
- ವೇಳಾಪಟ್ಟಿ ಪ್ರಕಾರ ಎಲ್ಲ ವಿಷಯಗಳನ್ನು ವಿಂಗಡಿಸಿಕೊಂಡು ಅಧ್ಯಯನ ಮಾಡಬೇಕು. ಲಿಖಿತ ಪರೀಕ್ಷೆಯ ಜೊತೆಗೆ, ದೇಹದಾರ್ಢ್ಯ ಪರೀಕ್ಷೆಯನ್ನೂ ಎದುರಿಸಬೇಕಾಗಿರುವುದರಿಂದ, ಪ್ರತಿನಿತ್ಯದ ವೇಳಾಪಟ್ಟಿಯಲ್ಲಿ, ದೈಹಿಕ ಕಸರತ್ತಿಗೂ ಸಮಯ ನಿಗದಿಮಾಡಿಕೊಳ್ಳಬೇಕು.

ಲಿಖಿತ ಪರೀಕ್ಷೆ

ಲಿಖಿತ ಪರೀಕ್ಷೆಯಲ್ಲಿ ಎರಡು ಪ್ರಶ್ನೆ ಪತ್ರಿಕೆಗಳಿರುತ್ತವೆ. ಎರಡನ್ನೂ ಒಂದೇ ದಿನ ನಡೆಸಲಾಗುತ್ತದೆ.

ಪತ್ರಿಕೆ-1 : ಇದು ಎರಡು ಗಂಟೆಗಳ ಅವಧಿಯ 250 ಅಂಕಗಳ ಪರೀಕ್ಷೆಯಾಗಿದೆ. ಸಾಮಾನ್ಯ ಸಾಮರ್ಥ್ಯ ಮತ್ತು ಬುದ್ಧಿವಂತಿಕೆ ಪರೀಕ್ಷಿಸುವ ಪತ್ರಿಕೆ. ಅಭ್ಯರ್ಥಿಗಳಲ್ಲಿರುವ ಪ್ರಚಲಿತ ವಿದ್ಯಮಾನ, ಸಾಮಾನ್ಯ ವಿಜ್ಞಾನ, ಗ್ರಹಿಕಾ ಸಾಮರ್ಥ್ಯ, ಸಾಮಾನ್ಯ ಜ್ಞಾನವನ್ನು ಪರೀಕ್ಷಿಸಲಾಗುತ್ತದೆ.

ಪತ್ರಿಕೆ-2: ಇದು ಮೂರು ಗಂಟೆಗಳ ಅವಧಿಯ 200 ಅಂಕಗಳ ಪರೀಕ್ಷೆ. ಅಭ್ಯರ್ಥಿಯಲ್ಲಿರುವ ಬರಹದ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ. ಈ ಪತ್ರಿಕೆಯಲ್ಲಿ ಪ್ರಬಂಧ, ಸಾರಾಂಶ ಬರವಣಿಗೆ ಕುರಿತು ಪ್ರಶ್ನೆಗಳಿರುತ್ತವೆ. ಅಭ್ಯರ್ಥಿಯು ಪ್ರಬಂಧವನ್ನು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ಮಾತ್ರ ಬರೆಯಲು ಅವಕಾಶ ನೀಡಲಾಗಿದೆ. ಮಾದರಿ ಪ್ರಬಂಧಗಳನ್ನು ಅಭ್ಯಸಿಸುವ ಮೂಲಕ ಯಶಸ್ಸು ಗಳಿಸಬಹುದು.

ದೇಹದಾರ್ಢ್ಯ ಪರೀಕ್ಷೆ

ಲಿಖಿತ ಪರೀಕ್ಷೆ ನಂತರ, ಅಭ್ಯರ್ಥಿಗಳ ದೇಹದಾರ್ಢ್ಯತೆ ಮತ್ತು ಸಹಿಷ್ಣುತೆ ಪರೀಕ್ಷೆ ನಡೆಯುತ್ತದೆ. 100 ಮೀ ಹಾಗೂ 800 ಮೀ ಓಟ, ಗುಂಡು ಎಸೆತದಂತಹ ಸ್ಪರ್ಧೆಗಳಿರುತ್ತವೆ. ಪುರುಷರು 16 ಸೆಕೆಂಡ್, ಮಹಿಳೆಯರು ಮಹಿಳೆಯರು 18 ಸೆಕೆಂಡ್‌ಗಳಲ್ಲಿ 100 ಮೀ ಗುರಿ ತಲುಪಬೇಕು. 800 ಮೀಟರ್ ಸ್ಪರ್ಧೆಯಲ್ಲಿ ಪುರುಷರು 3 ನಿ. 45 ಸೆಕೆಂಡ್‌ನಲ್ಲಿ ಹಾಗೂ ಮಹಿಳೆಯರು 4 ನಿ. 45 ಸೆಕೆಂಡ್‌ನಲ್ಲಿ ಗುರಿ ಮುಟ್ಟಬೇಕು. ಉದ್ದ ಜಿಗಿತ ಸ್ಪರ್ಧೆಯಲ್ಲಿ ಪುರುಷರಿಗೆ 3.5 ಮೀ, ಮಹಿಳೆಯರಿಗೆ 3 ಮೀ ಗುರಿ ನಿಗದಿಪಡಿಸಲಾಗಿದೆ. ಗುಂಡು ಎಸೆತ ಪುರುಷರಿಗೆ ಮಾತ್ರ ಇದ್ದು, 4.5 ಮೀ ಗುರಿ ನಿಗದಿಪಡಿಸಲಾಗಿದೆ.

ಸಂದರ್ಶನ/ ವ್ಯಕ್ತಿತ್ವ ಪರೀಕ್ಷೆ

ಇದು 150 ಅಂಕಗಳಿಗೆ ನಡೆಯುವ ಪರೀಕ್ಷೆ. ಹಂತ 1 ಮತ್ತು ಹಂತ 2 ರಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ವ್ಯಕ್ತಿತ್ವವನ್ನು ಪರೀಕ್ಷಿಸಲು ಕೇಂದ್ರ ಲೋಕಸೇವಾ ಆಯೋಗದಿಂದ(ಯುಪಿಎಸ್‌ಸಿ) ಸಂದರ್ಶನ ನಡೆಸಲಾಗುವುದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ಮೆರಿಟ್ ಮೂಲಕ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗುವುದು.

ಹೆಚ್ಚಿನ ಮಾಹಿತಿಗೆ: www.upsconline.nic.in, upsc.gov.in/Notification

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ
ಆತ್ಮಗೌರವವನ್ನು ಬಿಟ್ಟುಕೊಟ್ಟು ಉಳಿಸಿಕೊಳ್ಳಬೇಕಾದ ಯಾವ ಕಲೆಯೂ ಪ್ರಪಂಚದಲ್ಲಿ ಇಲ್ಲ.
-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಸುಪ್ರೀಂ ಕೋರ್ಟ್ ತೀರ್ಪು ಪಾಲಿಸಿ

ಸ್ಥಳೀಯ ಸಂಸ್ಥೆಗಳ ಅಧಿಕಾರದ ಅವಧಿ ಪೂರ್ಣಗೊಂಡ ಬಳಿಕ ನಿರ್ವಾತ ಸೃಷ್ಟಿಯಾಗಲು ಅವಕಾಶ ಕೊಡದೆ ಸಕಾಲದಲ್ಲಿ ಚುನಾವಣೆ ನಡೆಸಬೇಕಾದುದು ಪ್ರತಿಯೊಂದು ರಾಜ್ಯ ಸರ್ಕಾರದ ಸಾಂವಿಧಾನಿಕ ಹೊಣೆ. ಆದರೆ, ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯ ಸರ್ಕಾರಗಳು ಈ ವಿಷಯದಲ್ಲಿ ಹೊಣೆಗೇಡಿತನ ಪ್ರದರ್ಶಿಸುತ್ತಾ ಬಂದಿವೆ. ಚುನಾವಣೆ ನಡೆಸುವಂತೆ ಕೋರ್ಟ್‌ಗಳಿಂದ ಪದೇ ಪದೇ ನಿರ್ದೇಶನ ಪಡೆಯುವುದು ಅವುಗಳ ಪಾಲಿಗೆ ಮಾಮೂಲು ಚಾಳಿಯಾಗಿಬಿಟ್ಟಿದೆ. ಈಗ ಮತ್ತೆ ಅಂತಹದ್ದೇ ಸಂದರ್ಭ ಸೃಷ್ಟಿಯಾಗಿದ್ದು, ಎರಡು ವಾರಗಳಲ್ಲಿ ಚುನಾವಣೆಗೆ ಅಧಿಸೂಚನೆಯನ್ನು ಹೊರಡಿಸುವಂತೆ ಮಧ್ಯಪ್ರದೇಶ ರಾಜ್ಯ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ. ಚುನಾವಣೆ ಬಾಕಿ ಇರುವ ಸ್ಥಳೀಯ ಸಂಸ್ಥೆಗಳಿಗೆ ವಿಳಂಬ ಇಲ್ಲದೆ ಚುನಾವಣೆ ನಡೆಸಬೇಕು ಎಂದು ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಇದು ಇಡೀ ದೇಶಕ್ಕೆ ಅನ್ವಯ ಆಗಲಿದೆ. ಕರ್ನಾಟಕದಲ್ಲೂ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಯನ್ನು ಒಂದು ವರ್ಷದಿಂದ ಮುಂದೂಡುತ್ತಾ ಬರಲಾಗಿದೆ. 2020ರ ಸೆಪ್ಟೆಂಬರ್‌ನಲ್ಲಿಯೇ ನಡೆಯಬೇಕಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾವಣೆ ಕೂಡ ಇದುವರೆಗೆ ನಡೆದಿಲ್ಲ. ಸಕಾಲದಲ್ಲಿ ಚುನಾವಣೆಯನ್ನು ನಡೆಸದ ಸರ್ಕಾರ, ಆ ಮೂಲಕ ಮತದಾರನ ಹಕ್ಕನ್ನು ಮೊಟಕುಗೊಳಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನೂ ಶಿಥಿಲಗೊಳಿಸಿದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ನಿಖರ ದತ್ತಾಂಶಗಳ ಆಧಾರದಲ್ಲಿ ಗುರುತಿಸಿ, ಮೀಸಲಾತಿಯನ್ನು ಖಾತರಿಪಡಿಸುವ ವಿಷಯದಲ್ಲಿ ವಿಳಂಬ ಧೋರಣೆ ಅನುಸರಿಸಿ ಹಿಂದುಳಿದ ವರ್ಗಗಳಿಗೂ ಅನ್ಯಾಯ ಮಾಡಿದೆ. ಈ ಮೂರೂ ಲೋಪಗಳ ಮೂಲಕ ಸಂವಿಧಾನದ ಆಶಯಗಳನ್ನೇ ಗಾಳಿಗೆ ತೂರಿದೆ. ಹೀಗಾಗಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಈಗ ಸೃಷ್ಟಿಯಾಗಿರುವ ಎಲ್ಲ ಬಿಕ್ಕಟ್ಟುಗಳಿಗೂ ರಾಜ್ಯ ಸರ್ಕಾರವೇ ನೇರ ಹೊಣೆ. ಎಲ್ಲ ಸಿಕ್ಕುಗಳನ್ನು ಬಿಡಿಸಿಕೊಂಡು, ಯಾರಿಗೂ ಅನ್ಯಾಯವಾಗದಂತೆ ಬೇಗ ಚುನಾವಣೆ ನಡೆಸುವ ದಾರಿಯನ್ನು ಈಗ ಅದೇ ಕಂಡುಕೊಳ್ಳಬೇಕಿದೆ.



ಈಗ ಸೃಷ್ಟಿಯಾಗಿರುವ ಎಲ್ಲ ಗೋಜಲುಗಳನ್ನೂ ಬಿಡಿಸಿಕೊಂಡು, ಯಾರಿಗೂ ಅನ್ಯಾಯವಾಗದಂತೆ ಬೇಗ ಚುನಾವಣೆ ನಡೆಸುವ ದಾರಿಯನ್ನು ಸರ್ಕಾರವೇ ಕಂಡುಕೊಳ್ಳಬೇಕಿದೆ

ಪ್ರಜಾಪ್ರಭುತ್ವದ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಗೆ ಬುನಾದಿ ರೂಪದಲ್ಲಿರುವುದು ಸ್ಥಳೀಯ ಸಂಸ್ಥೆ. ಅದು ಗಟ್ಟಿಗೊಂಡಷ್ಟೂ ಪ್ರಜಾಪ್ರಭುತ್ವ ಗಟ್ಟಿಗೊಳ್ಳುತ್ತದೆ. ಸಮುದಾಯದ ಸಹಭಾಗಿತ್ವ ಹೆಚ್ಚಿದಷ್ಟೂ ಆಡಳಿತ ಚೆಲುವು ಪಡೆದುಕೊಳ್ಳುತ್ತದೆ. ಆದರೆ, ಆಡಳಿತ ವ್ಯವಸ್ಥೆಯ ಮೊದಲ ಮೆಟ್ಟಿಲಿನಂತಿರುವ ಸ್ಥಳೀಯ ಸಂಸ್ಥೆಗಳನ್ನು ಶಿಥಿಲಗೊಳಿಸುವ ಕೆಲಸ ಇತ್ತೀಚಿನ ವರ್ಷಗಳಲ್ಲಿ ಎಗ್ಗಿಲ್ಲದೆ ನಡೆಯುತ್ತಿದೆ. ಅಂತಹ ಪ್ರಮಾದ ಎಸಗುವಲ್ಲಿ ಚುನಾವಣೆಯನ್ನು ಮುಂದೂಡುವುದು ಸರ್ಕಾರದ ಪಾಲಿಗೆ ಸುಲಭವಾಗಿ ಸಿಕ್ಕಿರುವ ಅಸ್ತ್ರ. ಸ್ಥಳೀಯ ಮಟ್ಟದಲ್ಲಿ ತಮ್ಮದೇ ರಾಜ್ಯಭಾರ ನಡೆಯುವಂತಾಗಲು ಹಲವು ಶಾಸಕರಿಗೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುವುದು ಬೇಕಾಗಿಲ್ಲ. ಅವರ ತಾಳಕ್ಕೆ ತಕ್ಕಂತೆ ಸರ್ಕಾರದ ಹೊಣೆ ಹೊತ್ತವರೂ ಕುಣಿಯುವಂತಾಗಿದ್ದು ದುರದೃಷ್ಟಕರ. ಚುನಾವಣೆಯನ್ನು ಮುಂದೂಡಲು ಮೀಸಲಾತಿ ನಿರ್ಧಾರವಾಗದೇ ಇರುವುದು ಕಾರಣ ಎಂಬ ನೆಪವನ್ನು ಸರ್ಕಾರ ಹೇಳುತ್ತಿದೆ. ಮೀಸಲಾತಿಗೆ ಸಂಬಂಧಿಸಿದ ತೊಡಕುಗಳನ್ನು ತ್ವರಿತವಾಗಿ ನಿವಾರಿಸಲು ಅಡ್ಡಿಪಡಿಸಿದವರು ಯಾರು? ಮೂರು ಹಂತಗಳ ಪರಿಶೀಲನೆ ನಡೆಸಿ, ಮೀಸಲಾತಿಯನ್ನು ನಿಗದಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿ ಹನ್ನೆರಡು ವರ್ಷಗಳೇ ಆಗಿವೆ. ಕಳೆದ ವರ್ಷದ ಮಾರ್ಚ್‌ನಲ್ಲೂ ಕೋರ್ಟ್ ಇದೇ ಮಾತನ್ನು ಪುನರುಚ್ಚರಿಸಿದೆ. ಬೇಕಾದಷ್ಟು ಅವಕಾಶವಿದ್ದರೂ ಕಾಲಹರಣ ಮಾಡಿ, ಈಗ ಮೀಸಲಾತಿಯ ಜಪ ಮಾಡುವುದು ಹೊಣೆಯಿಂದ ನುಣುಚಿಕೊಳ್ಳುವ ಯತ್ನವಷ್ಟೇ. ಮೀಸಲಾತಿ ಕುರಿತು ನಿರ್ಣಯಿಸಲು ಈಗಷ್ಟೇ ನ್ಯಾಯಮೂರ್ತಿ ಕೆ.ಭಕ್ತವತ್ಸಲ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ವರದಿ ನೀಡಲು ಸಮಿತಿಗೆ ಕಾಲಮಿತಿ ವಿಧಿಸದಿರುವುದು ಸರ್ಕಾರದ ‘ಕಾಳಜಿ’ಯನ್ನು ಎತ್ತಿತೋರಿಸುತ್ತದೆ. ಬಿಬಿಎಂಪಿಯಲ್ಲಿ ವಾರ್ಡ್‌ಗಳ ಮರುವಿಂಗಡಣೆಯ ನೆಪ ಸಿಕ್ಕಿದ್ದು, ಶಾಸಕರನ್ನು ಸಂಪ್ರೀತಗೊಳಿಸುವ ಕೆಲಸದಲ್ಲಿ ನೆರವಿಗೆ ಬಂದಿದೆ.

‘ನಾವು ಚುನಾವಣೆಗೆ ಸಿದ್ಧರಿದ್ದೇವೆ, ನೀವು ಸಿದ್ಧರಿದ್ದೀರಾ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿರೋಧ ಪಕ್ಷಗಳನ್ನು ಪ್ರಶ್ನಿಸಿದ್ದಾರೆ. ಈ ಪ್ರಶ್ನೆಯಲ್ಲಿ ಆಡಳಿತ ಪಕ್ಷವು ಎಲ್ಲ ಸಿದ್ಧತೆಯನ್ನು ಮಾಡಿಕೊಂಡ ಮೇಲಷ್ಟೇ ಚುನಾವಣೆ ಕುರಿತು ಯೋಚಿಸಲಿದೆ ಎಂಬ ಭಾವ ಎದ್ದುಕಾಣುತ್ತದೆ. ಆ ಸ್ಥಾನದಲ್ಲಿ ಬೇರೆ ಪಕ್ಷದ ನಾಯಕರಿದ್ದರೂ ಅವರ ಧೋರಣೆಯೂ ಇದೇ ಆಗಿರುತ್ತಿತ್ತು. ಆದರೆ, ಯಾವುದೇ ಪಕ್ಷವು ಸಿದ್ಧತೆ ಮಾಡಿಕೊಳ್ಳಲಿ, ಬಿಡಲಿ ಸಕಾಲದಲ್ಲಿ ಚುನಾವಣೆಯಂತೂ ನಡೆಯಲೇಬೇಕು. ರಾಜಕೀಯ ಹಿತಾಸಕ್ತಿಗಾಗಿ ಪ್ರಜಾಪ್ರಭುತ್ವವನ್ನು ಬಲಿ ಕೊಡುವುದು ಅಕ್ಷಮ್ಯ. ಮೀಸಲಾತಿಯನ್ನು ಕಾಲಮಿತಿಯಲ್ಲಿ ನಿಗದಿ ಮಾಡಿ, ಚುನಾವಣೆಯನ್ನು ನಡೆಸುವುದಾಗಿ ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡುವುದೋ, ಇದುವರೆಗೆ ಕಾಲಹರಣ ಮಾಡಿದ ತಪ್ಪಿಗಾಗಿ ಸಮರೋಪಾದಿಯಲ್ಲಿ ಮೀಸಲಾತಿ ನಿಗದಿಗೆ ಕ್ರಮ ಕೈಗೊಳ್ಳುವುದೋ ಎಂಬ ನಿರ್ಧಾರ ಸರ್ಕಾರಕ್ಕೇ ಬಿಟ್ಟದ್ದು. ವಿಳಂಬ ಮಾಡದೆ, ಹಿಂದುಳಿದ ವರ್ಗಗಳಿಗೆ ಅನ್ಯಾಯ ಆಗಲೂ ಬಿಡದೆ ಚುನಾವಣೆ ನಡೆಸಲು ಸರ್ಕಾರ ತಕ್ಷಣ ಕಾರ್ಯಪ್ರವೃತ್ತವಾಗಬೇಕು. ಈ ದಿಸೆಯಲ್ಲಿ ತನ್ನ ಮೇಲಿನ ಸಾಂವಿಧಾನಿಕ ಹೊಣೆಯನ್ನು ಅದು ಮರೆಯುವಂತಿಲ್ಲ.

ರಷ್ಯಾದ ಇಂಧನ ಪ್ರಾಬಲ್ಯವನ್ನು ತಗ್ಗಿಸುವ ಹೊಸ ಯತ್ನದಲ್ಲಿ ರಷ್ಯಾವೂ ಪಾಲುದಾರ!

ಬಿಸಿತುಪ್ಪವಾಗಿ ಪರಮಾಣು ಬೆಸುಗೆ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಯುದ್ಧಕ್ಕೂ ಕಾಳ್ಗಿಚ್ಚಿಗೂ ಅದೆಷ್ಟು ಸಾಮ್ಯ ನೋಡಿ: ಗಿಡಮರಗಳ ಹಾಗೆ ಶಸ್ತ್ರಾಸ್ತ್ರಗಳು ಉರಿದು ಹೋಗಿ ಹೊಸದು ಬರುತ್ತವೆ. ಧ್ವಂಸಗೊಂಡ ಕಾಡಿನ ಹಾಗೆ ನಗರಗಳೂ ನಾಳೆ ನವನವೀನವಾಗುತ್ತವೆ. ಕಾಳ್ಗಿಚ್ಚಿನಿಂದ ಮೇಲೆದ್ದ ಹೊಗೆ, ಮಸಿ, ಹಾರುಬೂದಿಯೆಲ್ಲ ಮಳೆಯಾಗಿ ಸುರಿದು ದೂರದ ಭೂಭಾಗವನ್ನು ಇನ್ನಷ್ಟು ಸಮೃದ್ಧಗೊಳಿಸುತ್ತವೆ. ಹಾಗೇ ಯುದ್ಧಕ್ಕೀಡಾದ ರಾಷ್ಟ್ರದ ನೆರೆಹೊರೆಯವರೂ ಉದ್ಧಾರವಾಗುತ್ತಾರೆ. ಬೆಂಕಿಯ ಝಳದಿಂದ ಸದ್ಯ ಪಾರಾದ ಸಶಕ್ತ ಜೀವಿಗಳು ಆಮೇಲೆ ಸ್ವಸ್ಥಾನಕ್ಕೆ ಹಿಂದಿರುಗಿ ಇನ್ನೂ ಬಲಿಷ್ಠವಾಗುತ್ತವೆ.

ಉಕ್ರೇನ್ ಧಗಧಗಿಸುತ್ತಿದೆ. ರಷ್ಯಾದ ಶತಕೋಟ್ಯಧೀಶರು ಗುಂಪುಗುಂಪಾಗಿ ಗುಳೆ ಎದ್ದು ದುಬೈಯಲ್ಲಿ ಬೇರು ಬಿಡುತ್ತಿದ್ದಾರೆ. ಅತ್ತ ಯುರೋಪ್, ಅಮೆರಿಕದ ಆಗರ್ಭ ಶ್ರೀಮಂತರು ವಿದ್ಯುತ್ ಶಕ್ತಿಯ ಹೊಸ ಮೂಲಗಳಿಗೆ ಹಣ ಹೂಡಲು ಹೊರಟಿದ್ದಾರೆ. ರಷ್ಯಾದ ಇಂಧನವನ್ನೇ ಅವಲಂಬಿಸಿದ್ದ ಬಹುಪಾಲು ಐರೋಪ್ಯ ರಾಷ್ಟ್ರಗಳಲ್ಲಿ ಈಗ ಪರಮಾಣು ಬೆಸುಗೆಯ ತಂತ್ರಜ್ಞಾನಕ್ಕೆ ಭರಪೂರ ಬಂಡವಾಳ ಹರಿಯತೊಡಗಿದೆ. ಈ ಹೊಸ ವಿಧಾನದ ವಿದ್ಯುತ್ ಕೈಗೆಟುಕಿದರೆ ರಷ್ಯಾದ ತೈಲ, ಅನಿಲ, ಕಲ್ಲಿದ್ದಲು ಯಾವುದೂ ಬೇಕಾಗುವುದಿಲ್ಲ. ಅಷ್ಟೇ ಅಲ್ಲ, ಬಿಸಿಪ್ರಳಯದ ಬೇಗುದಿಯಲ್ಲಿರುವ ಭೂಮಿಗೆ ಹೊಸದೊಂದು ಸ್ವಚ್ಛ, ನಿರಂತರ ಶಕ್ತಿಮೂಲ ಸಿಕ್ಕಂತಾಗುತ್ತದೆ. ಜಗತ್ತಿನ ಬಲಾಢ್ಯ ತೈಲದೊರೆಗಳನ್ನು, ಕಲ್ಲಿದ್ದಲಪತಿಗಳನ್ನು ಮೂಲೆಗೊತ್ತಿದಂತಾಗುತ್ತದೆ.

ಪರಮಾಣುವಿನ ಮಾಯೆಯೇ ಅಂಥದ್ದು. ಅದನ್ನು ಒಡೆದರೆ ಶಕ್ತಿ ಹೊರಕ್ಕೆ ಸೂಸುತ್ತದೆ. ಅದಕ್ಕೆ ವಿದಳನ ಅಥವಾ ‘ನ್ಯೂಕ್ಲಿಯರ್ ಫಿಶನ್’ ಎನ್ನುತ್ತಾರೆ. ಒಡೆಯುವುದು ಸುಲಭ. ಯುರೇನಿಯಂ ಪರಮಾಣುವಿಗೆ ಆಘಾತ ಕೊಟ್ಟರೆ ಅದು ಸಿಡಿಯುತ್ತದೆ; ಬಾಂಬ್ ತಯಾರಿಸಬಹುದು. ವಿದ್ಯುತ್ ಉತ್ಪಾದನೆ ಮಾಡಬಹುದು. ಆದರೆ ತುಸು ಹೆಚ್ಚುಕಮ್ಮಿಯಾದರೆ ಪರಮಾಣು ಸ್ಥಾವರಗಳೇ ಸಿಡಿಯಬಹುದು. ಅದಕ್ಕೆ ವ್ಯತಿರಿಕ್ತವಾಗಿ, ಎರಡು ಪರಮಾಣುಗಳನ್ನು ಬಲಾತ್ಕಾರವಾಗಿ ಮಿಲನ ಮಾಡಿಸಿದರೂ ಅಪಾರ ಶಕ್ತಿ ಹೊಮ್ಮುತ್ತದೆ. ಅದಕ್ಕೆ ‘ನ್ಯೂಕ್ಲಿಯರ್ ಫ್ಯೂಶನ್’ ಎನ್ನುತ್ತಾರೆ. ವಿದಳನಕ್ಕೆ ಹೋಲಿಸಿದರೆ ಮಿಲನ ಸುರಕ್ಷಿತ, ಆದರೆ ಭಾರೀ ಸವಾಲಿನ ಕೆಲಸ. ಸೂರ್ಯ ಮತ್ತು ಇತರ ತಾರೆಗಳಲ್ಲಿರುವ ಹೀಲಿಯಂ ಮತ್ತು ಹೈಡ್ರೊಜನ್ ಪರಮಾಣುಗಳು ಅಲ್ಲಿನ ಪ್ರಚಂಡ ಗುರುತ್ವ ಶಕ್ತಿಯಿಂದಾಗಿ ನಿಗಿನಿಗಿ ಉರಿಯುತ್ತ ಒಂದರೊಳಗೊಂದು ಬೆಸುಗೆ ಆಗುತ್ತಿರುತ್ತವೆ. ಆಗ ಹೊಮ್ಮುವ ಶಕ್ತಿಯೇ ಜಗತ್ತಿಗೆಲ್ಲ ಶಾಖವನ್ನೂ ಬೆಳಕನ್ನೂ ನೀಡುತ್ತಿದೆ.

ಭೂಮಿಯ ಮೇಲೂ ಅಂಥ ಫ್ಯೂಶನ್ ಸೂರ್ಯನ ನಿರ್ಮಾಣಕ್ಕೆ ಕಳೆದ 50 ವರ್ಷಗಳಿಂದ ಯತ್ನಗಳು ನಡೆಯುತ್ತಿವೆ. ವಿವಿಧ ಶ್ರೀಮಂತ ರಾಷ್ಟ್ರಗಳಲ್ಲಿ ನೂರಕ್ಕೂ ಹೆಚ್ಚು ಸರ್ಕಾರಿ ಇಲ್ಲವೆ ಖಾಸಗಿ ಫ್ಯೂಶನ್ ರಿಯಾಕ್ಟರ್‌ಗಳಲ್ಲಿ ಪೈಪೋಟಿಯಲ್ಲಿ ಪ್ರಯೋಗಗಳು ನಡೆಯುತ್ತಿವೆ. ಅವೆಲ್ಲ ಸಾಲದೆಂಬಂತೆ ಹತ್ತಾರು ಶಕ್ತಿಶಾಲಿ ರಾಷ್ಟ್ರಗಳು ಒಂದಾಗಿ ಫ್ರಾನ್ಸ್‌ನಲ್ಲಿ ಅತ್ಯಂತ ದೊಡ್ಡ, 2,200 ಶತಕೋಟಿ ಡಾಲರ್ ವೆಚ್ಚದ ಫ್ಯೂಶನ್ ಸ್ಥಾವರವೊಂದನ್ನು ನಿರ್ಮಿಸುತ್ತಿವೆ. ಅಮೆರಿಕ, ಚೀನಾ, ಇಂಡಿಯಾ, ಜಪಾನ್, ರಷ್ಯಾ, ದಕ್ಷಿಣ ಕೊರಿಯಾ ಮತ್ತು ಐರೋಪ್ಯ ಒಕ್ಕೂಟದ ಈ ಜಂಟಿ ಪ್ರಯೋಗಕ್ಕೆ ‘ಇಟರ್’ ಎಂದು (ITER- ಇಂಟರ್‌ನ್ಯಾಶನಲ್ ಥರ್ಮೊನ್ಯೂಕ್ಲಿಯರ್ ಎಕ್ಸ್‌ಪರಿಮೆಂಟಲ್ ರಿಯಾಕ್ಟರ್) ಹೆಸರಿಸಲಾಗಿದೆ. ಇಟರ್ ಎಂದರೆ ಲ್ಯಾಟಿನ್‌ನಲ್ಲಿ ‘ಮಾರ್ಗ’ ಎಂಬ ಅರ್ಥವಿದೆ. 2025ರ ವೇಳೆಗೆ ಅದರಲ್ಲಿ ಪ್ರಾಯೋಗಿಕ ವಿದ್ಯುತ್ ಉತ್ಪಾದನೆ ಆರಂಭಿಸುವ ಗುರಿ ಇದೆ.

ಫ್ಯೂಶನ್ ಶಕ್ತಿಯ ಆವಾಹನೆಗೆ ಇಷ್ಟೊಂದು ಆಸಕ್ತಿ ಏಕೆಂದರೆ ಅದು ಕೈಗೆಟುಕಿದರೆ ಜಗತ್ತಿಗೆಲ್ಲ ನಿರಂತರ ಶಕ್ತಿ ಲಭಿಸುತ್ತದೆ. ಈ ಯಂತ್ರಾಗಾರದಲ್ಲಿ ಒಂದು ಲೀಟರ್ ಹೈಡ್ರೊಜನನ್ನು ಉರಿಸಿದಾಗ ಹೊಮ್ಮುವ ಶಕ್ತಿ ಒಂದು ಲೀಟರ್ ಪೆಟ್ರೋಲನ್ನು ಉರಿಸಿದ್ದಕ್ಕಿಂತ 40 ಲಕ್ಷ ಪಟ್ಟು ಹೆಚ್ಚಿಗೆ ಇರುತ್ತದೆ. ಸಮುದ್ರದ ನೀರಿನಲ್ಲಿರುವ ಒಂದು ಗ್ರಾಮ್ (ಡ್ಯೂಟೀರಿಯಂ ಮತ್ತು ಟ್ರೀಶಿಯಂ) ಇಂಧನದಿಂದ 11 ಟನ್ ಕಲ್ಲಿದ್ದಲಿನಷ್ಟು ಶಕ್ತಿಯನ್ನು ಹೊಮ್ಮಿಸಬಹುದು. ಇಂಧನವಂತೂ ನೀರಿನಷ್ಟೇ ಧಾರಾಳ ಸಿಗುತ್ತದೆ ಮತ್ತು ರಿಯಾಕ್ಟರಿನ ಒಳಗೂ ಉತ್ಪಾದನೆ ಆಗುತ್ತಿರುತ್ತದೆ; ಹಾಗಾಗಿ ಅದು ಖಾಲಿಯಾಗುವ ಪ್ರಮೇಯವೇ ಇಲ್ಲ. ಈ ವಿಧಾನದಲ್ಲಿ ಕಾರ್ಬನ್ ಡೈಆಕ್ಸೈಡ್ ಹೊಮ್ಮುವುದಿಲ್ಲ; ಭೂಮಿಯ ತಾಪಮಾನ ಏರುವುದಿಲ್ಲ. ಚೆರ್ನೊಬಿಲ್ ಅಥವಾ ಫುಕುಶಿಮಾ ಮಾದರಿಯಲ್ಲಿ ಇದು ಸ್ಫೋಟವಾಗುವುದಿಲ್ಲ. ಏಕೆಂದರೆ ಇದರಲ್ಲಿ ಬಳಕೆಯಾಗುವ ಇಂಧನದ ಪ್ರಮಾಣ ತೀರ ಕಡಿಮೆ. ಮೇಲಾಗಿ ಇದರಿಂದ ಹೊಮ್ಮುವ ವಿಕಿರಣವೂ ತೀರ ತಾತ್ಕಾಲಿಕವಾಗಿರುತ್ತದೆ. ಬಾಂಬ್ ತಯಾರಿಸಲು ಸಾಧ್ಯವಿಲ್ಲ.

ಎರಡು ಪರಮಾಣುಗಳ ಬೆಸುಗೆ ಮಾಡಬೇಕೆಂದರೆ ಪ್ರಾರಂಭದಲ್ಲಿ ಸೂರ್ಯನಲ್ಲಿದ್ದಷ್ಟು ಪ್ರಖರ, ಹತ್ತಾರು ಕೋಟಿ ಡಿಗ್ರಿ ಸೆಲ್ಸಿಯಸ್ ಶಾಖದಲ್ಲಿ ಹೈಡ್ರೊಜನ್ ಅನಿಲವನ್ನು ಬಿಸಿ ಮಾಡಬೇಕು. ಆಗ ನಿಗಿನಿಗಿ ಪ್ಲಾಸ್ಮಾ ಸೃಷ್ಟಿಯಾಗಿ ಜಲಜನಕದ ಪರಮಾಣುಗಳು ಪರಸ್ಪರ ಡಿಕ್ಕಿ ಹೊಡೆದು ಹೀಲಿಯಂ ಆಗುತ್ತದೆ. ಮೂಲಕ್ಕಿಂತ ಹೆಚ್ಚಿನ ಶಾಖ ಹೊಮ್ಮುತ್ತ ಸರಪಳಿ ಪ್ರಕ್ರಿಯೆ ಆರಂಭವಾಗುತ್ತದೆ. ಆದರೆ ಅಷ್ಟೊಂದು ಶಾಖದಲ್ಲಿ ಇಡೀ ಯಂತ್ರಾಗಾರವೇ ಕರಗಿ ಹೋಗುತ್ತದೆ. ಅದಕ್ಕೇ ಯಾವ ಲೋಹವನ್ನೂ ಬಳಸದೆ ಕೇವಲ ಅಯಸ್ಕಾಂತದ ಅಗೋಚರ ಕುಳಿಯಲ್ಲಿ ಬೆಸುಗೆ ಹಾಕಬೇಕು. ಉದ್ದಿನ ವಡೆಯಾಕಾರದ ‘ಟೊಕಾಮಾಕ್’ ಹೆಸರಿನ ಗೋಲ ಸುರಂಗದಲ್ಲಿ ಮಿಂಚಿನಂತೆ ಪ್ರಭೆಯನ್ನು ಸುತ್ತಿಸಬೇಕು. ಅದು ವಿಜ್ಞಾನ ತಂತ್ರಜ್ಞಾನದ ಪರಮೋಚ್ಚ ಬುದ್ಧಿಮತ್ತೆ, ಕೌಶಲ ಮತ್ತು ಹಣವನ್ನು ಬೇಡುವ ಪ್ರಯೋಗ. ಆ ಎಲ್ಲ ಬಂಡವಾಳಗಳನ್ನೂ ತೊಡಗಿಸಿ ಹೊಸ ವಿದ್ಯುತ್ ಮೂಲವನ್ನು ಸಾಕಾರಗೊಳಿಸಲು ತುರುಸಿನ ಪೈಪೋಟಿ ನಡೆದಿದೆ. ಯಾರಿಗೆ ಮೊದಲ ಯಶಸ್ಸು ಸಿಕ್ಕೀತೆಂದು ವಿಜ್ಞಾನ ಜಗತ್ತು ಕುತೂಹಲದಿಂದ ನೋಡುತ್ತಿದೆ.



ಈ ನಡುವೆ ಖಾಸಗಿ ಶತಕೋಟ್ಯಧೀಶರು ಫ್ಯೂಶನ್ ವಿದ್ಯುತ್ ಶಕ್ತಿ ಉತ್ಪಾದನೆಗೆ ಹಣ ಹೂಡಲು ಬರುತ್ತಿದ್ದಾರೆ. ಅಮೆಝಾನ್ ಕಂಪನಿಯ ಸಂಸ್ಥಾಪಕ ಹಾಗೂ ಜಗತ್ತಿನ ಎರಡನೇ ಅತಿ ಶ್ರೀಮಂತ ವ್ಯಕ್ತಿ ಜೆಫ್ ಬೆಝೋಸ್ ಇದೀಗ ಕೆನಡಾ ನವೋದ್ಯಮಿಯ ಜೊತೆ ಸೇರಿ ‘ಜನರಲ್ ಫ್ಯೂಶನ್’ ಶಕ್ತಿ ಸ್ಥಾವರಕ್ಕೆ ಹಣ ಹೂಡಿದ್ದಾಗಿದೆ. ರಷ್ಯಾವನ್ನು ಮಣಿಸಲು ಹೊರಟ ಅಮೆರಿಕ ಸರ್ಕಾರ ಹಿಂದೆಂದಿಗಿಂತ ಹೆಚ್ಚಿನ ಹಣವನ್ನು ಫ್ಯೂಶನ್ ಎನರ್ಜಿ ಸಂಶೋಧನೆಗೆ ವ್ಯಯಿಸಲು ನಿರ್ಧರಿಸಿದೆ. ಎಮ್‌ಐಟಿಯ ತಂತ್ರಜ್ಞರು ಸೂಪರ್ ಕಂಡಕ್ಟರ್ ಮೂಲಕ ಹೊಸ ಬಗೆಯ ಅಯಸ್ಕಾಂತವನ್ನು ಸೃಷ್ಟಿಸಿದರೆ, ಜರ್ಮನಿಯ ಮಾರ್ವೆಲ್ ಫ್ಯೂಜನ್ ಕಂಪನಿ ಲೇಸರ್ ಕಿರಣಗಳ ಮೂಲಕ ಪರಮಾಣು ಬೆಸುಗೆಯನ್ನು ಸಾಧಿಸಲು ಹೊರಟಿದೆ. ನಿರಂತರ ಐದು ಸೆಕೆಂಡ್‌ಗಳ ಕಾಲ (!) ತನ್ನಲ್ಲಿ ಪರಮಾಣು ಬೆಸುಗೆ ನಡೆಯಿತೆಂದು ಇಂಗ್ಲೆಂಡಿನಲ್ಲಿರುವ ಜಗತ್ತಿನ ಅತಿ ದೊಡ್ಡ ಟೊಕಾಮಾಕ್ ಸ್ಥಾವರ ಘೋಷಿಸಿದರೆ, ಚೀನಾ ತನ್ನ ಫ್ಯೂಶನ್ ಸ್ಥಾವರದಲ್ಲಿ 101 ಸೆಕೆಂಡ್‌ಗಳಷ್ಟು ದೀರ್ಘಕಾಲ ಬೆಸುಗೆ ನಡೆಯಿತೆಂದು ಹೇಳಿಕೊಂಡಿದೆ.

ವಿಪರ್ಯಾಸದ ಸಂಗತಿ ಏನು ಗೊತ್ತೆ? ಜಗತ್ತಿನ ಅತಿ ದೊಡ್ಡ ಫ್ಯೂಶನ್ ಸ್ಥಾವರ ಎನಿಸಿದ ‘ಇಟರ್’ನಲ್ಲಿ ದೊಡ್ಡ ಕನ್-ಫ್ಯೂಶನ್ ಸೃಷ್ಟಿಯಾಗಿದೆ. ರಷ್ಯಾವನ್ನು ಈ ಪ್ರಯೋಗದಿಂದ ಹೊರಗಿಡುವಂತಿಲ್ಲ, ಏಕೆಂದರೆ ಯಂತ್ರದ ಕೆಲವು ಬಿಡಿಭಾಗಗಳು ಅಲ್ಲಿಂದಲೇ ಬರಬೇಕಾಗಿದೆ. ಬಿಸಿತುಪ್ಪ! ಇತ್ತ, ಪರಮಾಣು ಬೆಸುಗೆಯ ತಂತ್ರಜ್ಞಾನವೇ ಬಿಸಿತುಪ್ಪವೆಂದೂ ಹೂಡಿಕೆಗಿಂತ ಹೆಚ್ಚಿನ ಶಕ್ತಿಯನ್ನು ನಿರಂತರ ಪಡೆಯಲು ಸಾಧ್ಯವೇ ಇಲ್ಲದ್ದರಿಂದ ನಾಳೆ ಉಗುಳಲೇಬೇಕಾದೀತೆಂದೂ ಕೆಲವು ಖ್ಯಾತ ಭೌತವಿಜ್ಞಾನಿಗಳು ಹೇಳುತ್ತಿದ್ದಾರೆ.

ಹಾಗೆಂದು ಅದಕ್ಕೆ ಸುರಿಯುವ ಬಂಡವಾಳ ನಿರರ್ಥಕ ಎನ್ನುವಂತಿಲ್ಲ. ವಿಜ್ಞಾನದ ಗಡಿಮಿತಿಯನ್ನು ವಿಸ್ತರಿಸುವ ಸಾಹಸ ಅಲ್ಲಿ ನಡೆದಿದೆ. ಅದೆಷ್ಟೊಂದು ಉಪಲಾಭಗಳಿವೆಯೊ ಗೊತ್ತಿಲ್ಲ. ವಿಜ್ಞಾನದ ಇದುವರೆಗಿನ ಬಹುತೇಕ ಎಲ್ಲ ಫಲಗಳೂ ಯುದ್ಧಸಿದ್ಧತೆಯಿಂದಾಗಿಯೇ ಮನುಕುಲಕ್ಕೆ ಲಭಿಸಿವೆ. ನಮ್ಮಲ್ಲೂ ಪರಮಾಣು ಬಾಂಬ್‌ನ ಪರೀಕ್ಷಾಸ್ಫೋಟ ಮಾಡಿದ ಮೇ 11ನ್ನು ‘ರಾಷ್ಟ್ರೀಯ ತಂತ್ರಜ್ಞಾನ ದಿನ’ ಎಂದು ಆಚರಿಸುತ್ತೇವೆ. ಈಗಿನ ವಿಶೇಷ ಏನೆಂದರೆ, ದುಷ್ಟಶಕ್ತಿಯನ್ನು ಮಣಿಸಲು ಇದೇ ಮೊದಲ ಬಾರಿಗೆ ಶಿಷ್ಟಶಕ್ತಿಯ ಆವಾಹನೆಯ ಯತ್ನಗಳು ನಡೆದಿವೆ. ಶುಭ ಹಾರೈಸೋಣ.

ಚುರುಮುರಿ



ಬುಕ್ ಮೈ ಬುಕ್!

● ನಾರಾಯಣ ರಾಯಚೂರ್

‘ಹಲೊ... ಯಾರು ಮಾತಾಡೋದು?

‘ಸರ್, ಅದು ನ್ಯೂ- ನ್ಯೂಸ್ ಪುಸ್ತಕಾಲಯಾನಾ?’

‘ಹೌದು, ಪ್ರೊಪ್ರೈಟರ್ ಮಾರಯ್ಯ ಮಾತಾಡ್ತಿರೋದು, ನೀವು?’

‘ನನ್ನ ಹೆಸರು ವಾಚಸ್ಪತಿ ಅಂತ. ನನಗೆ ಪುಸ್ತಕದ ಹುಚ್ಚು, ಲೇಟೆಸ್ಟ್ ಆಗಿ ಬಂದಿರೋ ಪುಸ್ತಕ ಬೇಕಿತ್ತು ಸಾರ್’.

‘ನೇಮಕಾತಿ ಕಿತಾಪತಿ ಅಂತ ಒಳ್ಳೆಯ ಪುಸ್ತಕ ಬಂದಿದೆ. ಭಾರೀ ಡಿಮ್ಯಾಂಡ್ ಇದೆ’.

‘ಪತ್ತೇದಾರಿನಾ ಸಾರ್ ಅದು?’

‘ಒಂಥರಾ ಚೇಸಿಂಗ್ ನಾವೆಲ್. ಜೊತೆಗೆ ‘ಮರುಪರೀಕ್ಷೆ’ ಅಂತ ಕಿರುಕಾದಂಬರಿ ಉಚಿತ’.

‘ಮೊನ್ನೆ ನೀವು ಕಳಿಸಿಕೊಟ್ಟ ‘ಗುತ್ತಿಗೆ-ಕುತ್ತಿಗೆ’ ಪುಸ್ತಕದಲ್ಲಿ 40 ಪೇಜ್‌ಗಳೇ ಮಿಸ್ಸಿಂಗ್ ಸಾರ್?’

‘ಓಹ್! ಅದಕ್ಕೆ 40% ಡಿಸ್ಕೌಂಟ್ ಇತ್ತಲ್ಲಪ್ಪಾ’.

‘ಆರೋಗ್ಯಕ್ಕೆ ಸಂಬಂಧಿಸಿದ ಬುಕ್ಸ್ ಯಾವುದೂ ಬಂದಿಲ್ವಾ?’

‘ಬೇಕಾದಷ್ಟಿವೆ. ‘ಅಲೆ-ಮಾರಿ ನಾಲ್ಕನೇ ಬಾರಿ’ ಅಂತ 4 ಭಾಗಗಳ ಪುಸ್ತಕವೊಂದಿದೆ’.

‘ಇದಕ್ಕೂ ಉಚಿತ ಏನಾದರೂ?’

‘ಅಲೆ 1ಕ್ಕೆ ಮಾಸ್ಕ್, 2ಕ್ಕೆ ಸ್ಯಾನಿಟೈಸರ್, 3ಕ್ಕೆ ವ್ಯಾಕ್ಸಿನ್ ಕೂಪನ್, 4ಕ್ಕೆ ಬೂಸ್ಟರ್ ಡೋಸ್ ಕೂಪನ್ ಉಚಿತ’.

‘ಆನ್‌ಲೈನ್‌ನಲ್ಲಿ ಕಳಿಸ್ತೀರಾ ಸಾರ್?’

‘ನಿಮ್ಮದು ಯಾವ ಪತಿ ಅಂದ್ರೀ?’

‘ವಾಚಸ್ಪತಿ, ಬುಕ್ ರಾಯಪಟ್ಟಣ ಸಾರ್’.

‘ಬುಕ್ ರಾಯಪಟ್ಟಣಾನಾ? ನಿಮ್ಮ ಕಾಲೇಜ್ ಮೇಷ್ಟ್ರು ನಮ್ಮ ಪರ್ಮನೆಂಟ್ ಕಸ್ಟಮರು’.

‘ಯಾರ್ ಸಾರ್?’

‘ಅದೇ, ಪತ್ರಿಕೆಯಲ್ಲಿ ಬರೋ ಜಾಹೀರಾತುಗಳ ಬಗ್ಗೆ ಡಾಕ್ಟರೇಟ್ ಮಾಡಿ ‘ಜಗಜ್ಜಾಹೀರು’ ಅಂತ ದೊಡ್ಡ ಪುಸ್ತಕಾನೇ ಬರೆದಿದಾರಲ್ಲಪ್ಪ.

‘ಹ್ಞಾಂ... ಗೊತ್ತಾಯ್ತು ಸಾರ್’!

‘ಮೊನ್ನೆ ಅವ್ರಿಗೆ ಈ ಎಲ್ಲ ಬುಕ್ಸ್ ಪಾರ್ಸೆಲ್ ಕಳ್ಸಿದೀವಿ. ನಿಮಗೂ ಕಳ್ಸಿಕೊಡ್ತೀವಿ, ಆನ್‌ಲೈನ್‌ನಲ್ಲೇ ಪೇ ಮಾಡಿ, ಅಡ್ರೆಸ್ ಕೊಡಿ’.

‘ಅವರಿಗೆ ಕಳ್ಸಿದೀರಾ, ಸರಿ ಬಿಡಿ ಮತ್ತೆ, ಅವ್ರಹತ್ರಾನೆ ಈಸ್ಕೊಂಡು ಓದ್ತೀನಿ, ಇಡ್ಲ ಸಾರ್’.

‘ರೀ... ಯಾರ್ರೀ ನೀವು... ಬೆಳ್ಳಂಬೆಳಿಗ್ಗೆ! ಹಲೋ... ಹಲೋ... ಇಟ್ಟೇಬಿಟ್ನಲ್ಲಪ್ಪ!

ದಿನದ ಟ್ವೀಟ್

ಐತಿಹಾಸಿಕ ಆದೇಶ



ವಿವಿಧ ಸರ್ಕಾರಗಳು ಮತ್ತು ಅವುಗಳ ಪೊಲೀಸ್ ಪಡೆಗಳಿಂದ ಎಗ್ಗಿಲ್ಲದೆ ದುರ್ಬಳಕೆಯಾಗುತ್ತಿದ್ದ ದೇಶದ್ರೋಹದ ಕಾನೂನನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಅತ್ಯಂತ ಅಗತ್ಯವಾಗಿದ್ದ ಐತಿಹಾಸಿಕ ಆದೇಶ ನೀಡಿದ ಸುಪ್ರೀಂ ಕೋರ್ಟ್‌ಗೆ ನಮನ.

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

ಕಿಡಿನುಡಿ



ಜನರು ನ್ಯಾಯವನ್ನು ಕಾನೂನು ಪ್ರಕ್ರಿಯೆಯ ಮೂಲಕ ಕೇಳುವುದರ ಬದಲು ರಾಜಕಾರಣಿಗಳ ಮನೆಗಳ ಮೇಲೆ ದಾಳಿ ಮಾಡುವುದೇಕೆ ಎಂಬುದು ನಿಮಗೆ ಗೊತ್ತೇ? ಏಕೆಂದರೆ, ಸ್ವಾತಂತ್ರ್ಯ ದೊರೆತಾಗಿನಿಂದಲೂ ಅವರನ್ನು ಶಿಕ್ಷಿಸುವಲ್ಲಿ ನಮ್ಮ ವ್ಯವಸ್ಥೆಯು ವಿಫಲವಾಗಿದೆ. ಎಷ್ಟು ಮಂದಿ ಭ್ರಷ್ಟ ರಾಜಕಾರಣಿಗಳ ಬಗ್ಗೆ ನಿಮಗೆ ಗೊತ್ತಿದೆ ಮತ್ತು ಎಷ್ಟು ಮಂದಿಗೆ ಶಿಕ್ಷೆಯಾಗಿರುವುದು ನಿಮಗೆ ತಿಳಿದಿದೆ? #SriLanka

ಪ್ರಸಾದ್ ವೆಲಿಕುಂಬುರ, ರಾಜಕೀಯ ವಿಶ್ಲೇಷಕ, ಶ್ರೀಲಂಕಾ

25 ವರ್ಷಗಳ ಹಿಂದೆ

ಸೋಮವಾರ, 12-5-1997

● **ಗಂಗಾವತಿ: ನದಿ ನೀರು ಮಲಿನ- ಮೂವರ ಸಾವು**

ಗಂಗಾವತಿ, ಮೇ 11– ಹೊಸಪೇಟೆ ಬಳಿಯ ಸಕ್ಕರೆ ಕಾರ್ಖಾನೆಯಿಂದ ವಿಷಪೂರಿತ ರಾಸಾಯನಿಕಗಳನ್ನು ತುಂಗಭದ್ರಾ ನದಿಗೆ ಹಾಕಿದ ಪರಿಣಾಮವಾಗಿ ನದಿ ನೀರು ಮಲಿನವಾಗಿದ್ದು, ಅದನ್ನು ಸೇವಿಸಿದ ಮೂವರು ಗ್ರಾಮಸ್ಥರು ಸಾವನ್ನಪ್ಪಿದ್ದಾರೆ. ಐದು ಜನರ ಸ್ಥಿತಿ ಚಿಂತಾಜನಕವಾಗಿದ್ದು ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

8 ಸಾವಿರ ಲೀಟರ್ ಸಾಮರ್ಥ್ಯದ ನಾಲ್ಕು ಟ್ಯಾಂಕರುಗಳಲ್ಲಿ ಈ ರಾಸಾಯನಿಕ ಇತ್ತು. ಆ ಟ್ಯಾಂಕರುಗಳು ಒಡೆದು ಹೋದುದರಿಂದ ರಾಸಾಯನಿಕವನ್ನು ಕಾಲುವೆಗೆ ಬಿಡಲಾಗಿತ್ತು.

● **ತುಂಗಾ ಮೇಲ್ದಂಡೆ: ಬಾಂಡ್ ಮೂಲಕ ಹಣ ಸಂಗ್ರಹ**

ಮಂಗಳೂರು, ಮೇ 11– ತುಂಗಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಲು ಬಾಂಡ್‌ಗಳ ಮೂಲಕ ಜನರಿಂದ ಹಣ ಸಂಗ್ರಹಿಸಲು ಸರ್ಕಾರ ಆಲೋಚಿಸುತ್ತಿದೆ ಎಂದು ಭಾರೀ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಹೇಳಿದರು.

ಕೃಷ್ಣಾ ಜಲಭಾಗ್ಯ ಬಾಂಡ್‌ಗಳ ಮೂಲಕ ಕೃಷ್ಣಾ ಮೇಲ್ದಂಡೆ ಯೋಜನೆಗೆ 800 ಕೋಟಿ ರೂ.ಗಳನ್ನು ಸಂಗ್ರಹಿಸಿದ ಹಾಗೆ ತುಂಗಾ ಮೇಲ್ದಂಡೆ ಯೋಜನೆಗೂ ಜನರಿಂದ ಹಣ ಸಂಗ್ರಹಿಸುವ ಪ್ರಸ್ತಾವ ಸಚಿವ ಸಂಪುಟದ ಮುಂದಿದೆ ಎಂದು ತಿಳಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 12-5-1972

● **ಗೇಣಿದಾರನಿಗೆ ರಕ್ಷಣೆ ನೀಡಿ ಸುಗ್ರೀವಾಜ್ಞೆ**

ಬೆಂಗಳೂರು, ಮೇ 11– ಎರಡು ವರ್ಷದ ಗೇಣಿ ಬಾಕಿಯನ್ನು ಗೇಣಿದಾರ ಪಾವತಿ ಮಾಡಿದಲ್ಲಿ, ಆತನನ್ನು ಒಕ್ಕಲೆಬ್ಬಿಸುವುದರ ವಿರುದ್ಧ ರಕ್ಷಣೆ ನೀಡಿ ಸರ್ಕಾರ ಇಂದು ಸುಗ್ರೀವಾಜ್ಞೆಯೊಂದನ್ನು ಹೊರಡಿಸಿತು.

ಗೇಣಿದಾರರಿಗೆ ಈ ರಕ್ಷಣೆ ನೀಡಲು ಕಳೆದ ವಿಧಾನ ಮಂಡಲದ ಅಧಿವೇಶನದಲ್ಲಿ ಮಂಡಿಸಿದ್ದ ವಿಧೇಯಕವು ಶಾಸನವಾಗಲು ಸಾಧ್ಯವಾಗಲಿಲ್ಲವಾಗಿ ಸರ್ಕಾರ ಈಗ ಜರೂರು ಶಾಸನವನ್ನು ಜಾರಿಗೆ ತಂದಿದೆ. ಈ ತುರ್ತು ಶಾಸನ ಮೇ 11ರಿಂದ ಜಾರಿಗೆ ಬಂದಿದೆ. ಮಂಡಿಸಲಾಗಿದ್ದ ವಿಧೇಯಕದಲ್ಲಿದ್ದ ವಿಧಿಗಳೆಲ್ಲವೂ ಈ ಜರೂರು ಶಾಸನದಲ್ಲಿವೆ.

ಈ ವಿಧಿಗಳ ರೀತ್ಯ, ಗೇಣಿ ಬಾಕಿ ಕೊಡಲಿಲ್ಲವೆಂಬ ಕಾರಣದ ಮೇಲೆ ಭೂ ಮಾಲೀಕನ ಸ್ವಾಧೀನಕ್ಕೆ ಜಮೀನು ಹೋಗಬೇಕೆಂಬ ನ್ಯಾಯಾಲಯದ ಆಜ್ಞೆಯನ್ನೇ ಆಗಲಿ, ಗೇಣಿದಾರ 2 ವರ್ಷಗಳ ಗೇಣಿ ಬಾಕಿ ಪಾವತಿಸಿದಲ್ಲಿ ಜಾರಿಗೆ ತರುವಂತಿಲ್ಲ.

ಸಂಗತ

ಪ್ರವಹಿಸುತ್ತಲೇ ಇರಲಿ ಜೀವನಧಾರೆ

ಅಧಿಕಾರ ಗಳಿಸುವುದರಲ್ಲೇ ಬದುಕು ಕಳೆದುಹೋಗುವಂತೆ ಮಾಡದೆ, ಅಂತರಂಗದ ಪಿಸುಧ್ವನಿಯನ್ನು ಕೇಳಿಸಿಕೊಳ್ಳುವ ವಿವೇಕವನ್ನೂ ಮೈಗೂಡಿಸಿಕೊಳ್ಳಬೇಕು

● ಮಲ್ಲಿಕಾರ್ಜುನ ಹೆಗ್ಗಳಗಿ

ಸರ್ಕಾರಿ ಸೇವೆಯಿಂದ ನಿವೃತ್ತರಾದ ಮೇಲೆ ಗೆಳೆಯ ಚಿದಂಬರ ಇನಾಮದಾರ ಅವರು ಒಮ್ಮೆಲೇ ಜ್ಞಾನೋದಯವಾದಂತೆ ತಮ್ಮ ಹುಟ್ಟೂರಿಗೆ ಹೊರಟು ಹೋದರು. ಅಲ್ಲಿ ಅವರ ಪೂರ್ವಜರು ಪೂಜಿಸುತ್ತಿದ್ದ ಹಳೆಯದಾದ ವಿಠಲ ಮಂದಿರವನ್ನು ಶ್ರಮಪಟ್ಟು ತಮ್ಮದೇ ಹಣ ಖರ್ಚು ಮಾಡಿ ಜೀರ್ಣೋದ್ಧಾರ ಮಾಡಿದರು. ಈಗ ಈ ಮಂದಿರದ ಬದಿಯ ಒಂದು ಸಣ್ಣ ಮನೆಯಲ್ಲಿ ಪತ್ನಿಯೊಂದಿಗೆ ವಾಸ ಮಾಡುತ್ತಾ, ಧಾರ್ಮಿಕ, ಸಾಂಸ್ಕೃತಿಕ, ಯೋಗ ಮತ್ತು ಆರೋಗ್ಯ ಶಿಬಿರಗಳನ್ನು ಸಂಘಟಿಸುತ್ತಿದ್ದಾರೆ. ಯಾರಿಂದಲೂ ಹಣ ಪಡೆಯದೆ ತಮ್ಮ ಪಿಂಚಣಿ ಹಣವನ್ನೆಲ್ಲ ಖರ್ಚು ಮಾಡಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದಾರೆ.

ಅವರು ಇದಕ್ಕೆ ಕೊಡುವ ವಿವರಣೆ ಜೀವನ ಪಾಠದಂತಿದೆ: ‘ಇಷ್ಟು ದಿನ ಕುಟುಂಬ, ಮಕ್ಕಳು ಅಂತ ಹೆಣಗಿದ್ದೇನೆ. ಇನ್ನು ಮೇಲೆ ನನ್ನ ಹಣವನ್ನು ಸಮಾಜ ಕಾರ್ಯಗಳಿಗೆ ಖರ್ಚು ಮಾಡಬಯಸಿದ್ದೇನೆ. ಇದು ನನ್ನ ಬದುಕಿನ ಮುಖ್ಯ ಉದ್ದೇಶ. ಮಕ್ಕಳು ದೊಡ್ಡವರಾಗಿದ್ದಾರೆ. ಅವರೇ ದುಡಿದು ಬದುಕು ಕಟ್ಟಿಕೊಳ್ಳಬೇಕು’.


ಪ್ರಲೋಭಕ್ಕಿಂತ ಹೆಚ್ಚಿನ ಆನಂದ ತ್ಯಾಗದ್ದು, ಮನುಷ್ಯನ ಆತ್ಮ ಜಾಗೃತವಾಗುವುದು ವಿರಕ್ತಿಯಿಂದ ಎಂಬ ಮಾತಿದೆ. ಹಣ ಗುಡ್ಡೆ ಹಾಕುವುದರಲ್ಲಿಯೇ ಅನೇಕರ ಬದುಕು ಕಳೆದುಹೋಗುತ್ತದೆ. ಮನಸ್ಸು ಹಂಬಲಿಸಿದ, ಸಾಧಿಸಲೇಬೇಕು ಎಂದು ಕಂಡ ಕನಸುಗಳನ್ನು ಸಾಕಾರಗೊಳಿಸುವಲ್ಲಿ ಬದುಕಿನ ಉದ್ದೇಶ ಸಫಲವಾಗುತ್ತದೆ.

ಬದುಕಿನ ಭದ್ರತೆಗೆ ಉಳಿತಾಯ ಬೇಕು. ಉಳಿತಾಯ ಮಾಡುವುದೇ ಗೀಳಾಗಬಾರದು. ಕೆಲವರು ಹೊಟ್ಟೆ, ಬಟ್ಟೆ ಕಟ್ಟಿ ಹಣ ಸಂಗ್ರಹಿಸಿ ಇಡುತ್ತಾರೆ. ಒಂದು ಪತ್ರಿಕೆ, ಪುಸ್ತಕ ಕೊಳ್ಳುವುದಕ್ಕೆ, ಗೆಳೆಯರೊಂದಿಗೆ ಹೋಟೆಲಿಗೆ ಹೋಗಿ ಚಹಾ ಕುಡಿಯುವುದಕ್ಕೆ ಖರ್ಚು ಮಾಡಲು ಒಪ್ಪುವುದಿಲ್ಲ. ನನ್ನ ಪರಿಚಿತ ನಿವೃತ್ತ ಪ್ರಾಚಾರ್ಯರೊಬ್ಬರು ಮನೆಗೆ ಯಾವ ಪತ್ರಿಕೆಯನ್ನೂ ತರಿಸಿಕೊಳ್ಳುವುದಿಲ್ಲ. ‘ಸಾರ್ವಜನಿಕ ವಾಚನಾಲಯದಲ್ಲಿ ಪತ್ರಿಕೆಗಳನ್ನು ಓದುತ್ತೇನೆ. ಪತ್ರಿಕೆ ಕೊಳ್ಳುವುದನ್ನು ನಿಲ್ಲಿಸಿದ್ದರಿಂದ ವಾರ್ಷಿಕ ₹ 2,000 ಉಳಿತಾಯವಾಗುತ್ತದೆ’ ಎಂಬ, ಗಣಿತ ವಿಷಯದಲ್ಲಿ ಪಿಎಚ್.ಡಿ ಮಾಡಿರುವ ಅವರ ಮಾತು ಕೇಳಿ ನಗು ಬರುತ್ತದೆ.

ಮರಾಠಿ ಭಾಷಾ ಶಿಕ್ಷಕರಾಗಿದ್ದ ಎಸ್.ಎಸ್.ಉಕಲಿ ಅವರು ನಿವೃತ್ತಿಯ ನಂತರ ಕನ್ನಡ ಭಾಷಾ ಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ, ಹಳೆಗನ್ನಡದ ಮಹತ್ವದ 8 ಕೃತಿಗಳನ್ನು ಸರಳ ಕನ್ನಡಕ್ಕೆ ರೂಪಾಂತರಿಸಿ, ತಮ್ಮದೇ ಹಣ ಸುರಿದು ಪ್ರಕಟಿಸಿದ್ದಾರೆ. ಈ ಗ್ರಂಥಗಳನ್ನು ಶಾಲೆ, ಕಾಲೇಜು ಮತ್ತು ಆಸಕ್ತರಿಗೆ ಉಚಿತವಾಗಿ ತಲುಪಿಸುತ್ತಿದ್ದಾರೆ. ‘ವೃತ್ತಿಯಲ್ಲಿದ್ದಾಗ ಕನ್ನಡಕ್ಕಾಗಿ ಏನೂ ಮಾಡಲು ಆಗಲಿಲ್ಲ. ಆ ಹಳಹಳಿ ಬಹಳ ಕಾಡುತ್ತಿತ್ತು. ನಿವೃತ್ತಿಯ ದಿನಗಳನ್ನು ಕನ್ನಡಕ್ಕಾಗಿ ಬಳಸಿಕೊಳ್ಳುತ್ತಿದ್ದೇನೆ. ಇದು ನನಗೆ ನೆಮ್ಮದಿ, ಆರೋಗ್ಯ ಕೊಟ್ಟಿದೆ. 86ನೇ ವಯಸ್ಸಿನಲ್ಲಿಯೂ ಗಟ್ಟಿಮುಟ್ಟಾಗಿದ್ದೇನೆ’ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಆಸ್ತಿ, ಸಂಪತ್ತು, ಅಧಿಕಾರ ಗಳಿಸುವುದಕ್ಕೆ ಮನುಷ್ಯ ಹೆಣಗುತ್ತಲೇ ಇರುತ್ತಾನೆ. ಬದುಕು ಇದರಲ್ಲಿಯೇ ಕಳೆದುಹೋಗುವ ಅಪಾಯವಿದೆ. ಅವನು ತನ್ನ ಅಂತರಂಗದ ಪಿಸುಧ್ವನಿಯನ್ನು ಕೇಳಿಸಿಕೊಳ್ಳುವ ವಿವೇಕವನ್ನೂ ಮೈಗೂಡಿಸಿಕೊಳ್ಳಬೇಕು. ಬದುಕಿನ ಕ್ಷಣಿಕತೆ ಮತ್ತು ನಶ್ವರತೆ ಬಗ್ಗೆ ಸದಾ ಎಚ್ಚರದಿಂದಿರಬೇಕು ಎಂಬ, ಅಸ್ತಿತ್ವವಾದಿ ದಾರ್ಶನಿಕ ಮಾರ್ಟಿನ್ ಹೈಡೆಗೆ ಅವರ ಮಾತು ಸ್ಮರಣೀಯವಾಗಿದೆ.

ಅಮೆರಿಕದ ಉಕ್ಕು ಉದ್ಯಮಿಯಾಗಿದ್ದ ಆ್ಯಂಡ್ರೂ ಕಾರ್ನೆಗಿ, ಮುಪ್ಪು ಆವರಿಸುತ್ತಲೇ ಎಚ್ಚೆತ್ತು ತಮ್ಮ ಸಂಪತ್ತನ್ನು ಗ್ರಂಥಾಲಯ ನಿರ್ಮಾಣಕ್ಕೆ ಧಾರೆಯೆರೆದರು. ‘ಶ್ರೀಮಂತನಾಗಿ ಸಾಯುವ ವ್ಯಕ್ತಿ ಕಳಂಕ ಹೊತ್ತುಕೊಂಡಿರುತ್ತಾನೆ’ ಎಂಬುದು ಕಾರ್ನೆಗಿ ಅವರ ಪ್ರಸಿದ್ಧ ಮಾತು. ಸ್ನೇಹಿತರೊಬ್ಬರಿಗೆ ‘ಮಕ್ಕಳು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರಾ?’ ಎಂದು ವಿಚಾರಿಸಿದೆ. ‘ಪಿಂಚಣಿ ಬರುತ್ತಿದೆಯಲ್ಲಾ, ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ’ ಎಂದರು. ಅವರ ಮಾತಿನಲ್ಲಿ ಹೊಗೆ ಕಾಣಿಸುತ್ತಿತ್ತು.



‘ಹೊರಗೆ ಹೋಗಬೇಡಿ, ನಿಮಗೆ ವಯಸ್ಸಾಯಿತು. ವಾಹನಗಳ ಓಡಾಟ ಜಾಸ್ತಿ’ ಎಂದು ಮನೆಯಲ್ಲಿ ಕಟ್ಟಿ ಹಾಕುತ್ತಾರೆ. ಮನೆಯಲ್ಲೇ ಕುಳಿತುಕೊಂಡರೆ ಹಿಂದಕ್ಕೆ ಸರಿಯಲು ಒಪ್ಪಿಕೊಂಡಂತೆಯೇ. ಸಮಾಜವಾಹಿನಿಯೊಂದಿಗೆ ಜೀವನಧಾರೆ ಪ್ರವಹಿಸುತ್ತಲೇ ಇರಬೇಕು. ಅದು ಬದುಕಿನ ಸೊಗಸು.

ಹಿರಿಯ ನಾಗರಿಕರು ಎಂದಿನಂತೆ ಕ್ರಿಯಾಶೀಲರಾಗಿರಬೇಕು. ಕಲೆ, ಸಾಹಿತ್ಯ, ಸಂಗೀತದಲ್ಲಿ ಆಸಕ್ತಿಯಿದ್ದರೆ ಮುಂದುವರಿಯಬೇಕು. ಹೊಸದನ್ನು ಕಲಿಯಲು ಹಂಬಲಿಸಬೇಕು. ಕಲೆಯಲ್ಲಿ ದೇಹ, ಮನಸ್ಸು, ಬುದ್ಧಿ ಕ್ರಿಯಾಶೀಲವಾಗುತ್ತವೆ. ತಮ್ಮ ಬಳಿ ಇರುವ ಹಣವನ್ನು ಇದಕ್ಕಾಗಿ ಧಾರಾಳವಾಗಿ ಖರ್ಚು ಮಾಡಬೇಕು.

ಸಭೆ, ಸಮಾರಂಭ, ಪ್ರತಿಭಟನೆ, ಹೋರಾಟಗಳಲ್ಲಿ ಭಾಗವಹಿಸಿ ನಿಮ್ಮ ಅಭಿಪ್ರಾಯ ಹೇಳುವ ಅವಕಾಶ ಬಂದರೆ ಧೈರ್ಯವಾಗಿ ಹೇಳಿಬಿಡಿ. ನಿಮ್ಮ ಮನಸ್ಸು ಯೌವನಕ್ಕೆ ಹೊರಳುತ್ತದೆ.

ಜೀವನದಲ್ಲಿ ಯಶಸ್ಸು ದಕ್ಕಬೇಕಾದರೆ ನಾಲ್ಕು ಕೌಶಲಗಳನ್ನು ಕರಗತ ಮಾಡಿಕೊಳ್ಳಬೇಕೆಂದು ಪಂಚತಂತ್ರದ ಒಂದು ಕಥೆ ಹೇಳುತ್ತದೆ. ಮೊದಲನೆಯದು, ಹಣ ಮಾಡುವ ಕೌಶಲವಾದರೆ, ಎರಡನೆಯದು, ಅದನ್ನು ಸಂರಕ್ಷಿಸುವ ಕಲೆ, ಮೂರನೆಯದು, ಹಣ ಖರ್ಚು ಮಾಡಲು ಗೊತ್ತಿರಬೇಕು. ಕೊನೆಯದಾಗಿ, ದಾನ ಮಾಡುವ ಕೌಶಲ ರೂಢಿಸಿಕೊಳ್ಳಬೇಕು.

ನಿನ್ನ ನಂತರವೂ ನೀನು ಉಳಿಯಬೇಕೆಂದರೆ, ನಿನ್ನ ನಿರ್ಗಮನ ಸಮಾಜಕ್ಕೆ ನಷ್ಟ ಎನ್ನುವಂತೆ ಬದುಕಬೇಕು ಎಂದು ಲೇಖಕ ಜಾನ್ ರಸ್ಕಿನ್ ಹೇಳಿದ ಮಾತು ಇಲ್ಲಿ ನೆನಪಾಗುತ್ತದೆ.

ವಾಚಕರ ವಾಣಿ

ತನಿಖಾಧಿಕಾರಿಯನ್ನು ಕಾನೂನು ಕ್ಷಮಿಸದು

ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಆರೋಪಿ ಮಂಜುನಾಥ ಮೇಳಕುಂದಿ ಈ ಮೊದಲು ಲೋಕೋಪಯೋಗಿ ಇಲಾಖೆಯ ಎಇ, ಜೆಇ ಪರೀಕ್ಷೆಯಲ್ಲಿ ಅಕ್ರಮ ನಡೆಸಿ ಸಿಕ್ಕಿಬಿದ್ದಿದ್ದ ‘ಬಂಧನಾವಧಿ’ಯಲ್ಲಿ 17 ದಿನ ವೈದ್ಯಕೀಯ ರಜೆ ಪಡೆದಿದ್ದ ಸಂಗತಿಯನ್ನು ಓದಿದಾಗ (ಪ್ರ.ವಾ., ಮೇ 9), ಯಾರಿಗೇ ಆಗಲಿ ಅವರನ್ನು ನಿಂದಿಸಬೇಕೆಂಬ ಮನಸ್ಸಾಗುವುದು ಸಹಜ. ಆದರೆ, ಅವರೊಬ್ಬರನ್ನೇ ನಿಂದಿಸುವುದರಲ್ಲಿ ಅರ್ಥವಿಲ್ಲ! ಅವರೇನೋ ಯಾರಿಗೂ ಗೊತ್ತಾಗದಂತೆ ದಸ್ತಗಿರಿಯಾಗಿ 17 ದಿನ ಜೈಲಿನಲ್ಲಿದ್ದು, ಹೊರಗೆ ಬಂದು ಬಂಧನದ ಬಗ್ಗೆ ಇಲಾಖೆಗೆ ಮಾಹಿತಿ ನೀಡದೆ, ವೈದ್ಯಕೀಯ ರಜೆಗೆ ಅರ್ಜಿ ಸಲ್ಲಿಸಿ ರಜೆ ಮಂಜೂರು ಮಾಡಿಸಿಕೊಂಡು ತಂತ್ರಗಾರಿಕೆ ಮೆರೆದಿದ್ದಾರೆ.

ಇಲ್ಲಿ ಅವರನ್ನು ದಸ್ತಗಿರಿ ಮಾಡಿದ ತನಿಖಾಧಿಕಾರಿಯು ದಸ್ತಗಿರಿಯ ವಿಚಾರವನ್ನು ಕೂಡಲೇ ಮೇಳಕುಂದಿ ಅವರ ಮೇಲಧಿಕಾರಿಗೆ ತಿಳಿಸುವುದು ಕಾನೂನಿನಲ್ಲಿ ಆದ್ಯ ಕರ್ತವ್ಯವಾಗಿತ್ತು. ಆದರೆ, ತನಿಖಾಧಿಕಾರಿ ಕಾನೂನಿನ ಸನ್ನಿವೇಶದಲ್ಲಿ (ಆರೋಪಿ ಹಿತರಕ್ಷಣೆ) ಮೈಮರೆತಿದ್ದ ಕಾರಣದಿಂದ ಅದನ್ನು ತಿಳಿಸಲಾಗಲಿಲ್ಲವೋ ಮೇಳಕುಂದಿ ಅವರೊಂದಿಗೆ ಷರೀಕರಾಗಿದ್ದ ಸಲುವಾಗಿ ತಿಳಿಸಲಿಲ್ಲವೋ ಅರ್ಥವಾಗದು. ಈ ಸಂಗತಿಯಲ್ಲಿ ಮೇಳಕುಂದಿ ಅವರನ್ನು ಮೀರಿಸುವಷ್ಟು ದೂಷಣಾರ್ಹರು ಯಾರೆಂದರೆ, ಅವರನ್ನು ದಸ್ತಗಿರಿ ಮಾಡಿ ಕೋರ್ಟ್ ಮುಂದೆ ಹಾಜರುಪಡಿಸಿ, ನಂತರ ಕಾರಾಗೃಹಕ್ಕೆ ಸದ್ದುಗದ್ದಲವಿಲ್ಲದೆ ಅವರು ಹೋಗಿ ಬರುವಂತೆ ನೋಡಿಕೊಂಡ ತನಿಖಾಧಿಕಾರಿ. ಇವರನ್ನು ಮಾತ್ರ ಕಾನೂನು ಕ್ಷಮಿಸುವುದಿಲ್ಲ.

ಸಿ.ಎಚ್.ಹನುಮಂತರಾಯ, ಬೆಂಗಳೂರು

ಜಯಂತಿಗೆ ಬಳಸುವ ಹಣ ಸದ್ವಿನಿಯೋಗವಾಗಲಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರಿನಲ್ಲಿ ಏಪ್ರಿಲ್ ಮತ್ತು ಮೇ ತಿಂಗಳುಗಳ ಅವಧಿಯಲ್ಲಿ ದಲಿತರು ಮತ್ತು ದಲಿತೇತರರು ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಆದರೂ ಇಂದಿಗೂ ಹಳ್ಳಿಗಳಲ್ಲಿ ಜಾತಿ ತಾರತಮ್ಯ ಹೋಗಿಲ್ಲ. ದಲಿತರ ಮಕ್ಕಳು ಮೇಲ್ವರ್ಗದ ಹುಡುಗಿಯರನ್ನು ಮದುವೆಯಾದರೆ, ಹಾಡಹಗಲೇ ಭೀಕರ ಕೊಲೆಗಳು ಆಗುತ್ತವೆ, ಮರ್ಯಾದೆಗೇಡು ಹತ್ಯೆಗಳು ನಡೆಯುತ್ತವೆ. ಎಷ್ಟು ವರ್ಷಗಳ ಕಾಲ ಈ ಜಯಂತಿಯನ್ನು ಹೀಗೇ ಆಚರಿಸುವುದು. ಜಯಂತಿ ಆಚರಿಸಿ ಅಂಬೇಡ್ಕರ್ ಅವರನ್ನು ಕೊಂಡಾಡಿದರೆ ಸಾಲದು.

‘ನನ್ನ ಅನುಯಾಯಿ ಆಗಿ. ಆದರೆ ನನ್ನನ್ನು ಆರಾಧಿಸಬೇಡಿ’ ಎಂದಿದ್ದ ಅಂಬೇಡ್ಕರ್ ಅವರ ಮಾತನ್ನು ನಾವು ಮರೆತಿದ್ದೇವೆ. ಹೀಗೆ ನಾವು ವರ್ಷಕ್ಕೊಮ್ಮೆ ಜಯಂತಿಗಾಗಿ ವ್ಯರ್ಥ ಮಾಡುವ ಲಕ್ಷಾಂತರ ರೂಪಾಯಿಯನ್ನು ಒಂದೆಡೆ ಮೂಲ ಬಂಡವಾಳವಾಗಿ ತೊಡಗಿಸಿದರೆ, ಅದರಿಂದ ಬರುವ ಬಡ್ಡಿ ದರದಲ್ಲಿ ದಲಿತರ ಮಕ್ಕಳಿಗೆ ಐಎಎಸ್, ಕೆಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ್ ನೀಡಬಹುದು. ಆಗ ಅವರಲ್ಲಿ ಸುಮಾರು ಮಂದಿ ಉನ್ನತ ಸರ್ಕಾರಿ ಹುದ್ದೆಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ಡಾ. ರಾಜಕುಮಾರ ಎಂ. ದಣ್ಣೂರ, ಅಫಜಲಪುರ

ನ್ಯಾಯ ಕೊಡಿಸಲು ಅಧಿಕಾರವೇ ಬೇಕೆ?

‘ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕೆರೆಕೋಡಿಗಳನ್ನು ನುಂಗಿದವರನ್ನು ಖಾಲಿ ಮಾಡಿಸುತ್ತೇವೆ. ಆ ಕೆರೆಗಳಿಗೆ ಹಿಂದಿನ ವೈಭವವನ್ನು ಮರಳಿಸುತ್ತೇವೆ’ ಎಂದು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 11). ನ್ಯಾಯ ಕೊಡಿಸಲು ಅಥವಾ ಅನ್ಯಾಯ ಎಸಗಿದವರನ್ನು ಜೈಲಿಗೆ ಕಳಿಸಲು ಅಧಿಕಾರವೇ ಬೇಕೆ? ಜನಸಾಮಾನ್ಯರಿಗಿಂತ ಜನಪ್ರತಿನಿಧಿಗಳಿಗೆ, ಮಾಜಿ ಮಂತ್ರಿಗಳಿಗೆ, ಮಾಜಿ ಮುಖ್ಯಮಂತ್ರಿಗಳಿಗೆ ಎಲ್ಲ ದಾಖಲೆಗಳೂ ಸುಲಭವಾಗಿ ದೊರಕುತ್ತವೆ. ಅವುಗಳನ್ನು ಸರ್ಕಾರಕ್ಕೆ ಮತ್ತು ನ್ಯಾಯಾಲಯಕ್ಕೆ ನೀಡಿ ಸಂಘಟಿತ ಹೋರಾಟ ಮಾಡುವ ಮೂಲಕ ಒತ್ತಡ ತಂದರೆ, ಕೆರೆಗಳ ವೈಭವ ತಂತಾನೇ ಮರುಕಳಿಸುತ್ತದೆ. ಒಬ್ಬ ಜನಸಾಮಾನ್ಯನಾಗಿಯೂ ಇದನ್ನು ಮಾಡಬಹುದು.

‘ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ...’ ಎಂಬ ಹೇಳಿಕೆಯು ಅಧಿಕಾರ ಗಳಿಸುವುದಕ್ಕೆ ಮಾತ್ರ ಎಂಬುದು ಮೇಲ್ನೋಟಕ್ಕೇ ತಿಳಿಯುವ ವಿಚಾರ. ಸರ್ಕಾರದಿಂದ ಹೊರಗಿದ್ದುಕೊಂಡೂ ಜನಪರ ಕೆಲಸ ಮಾಡಬಹುದು ಎಂಬುದನ್ನು ತೋರಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಜೀವದಾಯಿನಿಯರಿಗೆ ಇದ್ದೇ ಇದೆ ಅಪಾಯ

‘ಜೀವದಾಯಿನಿಯರು ಜೀವ ಕಳೆದುಕೊಂಡಾರು!’ ಎಂಬ ರೂಪ ಹಾಸನ ಅವರ ಲೇಖನ (ಸಂಗತ, ಮೇ 11) ಓದಿದೆ. ಇಲ್ಲಿ ಮತ್ತಷ್ಟು ಅಂಶಗಳನ್ನು ನಾವು ಗಮನಿಸಬೇಕಿದೆ. ನಮ್ಮ ಪಶ್ಚಿಮ ಘಟ್ಟಗಳಿಂದ ಹರಿದು ಬರುವ ನದಿ ನೀರನ್ನು ನೂರಾರು ಕಿ.ಮೀ. ದೂರದ ಕಾರ್ಖಾನೆಗಳಿಗೆ ನೀಡಲಾಗುತ್ತದೆ. ಹಾಗೆಯೇ ಬಹಳ ದೂರದ ನಗರಗಳ ಕುಡಿಯುವ ನೀರಿಗಾಗಿಯೂ ಕೊಂಡೊಯ್ಯಲಾಗುತ್ತಿದೆ. ಅದಕ್ಕಾಗಿ ಕೋಟ್ಯಂತರ ರೂಪಾಯಿಯ ಯೋಜನೆಯನ್ನು ಸರ್ಕಾರಗಳು ಕಾರ್ಯಗತಗೊಳಿಸುತ್ತಿವೆ. ಆದರೆ ಮುಂದೊಂದು ದಿನ ಈ ಜಲಮೂಲಗಳೇ ಬತ್ತಿಹೋಗಬಹುದೆಂಬ ಕನಿಷ್ಠ ಊಹೆಯನ್ನೂ ನಮ್ಮ ಸರ್ಕಾರವಾಗಲೀ ಅಧಿಕಾರಿಗಳಾಗಲೀ ಮಾಡುವುದಿಲ್ಲ. ಹೀಗಾಗಿ, ಸರ್ಕಾರದ ಬೊಕ್ಕಸ ಅಪವ್ಯಯವಾಗುತ್ತಿದೆಯೇ ವಿನಾ ಜೀವದಾಯಿನಿಯನ್ನು ಉಳಿಸಿ ಬೆಳೆಸುವ ಕಾರ್ಯ ಮಾಡಿದಂತೆ ಆಗುವುದಿಲ್ಲ. ಮಳೆ ನೀರು ಅಲ್ಲಲ್ಲೆ ಇಂಗುವಂಥ ಸಣ್ಣ ಸಣ್ಣ ಕೆರೆ ಕಟ್ಟೆಗಳನ್ನು ನಿರ್ಮಿಸುವ ಯೋಜನೆಯ ಕಡೆ ಸರ್ಕಾರ ಪರಿಣಾಮಕಾರಿಯಾಗಿ ಲಕ್ಷ್ಯ ವಹಿಸುವುದಿಲ್ಲ. ಇದರಿಂದ ನಮ್ಮ ಜೀವದಾಯಿನಿಯರು ಜೀವ ಕಳೆದುಕೊಳ್ಳುವ ಅಪಾಯ ಇದ್ದೇಇದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ವಾಸ್ತವ ತೆರೆದಿಡುವ ದಿಟ್ಟ ಪ್ರಯತ್ನ


‘ಪದೇ ಪದೇ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನಡಿ ಮತ ಹಾಕಲು ಜನರೇನೂ ದಡ್ಡರಲ್ಲ. ಅವರ ಮೋಡಿ ಮುಂದಿನ ಚುನಾವಣೆಯಲ್ಲಿ ಕೆಲಸ ಮಾಡದು. ಸರ್ಕಾರದ ಯೋಜನೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಿದಾಗ ಮಾತ್ರ ಚುನಾವಣೆ ಗೆಲ್ಲಲು ಸಾಧ್ಯ’ ಎಂಬ ಕೊಪ್ಪಳ ಸಂಸದ ಸಂಗಣ್ಣ ಕರಡಿ ಅವರ ಇತ್ತೀಚಿನ ಹೇಳಿಕೆ ಜನಪ್ರತಿನಿಧಿಗಳಿಗೆ ಎಚ್ಚರಿಕೆಯ ಗಂಟೆಯಾಗಬೇಕು. ಸ್ವಲ್ಪ ವಿಳಂಬವಾದರೂ ಸಂಸದರು ವಾಸ್ತವವನ್ನು ತೆರೆದಿರಿಸುವ ಧೈರ್ಯ ಮತ್ತು ಪ್ರಯತ್ನವನ್ನು ಮಾಡಿದ್ದಾರೆ. ಈಗಿನ ರಾಜಕೀಯ ಮತ್ತು ಚುನಾವಣಾ ಪರಿಸ್ಥಿತಿಯು ಇಂದಿರಾ ಗಾಂಧಿ ಅವರ ಕಾಲದಲ್ಲಿ ಇದ್ದಂತೆ ಇದ್ದು, ವ್ಯಕ್ತಿ ಮತ್ತು ಪಕ್ಷ ಪೂಜೆ ಉತ್ತುಂಗದಲ್ಲಿದೆ. ಕಾಂಗ್ರೆಸ್ ಪಕ್ಷದ ಅಂದಿನ ಅಧ್ಯಕ್ಷ ಡಿ.ಕೆ.ಬರುವಾ ಅವರ ‘ಇಂದಿರಾ ಈಸ್ ಇಂಡಿಯಾ... ಇಂಡಿಯಾ ಈಸ್ ಇಂದಿರಾ’ ಘೋಷಣೆಯನ್ನು ನೆನಪಿಸುತ್ತದೆ.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

₹3.76 ಲಕ್ಷ ಕೋಟಿ ಹೂಡಿಕೆ ಹಿಂತೆಗೆತ





● ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ತನ್ನ ಅಧೀನದಲ್ಲಿ ಇದ್ದ, ಸರ್ಕಾರ ಹೂಡಿಕೆ ಮಾಡಿರುವ ಕಂಪನಿಗಳಿಂದ ಬಂಡವಾಳ ಹಿಂತೆಗೆಯುವ ಕಾರ್ಯಕ್ರಮನ್ನು ಅನುಷ್ಠಾನಕ್ಕೆ ತಂದು ಎಂಟು ವರ್ಷಗಳು ಕಳೆದಿವೆ. 2014–15ನೇ ಸಾಲಿನಿಂದ 2021–22ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದವರೆಗೆ ಸರ್ಕಾರವು ತನ್ನ ಒಡೆತನದಲ್ಲಿದ್ದ ಒಟ್ಟು ₹3.76 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದೆ. 2022–23ನೇ ಸಾಲಿನ ಮೊದಲ ತಿಂಗಳಲ್ಲಿ ಮತ್ತೆ ₹3,058 ಕೋಟಿ ಮೌಲ್ಯದಷ್ಟು ಷೇರುಗಳನ್ನು ಮಾರಾಟ ಮಾಡಿದೆ.

ಈ ಕಾರ್ಯಕ್ರಮದ ಮೂಲಕ ಕೆಲವು ಕಂಪನಿಗಳನ್ನು ಸಂಪೂರ್ಣವಾಗಿ ಮಾರಾಟ ಮಾಡಿರುವ ಸರ್ಕಾರವು, ಅವುಗಳ ನಿಯಂತ್ರಣ ಅಧಿಕಾರವನ್ನೂ ಬಿಟ್ಟುಕೊಟ್ಟಿದೆ. ಈ ಸ್ವರೂಪದ ಮಾರಾಟವನ್ನು ಸರ್ಕಾರವು ಖಾಸಗೀಕರಣ ಎಂದೂ ಹೆಸರಿಸಿದೆ. ಅಂದರೆ, ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಬಂಡವಾಳ ಹಿಂತೆಗೆತದ ಮೂಲಕ ಖಾಸಗೀರಣ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕಂಪನಿಗಳನ್ನು ಹೀಗೆ ಖಾಸಗೀಕರಣ ಮಾಡುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ.

ಹಲವು ಕಂಪನಿಗಳಲ್ಲಿ ಸರ್ಕಾರವು ಹೊಂದಿದ್ದ ಷೇರುಗಳನ್ನು ಗಣನೀಯ ಪ್ರಮಾಣದಲ್ಲಿ ಮಾರಾಟ ಮಾಡಲಾಗಿದೆ. ಆದರೆ ಶೇ 51ಕ್ಕಿಂತ ಹೆಚ್ಚು ಷೇರುಗಳನ್ನು ತನ್ನಲ್ಲಿಯೇ ಉಳಿಸಿಕೊಳ್ಳುವ ಮೂಲಕ, ಆಡಳಿತವನ್ನು ತನ್ನ ಬಳಿಯೇ ಉಳಿಸಿಕೊಂಡಿದೆ.

ಕೆಲವು ಕಂಪನಿಗಳ ಷೇರುಗಳು, ಬೇರೆ ಕಂಪನಿಗಳ ಒಡೆತನದಲ್ಲಿದ್ದವು. ಅಂತಹ ಷೇರುಗಳನ್ನು ಸರ್ಕಾರವು ಮರಳಿ ಖರೀದಿಸಿದೆ. ಆ ಷೇರುಗಳನ್ನು ಮರುಮಾರಾಟ ಮಾಡಲಾಗಿದೆ. ಆದರೆ ಮಾರಾಟದ ಸ್ವರೂಪ ಮಾತ್ರ ಭಿನ್ನ. ಕೆಲವು ಕಂಪನಿಗಳ ಷೇರುಗಳನ್ನು ಅವುಗಳ ನೌಕರರಿಗೇ ವಿಕ್ರಯ ಮಾಡಲಾಗಿದೆ. ಕೆಲವು ಕಂಪನಿಗಳ ಷೇರುಗಳನ್ನು ಇನಿಷಿಯಲ್ ಪಬ್ಲಿಕ್ ಆಫರಿಂಗ್ (ಐಪಿಒ) ಮೂಲಕ ಷೇರುಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಒಂದೇ ಕಂಪನಿಯ ಷೇರುಗಳನ್ನು ಹಲವು ಹಂತಗಳಲ್ಲಿ ಮಾರಾಟ ಮಾಡುವ ಮೂಲಕ ಸರ್ಕಾರವು, ಆ ಕಂಪನಿಯಲ್ಲಿ ತನ್ನ ಪಾಲನ್ನು ಕಡಿಮೆ ಮಾಡಿಕೊಂಡಿದೆ. 'ಉದ್ದಿಮೆ ನಡೆಸುವುದು ಸರ್ಕಾರದ ಕೆಲಸವಲ್ಲ' ಎಂಬುದು ಬಂಡವಾಳ ಹಿಂತೆಗೆತಕ್ಕೆ ಸಂಬಂಧಿಸಿದಂತೆ ಮೋದಿ ಅವರ ಘೋಷಣೆ. ಅಂದರೆ ಬಂಡವಾಳ ಹಿಂತೆಗೆದ ಮೂಲಕ ಸರ್ಕಾರಿ ಕಂಪನಿಗಳಲ್ಲಿನ ತನ್ನ ನಿಯಂತ್ರಣವನ್ನು ಖಾಸಗಿಯವರಿಗೆ ಬಿಟ್ಟುಕೊಡುವ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ.

ಸಂಪೂರ್ಣ ಮಾರಾಟ

ಕೇಂದ್ರ ಸರ್ಕಾರವು ತನ್ನ ಅಧೀನದಲ್ಲಿದ್ದ ಲಾಭದಲ್ಲಿದ್ದ ಮತ್ತು ನಷ್ಟದಲ್ಲಿದ್ದ ಕೆಲವು ಕಂಪನಿಗಳನ್ನು ಸಂಪೂರ್ಣವಾಗಿ ಮಾರಾಟ ಮಾಡಿದೆ. ಎಂಟು ವರ್ಷಗಳಲ್ಲಿ ಹೀಗೆ ಒಟ್ಟು ಎಂಟು ಕಂಪನಿಗಳನ್ನು ಮಾರಾಟ ಮಾಡಲಾಗಿದೆ. ಈ ಕಂಪನಿಗಳಲ್ಲಿ ಸರ್ಕಾರವು ಶೇ 1ರಷ್ಟು ಷೇರುಗಳನ್ನೂ ಈಗ ಹೊಂದಿಲ್ಲ. ಹೀಗೆ ಮಾರಾಟ ಮಾಡುವುದರೊಂದಿಗೆ ಆ ಕಂಪನಿಗಳ ನಿಯಂತ್ರಣವನ್ನೂ ಸರ್ಕಾರವು ವರ್ಗಾಯಿಸುತ್ತದೆ. ಈ ಸ್ವರೂಪದ ಮಾರಾಟವನ್ನು ಖಾಸಗೀಕರಣ ಎಂದು ಸರ್ಕಾರವು ವಿವರಿಸಿದೆ.

- ಸಾರ್ವಜನಿಕ ಸೇವೆಯಲ್ಲಿ ಅತ್ಯಂತ ಮುಖ್ಯವಾದ ಕಂಪನಿಗಳನ್ನೂ ಈ ರೀತಿ ಸಂಪೂರ್ಣವಾಗಿ ಮಾರಾಟ ಮಾಡಲಾಗಿದೆ. ಈಶಾನ್ಯ ಭಾರತದಲ್ಲಿ ವಿದ್ಯುತ್ ಪೂರೈಕೆಯ ಹೊಣೆ ಹೊತ್ತಿರುವ ಈಶಾನ್ಯ ವಿದ್ಯುಚ್ಛಕ್ತಿ ಕಾರ್ಪೊರೇಷನ್ ಲಿಮಿಟೆಡ್ ಅನ್ನು ಸಂಪೂರ್ಣವಾಗಿ ಮಾರಾಟ ಮಾಡಲಾಗಿದೆ
- ದೇಶದ ವಿದ್ಯುಚ್ಛಕ್ತಿ ಕಂಪನಿಗಳು ಮತ್ತು ಯೋಜನೆಗಳಿಗೆ ಹಣಕಾಸು ನೆರವು ಮತ್ತು ಸಾಲ ಒದಗಿಸುವ ಪ್ರಮುಖ ಕಂಪನಿಯಾದ ಪವರ್ ಫೈನಾನ್ಸ್ ಕಾರ್ಪೊರೇಷನ್ ಲಿಮಿಟೆಡ್‌ನ ಎಲ್ಲಾ ಷೇರುಗಳನ್ನು ಸರ್ಕಾರ ಮಾರಾಟ ಮಾಡಿದೆ
- ದೇಶದ ಬಂದರುಗಳು ಮತ್ತು ವಿದೇಶಿ ಬಂದರುಗಳಲ್ಲೂ ಹೂಳೆತ್ತುವ ಸೇವೆ ಒದಗಿಸುವ ಡ್ರೆಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನ ಎಲ್ಲಾ ಷೇರುಗಳನ್ನು ಸರ್ಕಾರ ಮಾರಾಟ ಮಾಡಿದೆ

₹285 ಕೋಟಿ — ಎಚ್‌ಎಸ್‌ಸಿಸಿ ಇಂಡಿಯಾ ಲಿಮಿಟೆಡ್

₹2,383 ಕೋಟಿ — ಕಾಮರಾಜ್ ಪೋರ್ಟ್ ಲಿಮಿಟೆಡ್

₹219.34 ಕೋಟಿ — ಐಪಿಸಿಎಲ್

₹7,500 ಕೋಟಿ — ಟಿಎಚ್‌ಡಿಸಿ ಇಂಡಿಯಾ ಲಿಮಿಟೆಡ್

₹1,049.17 ಕೋಟಿ — ಡ್ರೆಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್

₹14,499.99 ಕೋಟಿ — ಪವರ್ ಫೈನಾನ್ಸ್ ಕಾರ್ಪೊರೇಷನ್ ಲಿಮಿಟೆಡ್

₹4,000 ಕೋಟಿ — ಈಶಾನ್ಯ ವಿದ್ಯುಚ್ಛಕ್ತಿ ಕಾರ್ಪೊರೇಷನ್ ಲಿಮಿಟೆಡ್

₹2,700 ಕೋಟಿ — ಏರ್ ಇಂಡಿಯಾ


8 ಈ ಸ್ವರೂಪದಲ್ಲಿ ಮಾರಾಟ ಮಾಡಲಾದ ಕಂಪನಿಗಳ ಸಂಖ್ಯೆ

₹32,636 ಕೋಟಿ ಈ ಕಂಪನಿಗಳ ಮಾರಾಟದಿಂದ ಸರ್ಕಾರಕ್ಕೆ ದೊರೆತ ವರಮಾನ

ಆಧಾರ: ಸಾರ್ವಜನಿಕ ಆಸ್ತಿ ನಿರ್ವಹಣೆ ಮತ್ತು ಬಂಡವಾಳ ಹಿಂತೆಗೆತ ಇಲಾಖೆ ವಾರ್ಷಿಕ ವರದಿಗಳು, ಪಿಟಿಐ

ಇಂಡಿಯನ್ ಆಯಿಲ್‌ನಲ್ಲಿ ಸರ್ಕಾರದ ಪಾಲು ಇಳಿಕೆ

ದೇಶದ ಅತ್ಯಂತ ದೊಡ್ಡ ತೈಲ ಸಂಸ್ಕರಣ ಮತ್ತು ಮಾರಾಟ ಕಂಪನಿಯಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ (ಐಒಸಿಎಲ್) ಷೇರುಗಳನ್ನು ಕೇಂದ್ರ ಸರ್ಕಾರವು ಹಲವು ಬಾರಿ ಮಾರಾಟ ಮಾಡಿದೆ. ಹೀಗೆ ಮಾರಾಟ ಮಾಡಿದ ಕಾರಣ, ಕಂಪನಿಯ ಷೇರುಗಳಲ್ಲಿ ಸರ್ಕಾರದ ಪಾಲುದಾರಿಕೆ ಕುಸಿದಿದೆ. ಷೇರುಗಳ ಮಾರಾಟದಿಂದ ಸರ್ಕಾರವು ದೊಡ್ಡ ಪ್ರಮಾಣದ ವರಮಾನವನ್ನೂ ಗಳಿಸಿದೆ.



ಬಂಡವಾಳ ಹಿಂತೆಗೆತ ನೀತಿ


ಕೇಂದ್ರ ಸರ್ಕಾರದ ಒಡೆತನದ ಹಾಗೂ ಸರ್ಕಾರ ಹೂಡಿಕೆ ಮಾಡಿರುವ ಕಂಪನಿಗಳಲ್ಲಿ ಇರುವ ಬಂಡವಾಳದ ಪಾಲನ್ನು ವಾಪಸ್ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಸರ್ಕಾರ ನಡೆಸುತ್ತಿದ್ದು, ಇದನ್ನು ಸಮರ್ಥಿಸಿಕೊಳ್ಳಲು ಕೆಲವು ಕಾರಣಗಳನ್ನು ಮುಂದಿಟ್ಟಿದೆ. ಸರ್ಕಾರ ಹಮ್ಮಿಕೊಂಡಿರುವ ಹಲವು ಬಗೆಯ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ದೊಡ್ಡ ಮೊತ್ತದ ಹಣ ಅಗತ್ಯವಿದೆ. ಬಂಡವಾಳ ಹಿಂತೆಗೆತದಿಂದ ಬಂದ ವರಮಾನವನ್ನು ಈ ಕಲ್ಯಾಣ ಕಾರ್ಯಕ್ರಮಗಳನ್ನು ಮುನ್ನಡೆಸಲು ಬಳಸಿಕೊಳ್ಳುವ ಉದ್ದೇಶವನ್ನು ವ್ಯಕ್ತಪಡಿಸಿದೆ. ಜೊತೆಗೆ, ಸರ್ಕಾರಿ ಒಡೆತನದ ಕಂಪನಿಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹಿಸುವುದು, ಹೊಸ ತಂತ್ರಜ್ಞಾನವನ್ನು ಪರಿಚಯಿಸುವುದು ಹಾಗೂ ಈ ಸಂಸ್ಥೆಗಳ ನಿರ್ವಹಣೆಗೆ ಉತ್ತಮ ಮಾದರಿಗಳನ್ನು ಅಳವಡಿಸಿಕೊಳ್ಳುವುದು ಸರ್ಕಾರದ ಉದ್ದೇಶ. ಬಂಡವಾಳ ಹಿಂತೆಗೆತದ ಮೂಲಕ ಈ ಎಲ್ಲ ಉದ್ದೇಶಗಳು ಕಾರ್ಯರೂಪಕ್ಕೆ ಬರಲಿವೆ ಎಂಬುದು ಸರ್ಕಾರದ ಸಮರ್ಥನೆ.

ಸಾರ್ವಜನಿಕ ವಲಯದ ಕಂಪನಿಗಳ ಬಂಡವಾಳ ಹಿಂತೆಗೆತ ನೀತಿಗೆ ಸರ್ಕಾರ ಅನುಮೋದನೆ ನೀಡಿದೆ ಎಂದು 2021–22ರ ಬಜೆಟ್ ಮಂಡಿಸುವ ವೇಳೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರಕಟಿಸಿದ್ದರು. ಸಾರ್ವಜನಿಕ ವಲಯದ ಕಂಪನಿಗಳನ್ನು ಎರಡು ರೀತಿ ವರ್ಗೀಕರಣ ಮಾಡಲಾಗಿದ್ದು, ಸರ್ಕಾರದ ಪಾಲು ಮಾರಾಟ ಮಾಡಲು ಈ ನೀತಿ ಸ್ಪಷ್ಟ ಚೌಕಟ್ಟು ಒದಗಿಸುತ್ತದೆ ಎಂದು ಅವರು ಹೇಳಿದ್ದರು. ಮೊದಲ ವರ್ಗದಲ್ಲಿ ಅಣುಶಕ್ತಿ, ಬಾಹ್ಯಾಕಾಶ, ರಕ್ಷಣೆ, ಸಾರಿಗೆ, ಸಂವಹನ, ವಿದ್ಯುತ್, ಪೆಟ್ರೋಲಿಯಂ, ಕಲ್ಲಿದ್ದಲು ಹಾಗೂ ಇತರೆ ಖನಿಜ ಸಂಸ್ಥೆಗಳು, ಬ್ಯಾಂಕ್, ವಿಮೆ ಹಾಗೂ ಹಣಕಾಸು ಸಂಸ್ಥೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಸರ್ಕಾರದ ಪಾಲನ್ನು ಹಿಂಪಡೆಯುವುದು ಸರ್ಕಾರದ ಉದ್ದೇಶ.

ಎರಡನೇ ವರ್ಗದಲ್ಲಿರುವ ಸಾರ್ವಜನಿಕ ವಲಯದ ಉದ್ಯಮಗಳನ್ನು ಖಾಸಗೀಕರಣಗೊಳಿಸುವುದು ಅಥವಾ ಇತರೆ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ವಿಲೀನ ಮಾಡುವುದು ಅಥವಾ ಅವುಗಳನ್ನು ಬಂದ್ ಮಾಡುವ ಆಯ್ಕೆಗಳಿವೆ. 2021–22ರ ಆರ್ಥಿಕ ವರ್ಷದಲ್ಲಿ ಬಿಪಿಸಿಎಲ್, ಏರ್ ಇಂಡಿಯಾ, ಎಲ್‌ಐಸಿ ಮೊದಲಾದ ಸಂಸ್ಥೆಗಳನ್ನು ಸರ್ಕಾರ ಗುರುತಿಸಿತ್ತು. ಮುಂದಿನ ಹಂತದಲ್ಲಿ ಬಂಡವಾಳ ಹಿಂತೆಗೆತ ಮಾಡಬೇಕಿರುವ ಸಂಸ್ಥೆಗಳನ್ನು ಪಟ್ಟಿ ಮಾಡುವಂತೆ ನೀತಿ ಆಯೋಗಕ್ಕೆ ಸರ್ಕಾರ ಸೂಚಿಸಿತ್ತು.

ಕೋಲ್ ಇಂಡಿಯಾ

ಪ್ರಪಂಚದ ಅತಿಹೆಚ್ಚು ಕಲ್ಲಿದ್ದಲು ಉತ್ಪಾದಕ ಕಂಪನಿಗಳಲ್ಲಿ ಒಂದಾಗಿರುವ ಭಾರತದ 'ಕೋಲ್ ಇಂಡಿಯಾ ಲಿಮಿಟೆಡ್'ನಲ್ಲಿ ಸರ್ಕಾರದ ಪಾಲು ವರ್ಷಗಳು ಉರುಳಿದಂತೆ ಕಡಿಮೆಯಾಗುತ್ತಿದೆ. 2016–17ರಿಂದ 2018–19ರ ಅವಧಿಯಲ್ಲಿ ಸರ್ಕಾರವು ಈ ಕಂಪನಿಯ ಷೇರುಗಳನ್ನು ಮಾರಾಟ ಮಾಡಿ ₹8,912 ಕೋಟಿ ವರಮಾನ ಗಳಿಸಿದೆ. 2018–19ರಲ್ಲಿ ಮೂರು ಬಾರಿ ಷೇರು ಮಾರಾಟಕ್ಕೆ ಇಟ್ಟಿತ್ತು. ಈಗ ಸರ್ಕಾರದ ಬಳಿ ಕೋಲ್ ಇಂಡಿಯಾದ ಶೇ 72ರಷ್ಟು ಷೇರುಗಳಿವೆ.





ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 118

ಕೈಲಾಸಕ್ಕೆ ಶಿವ ಬಂದ ಕಥೆ

ಸೃಷ್ಟಿಖಂಡದ ಅಂತಿಮವಾದ ಕೈಲಾಸೋಪಾಖ್ಯಾನದಲ್ಲಿ 'ಶಿವಕೈಲಾಸ ಆಗಮನ' ಎಂಬ ಅಧ್ಯಾಯದಲ್ಲಿ, ಕೈಲಾಸಕ್ಕೆ ಶಿವ ಬಂದ ಕಥೆಯನ್ನು ನಾರದನಿಗೆ ಬ್ರಹ್ಮ ಹೇಳುತ್ತಾನೆ.

ಕುಬೇರನಿಗೆ ನಿಧಿಪತಿಯಾಗೆಂದು ವರವನ್ನು ಕೊಟ್ಟು, ಶ್ರೇಷ್ಠವಾದ ತನ್ನ ಸ್ವಸ್ಥಾನಕ್ಕೆ ತೆರಳಿದಮೇಲೆ ಜಗದೀಶ್ವರನಾದ ಶಿವನ ಮನಸ್ಸಿನಲ್ಲಿ ಒಂದು ಆಲೋಚನೆ ಮೂಡುತ್ತದೆ. 'ಬ್ರಹ್ಮನ ಶರೀರದಿಂದ ಆವಿರ್ಭವಿಸಿದ, ಪ್ರಳಯ ಕಾರ್ಯಕಾರಿಯಾದ ಹರನು ನನ್ನ ಪೂರ್ಣಾಂಶವಾಗಿದ್ದಾನೆ. ಆ ಹರನ ರೂಪದಿಂದಲೇ ಗುಹ್ಯಕರ ನಿವಾಸವಾದ ಕೈಲಾಸಕ್ಕೆ ಹೋಗುವೆ. ನನ್ನ ಹೃದಯದಿಂದ ಹುಟ್ಟಿದ ರುದ್ರನು ಸಂಪೂರ್ಣವಾದ, ಏಕೈಕ ವಸ್ತುವಾದ, ಪರಬ್ರಹ್ಮವೂ ಆದ ನಾನೇ ಅಲ್ಲವೇ? ವಿಷ್ಣು ಬ್ರಹ್ಮ ಮೊದಲಾದವರಿಂದ ಸೇವಿತನೂ ನಿರ್ಲೇಪನೂ ಆದ ಆತನು ನಾನೇ ಅಲ್ಲದೆ ಬೇರೆಯಲ್ಲ. ಆ ಹರನ ರೂಪದಿಂದಲೇ ಕುಬೇರನಿಗೆ ಮಿತ್ರನಾಗಿ ಈ ಕೈಲಾಸ ಪರ್ವತದಲ್ಲಿಯೇ ನೆಲಸುವೆ. ಅಲ್ಲದೆ ಮಹತ್ತಾದ ತಪಸ್ಸನ್ನೂ ಆಚರಿಸುವೆ' ಎಂದು ಮನಸ್ಸಿನಲ್ಲಿ ತೀರ್ಮಾನಿಸಿದ.

ಶಿವನ ಇಚ್ಛೆಯನ್ನರಿತ ರುದ್ರನು ಕೈಲಾಸಕ್ಕೆ ಹೊರಡಬೇಕೆಂದು ಉತ್ಸುಕತೆಯಿಂದ ನಾದಸ್ವರೂಪಿಣಿಯಾದ ಒಳ್ಳೆಯ ಗತಿಯುಳ್ಳ ತನ್ನ ಢಕ್ಕೆಯನ್ನು ಬಾರಿಸಿದ. ಉತ್ಸಾಹವನ್ನು ಹುಟ್ಟಿಸುತ್ತಿದ್ದ ಮತ್ತು ಎಲ್ಲರನ್ನೂ 'ಬನ್ನಿ ಬನ್ನಿ' ಎಂದು ಕರೆವಂತೆ ಇದ್ದ, ವಿಚಿತ್ರವಾಗಿದ್ದ, ಸ್ವಚ್ಛವಾಗಿರುವ ಶಬ್ದಪರಂಪರೆ ಇರುವ ಆ ಡಮರುಗ ಧ್ವನಿಯು ಮೂರು ಲೋಕಗಳನ್ನೂ ವ್ಯಾಪಿಸಿಬಿಟ್ಟಿತು. ಆ ಧ್ವನಿಯನ್ನು ಕೇಳಿದೊಡನೆಯೇ ವಿಷ್ಣು, ಬ್ರಹ್ಮ ಮೊದಲಾದ ದೇವತೆಗಳು, ಋಷಿಗಳು, ಸ್ವರೂಪವನ್ನು ಧರಿಸಿಬಂದ ಆಗಮಗಳು, ವೇದಗಳು, ಸಿದ್ಧರಾಗಿ ಹರನಿದ್ದಲ್ಲಿಗೆ ಬಂದರು.

ಎಲ್ಲಾ ದೇವತೆಗಳು, ರಾಕ್ಷಸರು, ಮೂಲೆಮೂಲೆಯಲ್ಲೂ ಇದ್ದ ಪ್ರಮಥರು, ಬಹು ಸಡಗರದಿಂದ ಕೈಲಾಸದತ್ತ ಹೊರಟರು. ಜೊತೆಗೆ, ಎಲ್ಲರಿಗೂ ನಮಸ್ಕಾರಾರ್ಹವಾದ ಶಿವಗಣಗಳೂ ಹೊರಟರು. ಅವರ ಲೆಕ್ಕವನ್ನು ಹೇಳುವೆನು, ಗಮನಿಸಿ ಕೇಳು ಎಂದ ಬ್ರಹ್ಮ ಅದರ ಅಂಕಿ–ಸಂಖ್ಯೆಯನ್ನು ನಾರದನಿಗೆ ಹೇಳತೊಡಗಿದ.

ಶಂಕುಕರ್ಣನೆಂಬ ಗಣಾಧೀಶ್ವರನು ಒಂದು ಕೋಟಿ ಗಣಗಳೊಡನೆ, ಕೇಕರಾಕ್ಷಸನೆಂಬುವನು ಹತ್ತು ಕೋಟಿ ಗಣಗಳೊಡನೆ, ವಿಕೃತನೆಂಬುವನು ಎಂಟು ಕೋಟಿ ಗಣಗಳೊಡನೆ ಬಂದರು. ವಿಶಾಖ ಅರವತ್ತನಾಲ್ಕು ಕೋಟಿ, ಪಾರಿಯಾತ್ರಿಕನು ಒಂಬತ್ತು ಕೋಟಿ, ಸರ್ವಾಂತಗನು ಆರು ಕೋಟಿ, ದುಂದುಮನು ಎಂಟು ಕೋಟಿ ಗಣಗಳೊಡನೆ ಬಂದರು. ಗಣಶ್ರೇಷ್ಠನಾದ ಜಾಲಂಕನು ಹನ್ನೆರಡು ಕೋಟಿ ಗಣಗಳೊಂದಿಗೆ, ಸಮದನು ಏಳು ಕೋಟಿ ಗಣಗಳೊಡನೆ, ವಿಕೃತಾನನ ಏಳು ಕೋಟಿ ಗಣಗಳೊಡನೆ ಬಂದರು. ಐದು ಕೋಟಿ ಗಣಗಳೊಡನೆ ಕಪಾಲಿ, ಆರು ಕೋಟಿ ಗಣಗಳೊಡನೆ ಸಂದಾರಕರ, ಕೋಟಿಸಂಖ್ಯಾತವಾದ ಕೋಟಿ ಗಣಗಳೊಡನೆ ಕಂಡುಕ, ಅವನಂತೆಯೇ ಕೋಟಿ ಕೋಟಿ ಗಣಗಳೊಡನೆ ಕುಂಡಕನೂ ಬಂದರು. ವಿಷ್ಟಂಭನೆಂಬುವನು ಎಂಟು ಕೋಟಿ ಗಣಗಳೊಡನೆ, ಚಂದ್ರತಾಪನ ಎಂಟು ಕೋಟಿ ಗಣಗಳೊಡನೆ, ಮಹಾಕೇಶನೆಂಬ ಗಣಾಧಿಪತಿಯು ಸಾವಿರಕೋಟಿ ಗಣಗಳೊಡನೆ ಬಂದರೆ, ಕುಂಡೀ ಮತ್ತು ಪರ್ವತಕನೆಂಬುವರು ಒಬ್ಬೊಬ್ಬರೂ ಹನ್ನೆರಡು ಕೋಟಿ ಗಣಗಳೊಡನೆ ಬಂದರು. ಹಾಗೆಯೇ, ಕಾಲ-ಕಾಲಕ-ಮಹಾಕಾಲ ಎಂಬ ಮೂವರೂ ಪ್ರತ್ಯೇಕವಾಗಿ ನೂರು ಕೋಟಿ ಗಣಗಳೊಡನೆ ಆಗಮಿಸಿದರು.

ನೂರು ಕೋಟಿ ಗಣಗಳೊಡನೆ ಅಗ್ನಿಕನೂ, ಕೋಟಿ ಗಣಗಳೊಡನೆ ಅಭಿಮುಖನೂ, ಆದಿತ್ಯಮೂರ್ಧ ಮತ್ತು ಧನಾವಹ ಎಂಬುವವರು ತಲಾ ಒಂದೊಂದು ಕೋಟಿಗಣಗಳೊಡನೆ ಬಂದರು. ಸನ್ನಾಹ ಮತ್ತು ಕುಮುದನೆಂಬುವರು ತಲಾ ನೂರುಕೋಟಿ ಗಣಗಳೊಂದಿಗೂ, ಅವರಂತೆಯೇ ಅಮೋಘನೂ ಕೋಕಿಲನೂ ಪ್ರತ್ಯೇಕವಾಗಿ ನೂರು ಕೋಟಿ ಗಣಗಳೊಡನೆ, ಸುಮಂತ್ರಕನು ಕೋಟಿ ಕೋಟಿ ಗಣಗಳೊಡನೆ ಆಗಮಿಸಿದರು.

ಕಾಕಪಾದ ಮತ್ತು ಸಂತಾನಕ ತಲಾ ಅರವತ್ತು ಕೋಟಿ ಗಣಗಳೊಡನೆ, ಮಹಾಬಲ-ಮಧುಪಿಂಗ-ಪಿಂಗಲ ಪ್ರತ್ಯೇಕವಾಗಿ ಒಂಬತ್ತುಕೋಟಿ ಗಣಗಳೊಡನೆ ಬಂದರು. ಪ್ರತ್ಯೇಕವಾಗಿ ತೊಂಬತ್ತುಕೋಟಿ ಗಣಗಳೊಡನೆ ನೀಲ ಮತ್ತು ಪೂರ್ಣಭದ್ರ ಬಂದರೆ, ಏಳು ಕೋಟಿ ಗಣಗಳೊಡನೆ ಮಹಾಬಲಿಷ್ಠನಾದ ಚತುರ್ವಕ್ತ್ರ ಹಾಗೂ ಸರ್ವೇಶ್ವರ ಕೋಟಿಯಷ್ಟು ಸಂಖ್ಯೆಯುಳ್ಳ ಗಣಗಳೊಡನೆ ಬಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತ ಕ್ರಿಕೆಟ್ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರು ಬಿಜೆಪಿಯ ಸಭೆಯೊಂದರಲ್ಲಿ ಭಾಗವಹಿಸಲಿದ್ದಾರೆ ಎಂಬ ಮಾಹಿತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಇದೇ 12ರಿಂದ 15ರ ವರೆಗೆ ಬಿಜೆಪಿಯ ಯುವ ಮೋರ್ಚಾದ ಸಭೆ ಆಯೋಜನೆ ಆಗಿದೆ. ಈ ಸಭೆಯಲ್ಲಿ ದ್ರಾವಿಡ್ ಅವರು ಭಾಗಿ ಆಗಲಿದ್ದಾರೆ ಎಂದು ಬಿಜೆಪಿ ಶಾಸಕ ವಿಶಾಲ್ ನಹೆರಿಯ ಅವರು ಹೇಳಿಕೆ ನೀಡಿದ್ದರು. ಬಳಿಕ, ದ್ರಾವಿಡ್ ಅವರು ಬಿಜೆಪಿಯ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂಬ ಸುದ್ದಿಯನ್ನು ಹಲವಾರು ಮಾಧ್ಯಮಗಳು ವರದಿ ಮಾಡಿದ್ದವು.



ಈ ಸುದ್ದಿಯನ್ನು ರಾಹುಲ್ ದ್ರಾವಿಡ್ ಅವರು ಅಲ್ಲಗಳೆದಿದ್ದಾರೆ ಎಂದು ಎಎನ್‌ಐ ಸುದ್ದಿ ಸಂಸ್ಥೆ ವರದಿ ಮಾಡಿದೆ. 'ಬಿಜೆಪಿ ಆಯೋಜಿಸಿರುವ ಸಭೆಯಲ್ಲಿ ನಾನು ಪಾಲ್ಗೊಳ್ಳಲಿದ್ದೇನೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ. ಈ ವರದಿಗಳು ನಿಜವಲ್ಲ. ನಾನು ಸಭೆಯಲ್ಲಿ ಪಾಲ್ಗೊಳ್ಳುತ್ತಿಲ್ಲ' ಎಂದು ದ್ರಾವಿಡ್ ಅವರು ಎಎನ್‌ಐ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ ಎಂದು ಎಎನ್‌ಐ ಟ್ವೀಟ್ ಮಾಡಿದೆ. ಬಿಸಿಸಿಐ ಕೂಡಾ ಈ ವರದಿಯನ್ನು ಅಲ್ಲಗಳೆದಿದೆ ಎಂದು 'ಹಿಂದುಸ್ಥಾನ್ ಟೈಮ್ಸ್' ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಹಗುರದ ಬಾಳು

ಕುಸುಮಸಖನೇಂ ನೀನು? ಹಿಸುಕದೆಯೆ ಮೂಸದನು |
ಹಿಸುಕೆ ಕಟುಕಂಪು, ನರಲೋಕವದರವೊಲೇ ||
ಗಸಿಯ ಕಲಕದೆ ಕೊಳದ ಮೇಲ್ತಿಳಿಯ ಕುಡಿದು ನಡೆ |
ಹಸನು ಹಗುರದ ಬಾಳು – ಮಂಕುತಿಮ್ಮ || 626 ||

ಪದ-ಅರ್ಥ: ಕುಸುಮಸಖ = ಹೂವುಗಳನ್ನು ಪ್ರೀತಿಸುವವ, ನರಲೋಕವದರವೊಲೇ = ನರಲೋಕವು + ಅದರವೊಲೇ(ಅದರಂತೆಯೇ), ಗಸಿ = ಗಟ್ಟಿಯಾದ ಕೊಳೆ, ರಾಡಿ, ಮೇಲ್ತಿಳಿಯ = -ಮೇಲಿನ ತಿಳಿಯ.

ವಾಚ್ಯಾರ್ಥ: ಪುಷ್ಪ ಪ್ರೇಮಿಯೇ ನೀನು? ಹಾಗಾದರೆ ಹೂವನ್ನು ಹಿಸುಕದೆಯೆ ಮೂಸು. ಅದನ್ನು ಹಿಸುಕಿದರೆ ಪರಿಮಳದ ಬದಲು ಕಟುವಾದ ವಾಸನೆ ಬರುತ್ತದೆ. ಮನುಷ್ಯಲೋಕವೂ ಹಾಗೆಯೇ. ಜಗತ್ತಿನ ರಾಡಿಯನ್ನು ಕಲಕದೆ ಹಾಗೆಯೇ ಬಿಟ್ಟು ಕೊಳದ ಮೇಲಿದ್ದ ತಿಳಿನೀರನ್ನು ಕುಡಿದು ನಡೆ. ಹಗುರವಾದ ಬಾಳು ಯಾವಾಗಲೂ ಸ್ವಚ್ಛ.

ವಿವರಣೆ: ಭಗವಾನ್ ಬುದ್ಧ ತನ್ನ ಆಪ್ತಶಿಷ್ಯರೊಡನೆ ವೈಶಾಲಿಯ ಕುಶಿನಾರದ ಬಳಿಯ ಕಾಡಿನಲ್ಲಿ ನಡೆದು ಹೋಗುತ್ತಿದ್ದ. ದಾರಿಯಲ್ಲಿ ಆಯಾಸ ಕಳೆಯಲು ಒಂದು ಮರದ ಕೆಳಗೆ ಕುಳಿತ. ಆನಂದನಿಗೆ ಹೇಳಿದ, 'ಹತ್ತಿರದಲ್ಲೆಲ್ಲೋ ನೀರು ಹರಿಯುವ ಸದ್ದು ಕೇಳುತ್ತಿದೆ. ಸ್ವಲ್ಪ ಕುಡಿಯಲು ನೀರು ತರುತ್ತೀಯಾ?' ಆನಂದ ಅಲ್ಲಿಗೆ ಹೋದ. ನೀರಿನ ಹಳ್ಳವೇನೋ ಇದೆ. ಆದರೆ ಹತ್ತಾರು ಎತ್ತಿನಬಂಡಿಗಳು ಹಾಯ್ದು ಹೋದದ್ದರಿಂದ ನೀರೆಲ್ಲ ಕೊಳೆಯಾಗಿದೆ. ಬಂದು ಅದನ್ನೇ ಬುದ್ಧನಿಗೆ ಹೇಳಿದ. ಹತ್ತು ನಿಮಿಷಗಳ ನಂತರ ಬುದ್ಧ ಮತ್ತೆ ನೀರು ತರಲು ಹೇಳಿದ, ಆನಂದ ಹೋದಾಗ ಮತ್ತೆ ಅದೇ ಸ್ಥಿತಿ ಇತ್ತು. ಮರಳಿ ಬಂದ. ಅರ್ಧಗಂಟೆ ಬಿಟ್ಟು 'ಈಗ ಹೋಗಿ ನೀರು ತಾ' ಎಂದ ಬುದ್ಧ. ಈ ಬಾರಿ ಶುದ್ಧ ನೀರಿನೊಂದಿಗೆ ಬಂದ ಆನಂದ. 'ಆನಂದ, ನೀರು ಶುದ್ಧವಾಗಿಸಲು ನೀನು ಏನು ಮಾಡಿದೆ?'. 'ಭಗವಾನ್, ನಾನು ಏನೂ ಮಾಡಲಿಲ್ಲ. ರಾಡಿ ಕೆಳಗೆ ಕುಳಿತು, ಮೇಲಿನ ನೀರು ತಿಳಿಯಾಯಿತು. ನಾನು ಏನಾದರೂ ಮಾಡಲು ಹೋಗಿದ್ದರೆ ನೀರು ಕೊಳಕಾಗುತ್ತಿತ್ತು' ಎಂದ ಆನಂದ. ಬುದ್ಧ ನಕ್ಕ 'ಬದುಕೂ ಹೀಗೆಯೇ ಅಲ್ಲವೇ ಆನಂದ? ನಾವು ಎಷ್ಟು ಆಳಕ್ಕಿಳಿದು, ಅದನ್ನು ಕೆದಕುತ್ತ ಹೋಗುತ್ತೇವೆಯೋ, ಅದು ಅಷ್ಟು ಕೊಳಕಾಗುತ್ತದೆ. ಕಲಕದೆ ಬಿಟ್ಟರೆ, ರಾಡಿ ನೆಲಕ್ಕಿಳಿದು, ನೀರು ಶುದ್ಧವಾಗುವಂತೆ, ಮನಸ್ಸನ್ನು ಶಾಂತವಾಗಿಟ್ಟುಕೊಂಡು, ಬಾಳಲ್ಲಿ ಬದುಕಿದರೆ, ಅದು ಹಗುರವಾಗುತ್ತದೆ'.

ಕಗ್ಗ ಈ ಮಾತನ್ನು ಒಂದು ಸುಂದರ ಉದಾಹರಣೆಯೊಂದಿಗೆ ತಿಳಿಸುತ್ತದೆ. ಪಾರಿಜಾತದಂತಹ ಅತ್ಯಂತ ಕೋಮಲವಾದ ಹೂವಿನ ಪರಿಮಳ ಬೇಕಾದರೆ ಅದನ್ನು ಅತ್ಯಂತ ಹಗುರವಾಗಿ, ಮೃದುವಾಗಿ ಬೆರಳತುದಿಯಲ್ಲಿ ಹಿಡಿಯಬೇಕು. ಹೂವನ್ನು ಬೆರಳುಗಳಿಂದ ಒತ್ತಿದರೆ, ಬಿಗಿಯಾಗಿ ಹಿಡಿದರೆ ಅದು ಮುದ್ದೆಯಾಗುತ್ತದೆ. ಅದರ ವಾಸನೆ ಕಟುವಾಗುತ್ತದೆ. ನಮ್ಮ ಮನುಷ್ಯ ಲೋಕದ ಬದುಕೂ ಒಂದು ಹೂವಿದ್ದಂತೆ. ಅದನ್ನು ಎಷ್ಟು ಹಗುರಾಗಿ, ತಳಮಳಗೊಳ್ಳದೆ, ಗೌರವದಿಂದ ಕಾಣುತ್ತೇವೋ, ಅದರಿಂದ ಅಷ್ಟೇ ಸಂತೋಷವನ್ನು ಪಡೆಯುತ್ತೇವೆ. ಭಾವಾವೇಶದಿಂದ, ಉದ್ವಿಗ್ನರಾಗಿ ಪ್ರಪಂಚದ ಆಗುಹೋಗುಗಳಲ್ಲಿ ಪಾಲುಗೊಂಡರೆ ಅಷ್ಟೇ ಪ್ರಮಾಣದ ನೋವು, ತಲ್ಲಣಗಳನ್ನು ಅನುಭವಿಸುತ್ತೇವೆ. ಬದುಕೆಂಬ ಕೊಳದಲ್ಲಿ, ಗದ್ದಲ ಮಾಡಿ ಕೆಳಗಿದ್ದ ಕಸ ಮೇಲೆ ಬರುವಂತೆ ಮಾಡುವುದರ ಬದಲು, ಅದರ ನೀರನ್ನು ಕಲಕದೆ, ರಾಡಿ ನೆಲಕ್ಕೆ ಕುಳಿತ ಮೇಲೆ, ತಿಳಿಯಾದ ನೀರು ಮೇಲಕ್ಕೆ ಬರುತ್ತದೆ. ಅದನ್ನು ಕುಡಿದು ಆನಂದದಿಂದ ನಡೆ. ನಾವು ಎಷ್ಟು ಹಗುರವಾಗಿ, ನಿರ್ಮಲವಾಗಿ, ಶಾಂತವಾಗಿ ಬದುಕುತ್ತೇವೋ, ನಮ್ಮ ಬದುಕೂ ಅಷ್ಟೆ ಸ್ವಚ್ಛವಾಗಿ, ನಿರಾತಂಕವಾಗಿರುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 12, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಏಕಾದಶಿ ಗಂ. 18-52 ನಕ್ಷತ್ರ: ಉತ್ತರಫಲ್ಗುನಿ ಗಂ. 19-30 ಯೋಗ: ಹರ್ಷಣ ಗಂ. 17-50, ಕರಣ: ವಣಿಜ ಗಂ. 07-18, ಮೇಷ ಮಾಸದ 28 ನೇ ದಿನ.
ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-09 ಸೂರ್ಯಾಸ್ತ : 06-45 ಮುಸ್ಲಿಂ ದಿನಾಂಕ : 10 ಶವ್ವಾಲ್
ದಿನ ವಿಶೇಷ : ಮೋಹಿನಿ ಏಕಾದಶಿ, ಮೀನಾಕ್ಷಿ ಕಲ್ಯಾಣಂ
ಅದೃಷ್ಟ ಸಂಖ್ಯೆ : 5, 7

ಮೇಷ: ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಕಲೆಯನ್ನು ಕಲಿಯಬೇಕಾಗುವುದು. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಕೂಡ ಆತಂಕಕ್ಕೆ ಕಾರಣವಾಗಬೇಕಿಲ್ಲ. ಆದಾಯ ಸ್ಥಿರವಾಗಿ ಇರುವುದು.

ವೃಷಭ: ಇಂದು ನಿಮ್ಮ ಕಾರ್ಯದೊತ್ತಡದ ಜೊತೆಯಲ್ಲಿ ಮನೆಯ ವಿಚಾರಗಳತ್ತಲೂ ಗಮನಹರಿಸುವುದು ಅಗತ್ಯ. ಕಚೇರಿಯಲ್ಲಿ ಬೇಸರ ತರುವಂತಹ ಘಟನೆಗಳು ನಡೆದರೂ ಧೃತಿಗೆಡದೆ ಸಮಾಧಾನದಿಂದಿರಿ.

ಮಿಥುನ: ಪ್ರಯತ್ನಿಸಿದ ಕಾರ್ಯಗಳು ಆಪ್ತರ ಸಕಾಲಿಕ ನೆರವಿನಿಂದ ಕೈಗೂಡುವುದು. ನೂತನ ವಸ್ತುಗಳ ಖರೀದಿಗೆ ಈ ದಿನ ಸಮಯವಲ್ಲ. ಕೌಟುಂಬಿಕ ಕಲಹಗಳು ಎದುರಾಗದಂತೆ ನೋಡಿಕೊಳ್ಳಿ.

ಕರ್ಕಾಟಕ: ಸ್ನೇಹಿತನ ವಿಷಯದಲ್ಲಿ ಈ ದಿನ ಹೆಚ್ಚಿನ ಆಸಕ್ತಿ ವಹಿಸಲಿದ್ದೀರಿ. ಜವಾಬ್ದಾರಿಯಲ್ಲಿನ ಸ್ಪಷ್ಟ ವಿಷಯವೊಂದು ಮನವರಿಕೆಯಾಗುವುದು. ಹಣಕಾಸಿನ ಕೊರತೆ ಇರುವುದಿಲ್ಲ. ವೈದ್ಯರು ವೃತ್ತಿಯಲ್ಲಿ ಜಾಗ್ರತೆ ವಹಿಸಿ.

ಸಿಂಹ: ಷೇರು ಖರೀದಿ ಅಥವಾ ನಿವೇಶನಗಳಿಗೆ ಮುಂಗಡ ಪಾವತಿ ಮಾಡುವ ಮುನ್ನ ಹತ್ತು ಬಾರಿ ಆಲೋಚಿಸಿ, ನಂತರದಲ್ಲಿ ತೀರ್ಮಾನಕ್ಕೆ ಬನ್ನಿ. ರೈತಾಪಿ ವರ್ಗದವರಿಗೆ ತಮ್ಮ ವೃತ್ತಿಯಲ್ಲಿನ ಕ್ರಿಯಾಶೀಲತೆ ಶುಭದಾಯಕವಾಗುತ್ತದೆ.

ಕನ್ಯಾ: ಈ ದಿನ ಎಲ್ಲಾ ವಿಷಯದಲ್ಲೂ ಪ್ರಗತಿ ಕಾಣುವಿರಿ. ಯಾವುದೇ ಕೆಲಸಗಳಿಗೂ ಅಳುಕುವ ಪ್ರಮೇಯ ಇರುವುದಿಲ್ಲ. ಹಿರಿಯರ ಆಶೀರ್ವಾದ ಪಡೆಯುವಿರಿ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಮುಂದುವರಿಯಲಿದೆ.

ತುಲಾ: ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ಈಡೇರಲಿವೆ. ವಿದೇಶದಿಂದ ಹೆಚ್ಚಿನ ಶಿಕ್ಷಣಕ್ಕೆಂದು ತೆರಳಿದ ಮಗನ ಆಗಮನವಾಗುವುದು. ಸಾಹಿತಿ ಹಾಗೂ ಕಲಾವಿದರಿಗೆ ಉತ್ತಮ ದಿನ.

ವೃಶ್ಚಿಕ: ವಿದ್ಯಾರ್ಥಿಗಳು ತಮ್ಮ ಪರಿಶ್ರಮಕ್ಕೆ ತಕ್ಕ ಯಶಸ್ಸು ಕಾಣುವರು. ಸಂಬಂಧಿಕರೊಬ್ಬರ ಆಸ್ತಿಯನ್ನು ಕೊಳ್ಳುವ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸುವ ಕೆಲಸವು ಭಿನ್ನಾಭಿಪ್ರಾಯವನ್ನು ಮೂಡಿಸಲಿದೆ.

ಧನು: ನಿಮ್ಮಲ್ಲಿ ನೈತಿಕ ಧೈರ್ಯ ಹೆಚ್ಚುವುದು. ಸ್ವಲ್ಪ ಮಟ್ಟಿಗೆ ಧನ ವ್ಯಯವಿದ್ದರೂ ವಿವಿಧ ಹೊಸ ಮೂಲಗಳಿಂದ ಧನಾಗಮವಾಗುವುದು. ಕುಟುಂಬದಲ್ಲಿ ನೆಮ್ಮದಿ. ರಾಜಕಾರಣದ ವಿಷಯಗಳು ನಿಮಗೆ ಅನುಕೂಲಕರವಾಗಿರುವುದು.

ಮಕರ: ಇಂಧನ ಮಾರಾಟಗಾರರಿಗೆ ಇಂದು ಅನುಕೂಲ. ನಿಮ್ಮ ಸ್ಪರ್ಧಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಕೈ ಹಾಕಲು ಪ್ರೇರೇಪಿಸುವುದು. ಇನ್ನೊಬ್ಬರ ಜೀವನದಲ್ಲಿ ನಿಮ್ಮ ಪಾತ್ರ ಮಹತ್ವದ್ದು ಎಂದು ತಿಳಿದು ಸಂತಸ.

ಕುಂಭ: ವಿವಾಹ ವಯಸ್ಕ ಸಂಬಂಧಗಳು ಕೂಡಿಬರಲಿದೆ. ಕಂಪ್ಯೂಟರ್ ಎಂಜಿನಿಯರುಗಳಿಗೆ ಲಾಭದಾಯಕ ಅವಕಾಶ ಲಭ್ಯವಾಗುವುದು. ಕಟ್ಟಡ ನಿರ್ಮಾಣ ಕಾರ್ಯವು ಯಾವುದೇ ತೊಂದರೆಗಳಿಲ್ಲದೆ ಮುಂದುವರಿಯಲಿದೆ.


ಮೀನ: ಐಷಾರಾಮಿ ಖರ್ಚು ವೆಚ್ಚಗಳ ಬಗ್ಗೆ ಜಾಗ್ರತೆ ವಹಿಸುವುದು ಅನಿವಾರ್ಯ. ಬಹುಜನರ ಒಡನಾಟದಿಂದ ವಿಶ್ವಾಸ, ಪ್ರೀತಿ ಪಡೆಯುವಂತಾಗಲಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮದ ಅಗತ್ಯವಿದೆ.

ಪದಬಂಧ 4955

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅವಕಾಶ ಸಿಕ್ಕಿದ್ದಕ್ಕೇ ಇಷ್ಟು ವಿಳಂಬ! (4)
3.ಈತ ಪೂಜೆ ಮಾಡುವವನು (4)
5.ಕೈಯಲ್ಲಿರುವ ಕಚ್ಚಾಪ್ರತಿ! (3)
6.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
8.ಕೈ ಬರವಣಿಗೆಯಿದು (5)
11.ಅಗಲವಾದ ತಟ್ಟೆ (3)
12.ಸುತ ಗಳಿಸಿರುವ ಪುಣ್ಯ (3)
14.ಅವರಿಗೆ ಅನುಗುಣವಾಗಿ ಎಂದು ಹೀಗೆ ಹೇಳಿ (4)
15.ಆಲಯದ ಹತ್ತಿರವಿರುವ ಆಸ್ಪತ್ರೆ (4)

ಮೇಲಿಂದ ಕೆಳಕ್ಕೆ
1.ಮರ ನಡುವಿದ್ದರಷ್ಟೇ ಈ ಹೊಂದಾಣಿಕೆ! (4)
2.ಶತಕ ಬಾರಿಸಿದಾಗಲೇ ಯುಗಾರಂಭ! (2)
3.ಆ ಕಾಡು ನೋಡುವಾಗ ಕಾಣಿಸಿದ ಮೇಕೆ (2)
4.ಲಲಿತಕಲೆಗಳನ್ನು ಅರಿತಿರುವವನು (4)
6.ಕಿಟಕಿಯಿಂದ ಕಾಣುತ್ತಿರುವ ಗುಡಿಸಲು (3)
7.ಮನಸ್ತಾಪವಿದ್ದಾಗಲೇ ಆರಂಭಿಸಿರುವ ಮುನ್ನುಡಿ (3)
8.ತನಗೆ ತಾನೇ ಮಾತಾಡುವುದು (3)
9.ನಡುವೆ ಪತ್ರ ಬಂದಾಗಲೇ ಈ ತೊಂದರೆ! (4)
10.ಉಪಾಯದಿಂದ ಹಾಕಿರುವ ಬುನಾದಿ (4)
12.ಸುಕೃತದಿಂದ ಸಿಕ್ಕಿರುವ ಮಗ (2)
13.ತವರು ಮನೆಯಲ್ಲಿ ಬೆಳೆದ ಮರ (2)



4954ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಕ್ಕುದಾರ 3.ಸಹವಾಸ
5.ಜಾಮಿತಿ 6.ಕುರುಬ
8.ವಿನ್ಯಾಸ 9.ದಫನ್
10.ಕನಲು 11.ನಿರ್ಲಕ್ಷ್ಯ
12.ವಿದಾಯ 13.ಚಪ್ಪಡಿ
14.ಮಸೀದಿ 16.ಮಶಕ
18.ತರಬೇತಿ 19.ವಿತರಕ

ಮೇಲಿಂದ ಕೆಳಕ್ಕೆ:
1.ಹಲಾಕು 2.ರಜಾ
3.ಸತಿ 4.ಸಮಾಸ
7.ಬದಲುಮಾತು 8.ವಿಧಿನಿಯಮ
13.ಚರ್ವಿತ 15.ದಿನಾಂಕ
16.ಮತಿ 17.ಕವಿ

ಸುಡೊಕು 5341

					1	8		7
				2				
	9			7		6		4
	5		7				6	
				9			5	
2		3			4		7	
7								6
	1		2		9		4	
6		2				9	8	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5340 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

8 ವರ್ಷಗಳ ಸಂಭ್ರಮ: ಬಿಜೆಪಿ ಬೃಹತ್ ಅಭಿಯಾನ

ನವದೆಹಲಿ: ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು 8 ವರ್ಷಗಳಾಗುತ್ತಿದ್ದು, ಈ ಸಂಭ್ರಮವನ್ನು 15 ದಿನಗಳ ಅಭಿಯಾನದ ರೂಪದಲ್ಲಿ ಆಚರಿಸಲು ಬಿಜೆಪಿ ಸಿದ್ಧತೆ ನಡೆಸುತ್ತಿದೆ. ಈ ಎಂಟು ವರ್ಷಗಳ ಅವಧಿಯಲ್ಲಿ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯ ಪಡೆದುಕೊಂಡ ಮಹಿಳೆಯರು, ಮಕ್ಕಳು ಹಾಗೂ ಅಂಗವಿಕಲ ಫಲಾನುಭವಿಗಳ ಬಗ್ಗೆ ಬೆಳಕು ಚೆಲ್ಲುವಂತೆ ಪಕ್ಷದ ಹಿರಿಯ ಮುಖಂಡರಿಗೆ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೂಚಿಸಿದ್ದಾರೆ.

ಇದೇ 30ರಿಂದ ಆರಂಭವಾಗಲಿರುವ ಈ ಅಭಿಯಾನವನ್ನು ನಡ್ಡಾ ಅವರು ಉದ್ಘಾಟಿಸಲಿದ್ದು, ಬಿಜೆಪಿ ಸಾಧನೆಗಳ ಪಟ್ಟಿಯನ್ನು ಅವರು ಅಂದು ಬಿಡುಗಡೆ ಮಾಡಲಿದ್ದಾರೆ.

ಸಂಭ್ರಮಾಚರಣೆಯ ಸ್ವರೂಪ ಹೇಗಿರಬೇಕು ಎಂದು ಶಿಫಾರಸು ಮಾಡಲು 10 ಸದಸ್ಯರ ಸಮಿತಿಯನ್ನು ನಡ್ಡಾ ಕಳೆದ ತಿಂಗಳು ರಚಿಸಿದ್ದರು. ಈ ಸಮಿತಿಯು ಮೇ 5ರಂದು ವರದಿ ಸಲ್ಲಿಸಿತ್ತು.

ಸರ್ಕಾರದ ಸಾಧನೆಗಳ ಬಗ್ಗೆ ತಿಳಿಸಲು ಚಿಂತಕರ ಗುಂಪಿನೊಡನೆ ಸಭೆಗಳನ್ನು ನಡೆಸಬೇಕು. ಗರೀಬ್ ಕಲ್ಯಾಣ್, ಆತ್ಮನಿರ್ಭರ ಹಾಗೂ ಆಯುಷ್ಮಾನ್ ಭಾರತ್ ಸೇರಿದಂತೆ ಹಲವು ಯೋಜನೆಗಳನ್ನು ಮುಖ್ಯವಾಗಿ ಪ್ರಸ್ತಾಪಿಸಬೇಕು ಎಂದು ಸಂಸದರು ಹಾಗೂ ಶಾಸಕರಿಗೆ ನಡ್ಡಾ ಸೂಚಿಸಿದ್ದಾರೆ. ಜೊತೆಗೆ, ವಿವಿಧ ಸಾಮಾಜಿಕ ಸಂಘಟನೆಗಳು, ರೈತ ಸಂಘಟನೆಗಳು, ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳನ್ನು ಸಂಪರ್ಕಿಸುವಂತೆ ಅವರು ಸೂಚಿಸಿದ್ದಾರೆ. ಬೈಕ್ ಜಾಥಾ, ಸೈಕಲ್ ಜಾಥಾ ಮೊದಲಾದ ಕಾರ್ಯಕ್ರಮಗಳ ಮೂಲಕ ಸಮಾಜದ ಎಲ್ಲ ವರ್ಗಗಳನ್ನು ತಲುಪುವ ಯತ್ನ ಆಗಬೇಕು ಎಂದಿದ್ದಾರೆ.

ಮೋದಿ ಅವರ ಕೆಲಸಗಳು, ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೊಂದಿರುವ ವರ್ಚಸ್ಸು, ಕೋವಿಡ್ ನಿರ್ವಹಣೆ, 370ನೇ ವಿಧಿ ರದ್ದತಿ, ತ್ರಿವಳಿ ತಲಾಖ್ ರದ್ದತಿ ಮೊದಲಾದ ವಿಚಾರಗಳನ್ನು ಜನರಿಗೆ ತಲುಪಿಸಬೇಕು ಎಂಬ ಸೂಚನೆ ಬಂದಿದೆ ಎಂದು ಪಕ್ಷದ ಮುಖಂಡರೊಬ್ಬರು ಹೇಳಿದ್ದಾರೆ.

ಮೋದಿ ಅವರು ಅಧಿಕಾರ ವಹಿಸಿಕೊಂಡ 2014ರ ಮೇ 24ರ ಸ್ಮರಣೆಗಾಗಿ ದೇಶದಾದ್ಯಂತ ಹನುಮಾನ್ ಚಾಲೀಸಾ ಪಠಣ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಸಮಿತಿಯು ಶಿಫಾರಸು ಮಾಡಿದೆ.

ಬಿಲ್‌ಗೇಟ್ಸ್‌ಗೆ ಕೊರೊನಾ ಸೋಂಕು

ಸಿಯಾಟಲ್(ಎಪಿ): ಮೈಕ್ರೋಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

'ಕೋವಿಡ್‌ಗೆ ಒಳಾಗಾಗಿದ್ದು, ಸೌಮ್ಯ ಲಕ್ಷಣಗಳು ಕಾಣಿಸಿವೆ. ಚೇತರಿಸಿಕೊಳ್ಳುವವರೆಗೂ ಪ್ರತ್ಯೇಕ ವಾಸದಲ್ಲಿರುತ್ತೇನೆ' ಎಂದು ಅವರು ಮಂಗಳವಾರ ಟ್ವೀಟ್ ಮಾಡಿದ್ದಾರೆ.

ಐಪಿಸಿ ಸೆಕ್ಷನ್ 375ರ 2ನೇ ವಿನಾಯಿತಿ ಪ್ರಶ್ನಿಸಿ ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ

ವೈವಾಹಿಕ ಅತ್ಯಾಚಾರ: ಭಿನ್ನ ತೀರ್ಪು

ಪ್ರಜಾವಾಣಿ ವಾರ್ತೆ

ನವದೆಹಲಿ: ಹೆಂಡತಿಯ ಒಪ್ಪಿಗೆ ಇಲ್ಲದೆ ಗಂಡನು ಬಲವಂತದಿಂದ ನಡೆಸುವ ಲೈಂಗಿಕ ಸಂಪರ್ಕವನ್ನು ಅತ್ಯಾಚಾರ ಎಂದು ಪರಿಗಣಿಸುವ ಕುರಿತಂತೆ ದೆಹಲಿ ಹೈಕೋರ್ಟ್‌ನ ಪೀಠವು ಬುಧವಾರ ಭಿನ್ನಮತದ ತೀರ್ಪು ನೀಡಿದೆ. ವಾದಿ–ಪ್ರತಿವಾದಿಗಳಿಗೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಿದೆ.

ಐಪಿಸಿ ಸೆಕ್ಷನ್ 375ರ 2ನೇ ವಿನಾಯಿತಿಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಪೀಠದ ನ್ಯಾಯಮೂರ್ತಿಗಳು ಬೇರೆ ಬೇರೆ ತೀರ್ಪುಗಳನ್ನು ನೀಡಿದ್ದಾರೆ. ಈ ತೀರ್ಪಿನ ಮೂಲಕ, ಸಂಗಾತಿಯ ಹಿಂಸೆ ಹಾಗೂ ಅದರಿಂದ ಉಂಟಾಗುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಕೌಟುಂಬಿಕ ಸಂಬಂಧದ ಮೇಲಿನ ಪರಿಣಾಮಗಳಂತಹ ಕಠಿಣ ಪ್ರಶ್ನೆಗಳನ್ನು ಸುಪ್ರೀಂ ಕೋರ್ಟ್ ಅಂಗಳಕ್ಕೆ ಹೈಕೋರ್ಟ್ ವರ್ಗಾಯಿಸಿತು.

> **ತೀರ್ಪು ನಿರಾಶಾದಾಯಕ. ಈ ವಿನಾಯಿತಿ ಒಂದು ವರ್ಗದ ಅತ್ಯಾಚಾರ ಸಂತ್ರಸ್ತೆಯರಿಗೆ ತಾರತಮ್ಯ ಮಾಡುತ್ತಿದೆ. ಈ ಕಾನೂನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ದಿಟ್ಟತನ ತೋರುವ ವಿಶ್ವಾಸವಿದೆ**
> **ಕವಿತಾ ಕೃಷ್ಣನ್,** ಎಐಪಿಡಬ್ಲ್ಯುಎ ಸದಸ್ಯೆ

> **ಕೌಟುಂಬಿಕ ಹಿಂಸೆಯನ್ನು ಅಪರಾಧ ಎಂದು ಪರಿಗಣಿಸುವುದಾದರೆ, ಪತ್ನಿಯ ಜೊತೆ ಗಂಡ ನಡೆಸುವ ಬಲವಂತದ ಲೈಂಗಿಕ ಕ್ರಿಯೆಯು ಅಪರಾಧ ಹೇಗಾಗುವುದಿಲ್ಲ**
> **ವಾಣಿ ಸುಬ್ರಮಣಿಯನ್,** ಸಹೇಲಿ ಟ್ರಸ್ಟ್ ಗುಂಪಿನ ಸದಸ್ಯೆ

ಗಂಡನು ಬಲವಂತದಿಂದ ನಡೆಸುವ ಲೈಂಗಿಕ ಸಂಪರ್ಕವನ್ನು ಅತ್ಯಾಚಾರ ಎಂದು ನಿರ್ಣಯಿಸುವುಕ್ಕೆ ಇರುವ ತೊಡಕನ್ನು ತೆಗೆದು ಹಾಕಲು ನ್ಯಾಯಮೂರ್ತಿ ರಾಜೀವ್ ಶಕ್‌ಧರ್ ಅವರು ಒಲವು ವ್ಯಕ್ತಪಡಿಸಿದರು. ಆದರೆ ಪೀಠದಲ್ಲಿದ್ದ ಮತ್ತೊಬ್ಬ ನ್ಯಾಯಮೂರ್ತಿ ಸಿ. ಹರಿಶಂಕರ್ ಅವರು, ಗಂಡನ ಬಲವಂತದ ಲೈಂಗಿಕತೆಯನ್ನು ಅತ್ಯಾಚಾರ ಎನ್ನಲು ಭಾರತೀಯ ದಂಡ ಸಂಹಿತೆಯಲ್ಲಿ ಅವಕಾಶವಿಲ್ಲ ಎಂದು ಹೇಳಿದರು. ಗಂಡನು ನಡೆಸುವ ಬಲವಂತದ ಲೈಂಗಿಕತೆಯು ಅತ್ಯಾಚಾರವಲ್ಲ ಎಂಬ ವಿನಾಯಿತಿಯು ಸಂವಿಧಾನಬಾಹಿರ ಅಲ್ಲ ಎಂದರು.

ಐಪಿಸಿ ಸೆಕ್ಷನ್ 375 (ಅತ್ಯಾಚಾರ) ಅಡಿಯಲ್ಲಿ, ಒತ್ತಾಯದ ಲೈಂಗಿಕ ಸಂಪರ್ಕಕ್ಕೆ ಇರುವ ವಿನಾಯಿತಿಯ ಸಾಂವಿಧಾನಿಕ ಸಿಂಧುತ್ವವನ್ನು ಅರ್ಜಿದಾರರು ಪ್ರಶ್ನಿಸಿದ್ದರು. ಈ ವಿನಾಯಿತಿಯು ಗಂಡನಿಂದ ಲೈಂಗಿಕ ಹಿಂಸೆ ಎದುರಿಸುತ್ತಿರುವ ವಿವಾಹಿತ ಮಹಿಳೆಯರ ವಿರುದ್ಧವಾಗಿದ್ದು, ತಾರತಮ್ಯದಿಂದ ಕೂಡಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದ್ದರು.

ಗಂಡನು ತನ್ನ ಪ್ರಾಪ್ತ ವಯಸ್ಸಿನ ಪತ್ನಿಯ ಜೊತೆ ನಡೆಸುವ ಲೈಂಗಿಕ ಸಂಪರ್ಕವು ಅತ್ಯಾಚಾರ ಎನಿಸಿಕೊಳ್ಳುವುದಿಲ್ಲ ಎಂಬ ಅಂಶವು 375ನೇ ಸೆಕ್ಷನ್ ಅಡಿ ನೀಡಿರುವ ಈ ವಿನಾಯಿತಿಯಲ್ಲಿದೆ. ಬಲವಂತದ ಲೈಂಗಿಕ ಸಂಪರ್ಕವು ಅತ್ಯಾಚಾರ ಎಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದ ಮರುದಿನ ದೆಹಲಿ ಹೈಕೋರ್ಟ್ ಈ ವಿಚಾರದಲ್ಲಿ ಭಿನ್ನಮತದ ನಿಲುವು ತಳೆದಿದೆ.

'ನನ್ನ ಪ್ರಕಾರ, ಆಕ್ಷೇಪಾರ್ಹ ವಿನಾಯಿತಿಗಳು (ಸೆಕ್ಷನ್ 375, ಸೆಕ್ಷನ್ 376 ಇ) ಸಂವಿಧಾನದ 14, 15, 19(1) (ಎ) ಹಾಗೂ 21ನೇ ವಿಧಿಯ ಉಲ್ಲಂಘನೆಯಾಗುತ್ತದೆ. ಹೀಗಾಗಿ ವಿನಾಯಿತಿಗಳನ್ನು ತೆಗೆದುಹಾಕಬೇಕು' ಎಂದು ನ್ಯಾಯಮೂರ್ತಿ ಶಕ್‌ಧರ್ ಹೇಳಿದರು. ಈ ಮಾತಿಗೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಹರಿಶಂಕರ್, 'ಶಕ್‌ಧರ್ ಅವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಈ ವಿನಾಯಿತಿಗಳು ಸಂವಿಧಾನದ 14, 15, 19(1) (ಎ) ಹಾಗೂ 21ನೇ ವಿಧಿಗಳ ಉಲ್ಲಂಘನೆ ಆಗುವುದಿಲ್ಲ' ಎಂದು ಹೇಳಿದರು.

ಈ ವಿಷಯ ಕುರಿತಂತೆ ಸಮಾಲೋಚನೆ ನಡೆಸಿ ನಿಲುವು ತಿಳಿಸಲು ಇನ್ನಷ್ಟು ಸಮಯವನ್ನು ನೀಡುವಂತೆ ಕೇಂದ್ರ ಸರ್ಕಾರವು ಇದೇ ಫೆಬ್ರುವರಿಯಲ್ಲಿ ಕೋರ್ಟ್‌ಗೆ ಮನವಿ ಮಾಡಿತ್ತು. ಹೈಕೋರ್ಟ್‌ನ ಈ ತೀರ್ಪಿಗೆ ಸ್ತ್ರೀವಾದಿ ಹೋರಾಟಗಾರರು ನಿರಾಸೆ ವ್ಯಕ್ತಪಡಿಸಿದ್ದಾರೆ.

ದೇಶದ್ರೋಹ ಕಾನೂನಿಗೆ 'ಸುಪ್ರೀಂ' ತಡೆ

ಒಂದನೇ ಪುಟದಿಂದ...

ದೇಶದ್ರೋಹ ಕಾನೂನನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಜುಲೈ 3ನೇ ವಾರಕ್ಕೆ ಮುಂದೂಡಲಾಗಿದೆ. ಈಗ ನೀಡಿರುವ ನಿರ್ದೇಶನಗಳು ಮುಂದಿನ ಆದೇಶದವರೆಗೆ ಜಾರಿ ಇರಲಿವೆ ಎಂದು ಪೀಠ ತಿಳಿಸಿದೆ.

ಈ ಸೆಕ್ಷನ್‌ನಿಂದ ಬಾಧಿತರಾದವರು ಸಂಬಂಧಪಟ್ಟ ನ್ಯಾಯಾಲಯಗಳನ್ನು ಸಂಪರ್ಕಿಸಬಹುದು. ಇಂತಹ ಅರ್ಜಿ ವಿಚಾರಣೆಯ ಸಂದರ್ಭದಲ್ಲಿ ಆ ನ್ಯಾಯಾಲಯಗಳು ಸುಪ್ರೀಂಕೋರ್ಟ್‌ನ ಈಗಿನ ಆದೇಶವನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಪೀಠವು ಹೇಳಿದೆ.

'ಸೆಕ್ಷನ್ 124ಎಯ ಮರುಪರಿಶೀಲನೆ ಪೂರ್ಣಗೊಳ್ಳುವವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಸೆಕ್ಷನ್ ಅಡಿಯಲ್ಲಿ ಎಫ್‌ಐಆರ್ ದಾಖಲಿಸುವುದಿಲ್ಲ, ತನಿಖೆ ಮುಂದುವರಿಸುವುದಿಲ್ಲ ಮತ್ತು ಬಲವಂತದ ಕ್ರಮಗಳನ್ನು ಕೈಗೊಳ್ಳುವುದಿಲ್ಲ ಎಂಬ ಭರವಸೆ ಮತ್ತು ನಿರೀಕ್ಷೆ ನಮ್ಮದು' ಎಂದು ಪೀಠವು ಹೇಳಿದೆ.

'ಹನುಮಾನ್ ಚಾಲೀಸಾ ಪಠಿಸಿದವರ ಮೇಲೆಯೂ ದೇಶದ್ರೋಹದ ಪ್ರಕರಣ ದಾಖಲಿಸಲಾಗಿದೆ ಎಂಬಂತಹ ಸೆಕ್ಷನ್‌ನ ದುರ್ಬಳಕೆಯ ಕಣ್ಣಿಗೆ ರಾಚುವ ಉದಾಹರಣೆಗಳನ್ನು ಹಿಂದಿನ ವಿಚಾರಣೆ ಸಂದರ್ಭಗಳಲ್ಲಿ ಅಟಾರ್ನಿ ಜನರಲ್ ನೀಡಿದ್ದಾರೆ. ಆದುದರಿಂದ, ಸೆಕ್ಷನ್‌ನ ಮರುಪರಿಶೀಲನೆ ಆಗುವ ತನಕ ಈ ಸೆಕ್ಷನ್‌ನ ಅವಕಾಶಗಳನ್ನು ಸರ್ಕಾರಗಳು ಬಳಸಿಕೊಳ್ಳದಿರುವುದೇ ಸೂಕ್ತ ಎಂಬುದು ನಮ್ಮ ಭಾವನೆ' ಎಂದು ಆದೇಶದಲ್ಲಿ ಹೇಳಲಾಗಿದೆ.

ಸಂಪಾದಕರ ಕೂಟ ಸ್ವಾಗತ (ನವದೆಹಲಿ): ದೇಶದ್ರೋಹ ಕಾನೂನಿಗೆ ತಡೆ ನೀಡುವ ಸುಪ್ರೀಂ ಕೋರ್ಟ್ ನಿರ್ಧಾರವನ್ನು ಭಾರತದ ಸಂಪಾದಕರ ಕೂಟ ಸ್ವಾಗತಿಸಿದೆ.

ಸ್ವತಂತ್ರ ಪತ್ರಿಕೋದ್ಯಮವನ್ನು ಹತ್ತಿಕ್ಕಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪತ್ರಕರ್ತರ ಮೇಲೂ ಈ ಕಾನೂನನ್ನು ಹಲವು ಬಾರಿ ಬಳಸಿಕೊಂಡಿದ್ದವು ಎಂದು ಸಂಪಾದಕರ ಕೂಟ ಹೇಳಿದೆ.

ದೇಶದ್ರೋಹ ಕಾನೂನನ್ನು ವಿರೋಧಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ಪೈಕಿ ಸಂಪಾದಕರ ಕೂಟ ಸಲ್ಲಿಸಿದ್ದ ಅರ್ಜಿಯೂ ಇದೆ. ಕೇಂದ್ರ ಸರ್ಕಾರವು ಮರುಪರಿಶೀಲಿಸುವವರೆಗೆ ಕಾನೂನಿಗೆ ತಡೆ ನೀಡುವ ಸುಪ್ರೀಂ ಕೋರ್ಟ್ ನಿರ್ಧಾರದಿಂದ ಸಂತಸವಾಗಿದೆ ಎಂದು ಕೂಟ ತಿಳಿಸಿದೆ.

> **'ಮಾರ್ಪಾಡು ಆಗಲೇಬೇಕು'**
>
> ಈ ಪ್ರಕರಣ ಸದ್ಯ ಸುಪ್ರೀಂ ಕೋರ್ಟ್ ಅಂಗಳದಲ್ಲಿ ವಿಚಾರಣೆಯ ಹಂತದಲ್ಲಿದೆ. ಆದಾಗ್ಯೂ, ಐಪಿಸಿ ಕಲಂ 124 (ಎ) ಅನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಇದು ಬ್ರಿಟಿಷರ ಕಾಲದಿಂದಲೂ ಚಾಲ್ತಿಯಲ್ಲಿರುವ ಕಾನೂನು. ಸದ್ಯದ ಸನ್ನಿವೇಶದಲ್ಲಿ ಇದು ಮಾರ್ಪಾಡು ಆಗಲೇಬೇಕು. ಸಂಸತ್ತಿನ ಮುಂದಿನ ಅಧಿವೇಶನ ಈ ದಿಕ್ಕಿನಲ್ಲಿ ಮುಂದಡಿ ಇಡಬಹುದು ಎಂದು ನಾನು ಆಶಿಸುತ್ತೇನೆ. ವಾಸ್ತವದಲ್ಲಿ ಇಂತಹ ಕಾನೂನುಗಳು ದೇಶದ ಭದ್ರತೆ ಮತ್ತು ಆಂತರಿಕ ತೊಂದರೆ ಇದ್ದಾಗ ಮಾತ್ರವೇ ಅನ್ವಯ ಆಗತಕ್ಕದ್ದು. ಅದು ಬಿಟ್ಟು ರಾಜಕೀಯ ದ್ವೇಷಕ್ಕೆ ಅಥವಾ ಸಮಾಜದ ಉದ್ಧಾರಕ್ಕಾಗಿ ಆಡಿದ ಮಾತನ್ನು ಗುರಿಯಾಗಿಸಿ ಅವರನ್ನು ಸೆದೆಬಡಿಯಲು ಬಳಸಿದರೆ ತಪ್ಪು.
>
> **ಎ.ಎನ್.ವೇಣುಗೋಪಾಲ ಗೌಡ,** ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಅಸನಿ: ಆಂಧ್ರದಲ್ಲಿ ಭಾರಿ ಮಳೆ

ಹೈದರಾಬಾದ್/ ಭುವನೇಶ್ವರ/ ಕೋಲ್ಕತ್ತ: ದುರ್ಬಲಗೊಂಡಿರುವ ಆಸನಿ ಚಂಡಮಾರುತವು ಬುಧವಾರ ಸಂಜೆ ಆಂಧ್ರಪ್ರದೇಶದ ಮಚಲಿಪಟ್ಟಣ ಮತ್ತು ನರಸಾಪುರ ನಡುವೆ ಕರಾವಳಿಯನ್ನು ದಾಟಿದ್ದು, ಗುರುವಾರ ಬೆಳಿಗ್ಗೆ ಮತ್ತಷ್ಟು ದುರ್ಬಲಗೊಳ್ಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಚಂಡಮಾರುತದ ಪರಿಣಾಮ ಆಂಧ್ರಪ್ರದೇಶದ ಕರಾವಳಿಯ ಹಲವು ಭಾಗಗಳಲ್ಲಿ ಭಾರೀ ಮಳೆಯಾಗಿದೆ. ಮಚಲಿಪಟ್ಟಣ– ನರಸಾಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗಂಟೆಗೆ 55-65 ಕಿ.ಮೀ ವೇಗದಲ್ಲಿ ಬೀಸಿದ ಗಾಳಿ ಕ್ರಮೇಣ 75 ಕಿ.ಮೀ ವೇಗ ಪಡೆದುಕೊಂಡಿತು. ಒಡಿಶಾ, ಪಶ್ಚಿಮ ಬಂಗಾಳ ರಾಜ್ಯಗಳ ಕರಾವಳಿ ಜಿಲ್ಲೆಗಳಲ್ಲೂ ಬುಧವಾರ ಭಾರಿ ಮಳೆಯಾಗಿದೆ.

ಆಂಧ್ರ ಪ್ರದೇಶದ ಕಾಕಿನಾಡ, ತುನಿ ಮತ್ತು ವಿಶಾಖಪಟ್ಟಣಂ, ಒಡಿಶಾದ ಮಲ್ಕಾನ್‌ಗಿರಿ, ಕೊರಾಪುಟ್, ರಾಯಗಡ, ಗಂಜಾಂ, ಗಜಪತಿ, ಪುರಿ, ಕಟಕ್ ಮತ್ತು ಭುವನೇಶ್ವರದಲ್ಲಿ ಮಳೆಯಾಗಿದೆ.

> **ತೇಲಿ ಬಂದ ರಥ**
>
> ಆಂಧ್ರಪ್ರದೇಶದ ಶ್ರೀಕಾಕುಳಂನ ಸಂತಬೊಮ್ಮಲಿ ಬಳಿಯ ಕರಾವಳಿ ತೀರಕ್ಕೆ ಬುಧವಾರ ಬೆಳಿಗ್ಗೆ ಚಿನ್ನ ಬಣ್ಣದ ಲೇಪಿತ ರಥವೊಂದು ತೇಲಿ ಬಂದಿದೆ. ತೇಲುವ ಪೂಜಾ ಮಂದಿರದಂತೆ ಕಾಣುವ ರಥದ ಮೇಲಿರುವ ಅಕ್ಷರಗಳನ್ನು ಗಮನಿಸಿದರೆ ಇದು ಮ್ಯಾನ್ಮಾರ್ ಮೂಲದ್ದಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ರಥದ ಮೇಲೆ 16-01-2022 ಎಂದು ದಿನಾಂಕವನ್ನು ಕೆತ್ತಲಾಗಿದೆ. ಅಲೆಯೊಂದಿಗೆ ತೇಲಿ ಬರುತ್ತಿದ್ದ ರಥವನ್ನು ಸ್ಥಳೀಯರು ಎಳೆದು ದಡಕ್ಕೆ ತಂದಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.



ಸುಧಾ ಮೂರ್ತಿ ಆಶೀರ್ವಾದ

ನವದೆಹಲಿಯಲ್ಲಿ ಬುಧವಾರ ನಡೆದ 'ಮೋದಿ@20:ಡ್ರೀಮ್ಸ್ ಮೀಟ್ ಡೆಲಿವರಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಬಾಕ್ಸರ್ ಮೇರಿ ಕೋಮ್ ಅವರನ್ನು ಲೇಖಕಿ ಸುಧಾ ಮೂರ್ತಿ ಆಶೀರ್ವದಿಸಿದರು –ಪಿಟಿಐ ಚಿತ್ರ


ಇಸ್ರೇಲ್: ಗುಂಡೇಟಿಗೆ ಪತ್ರಕರ್ತೆ ಸಾವು

ಜೆರುಸಲೇಂ (ಎಪಿ): ಆಕ್ರಮಿತ ವೆಸ್ಟ್‌ಬ್ಯಾಂಕ್ ಪಟ್ಟಣದಲ್ಲಿ ಇಸ್ರೇಲ್ ಪಡೆಗಳು ನಡೆಸಿದ ದಾಳಿ ವೇಳೆ ಅಲ್‌ಜಜೀರಾ ವಾಹಿನಿಯಲ್ಲಿ ಹಿರಿಯ ವರದಿಗಾರ್ತಿಯಾಗಿದ್ದ ಪ್ಯಾಲೆಸ್ಟೀನ್‌ನ ಪತ್ರಕರ್ತೆ ಶಿರೀನ್ ಅಬು ಆಕ್ಲೆಹ್ ಅವರು ಗುಂಡೇಟಿನಿಂದ ಮೃತಪಟ್ಟಿದ್ದು, ಮತ್ತೊಬ್ಬ ವರದಿಗಾರ ಗಾಯಗೊಂಡಿದ್ದಾರೆ.

ಪ್ಯಾಲೆಸ್ಟೀನ್‌ನ ವೆಸ್ಟ್ ಬ್ಯಾಂಕ್‌ನಲ್ಲಿ ನಿರಾಶ್ರಿತರ ಕುರಿತು ವರದಿ ಮಾಡಲು ತೆರಳಿದ್ದಾಗ ಈ ಘಟನೆ ನಡೆದಿದೆ.

ನಿಧನ ವಾರ್ತೆ

ಕಾಂಗ್ರೆಸ್ ನಾಯಕ ಸುಖ್‌ರಾಮ್



ಶಿಮ್ಲಾ/ನವದೆಹಲಿ: ಹಿಮಾಚಲ ಪ್ರದೇಶದ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಕೇಂದ್ರದ ಮಾಜಿ ಸಚಿವ ಸುಖ್‌ರಾಮ್ (94) ಅವರು ಬುಧವಾರ ದೆಹಲಿಯ ಆಸ್ಪತ್ರೆಯಲ್ಲಿ ನಿಧನರಾದರು.

ಮನಾಲಿಯಲ್ಲಿ ಮಿದುಳು ಪಾರ್ಶ್ವವಾಯುವಿಗೆ ತುತ್ತಾಗಿದ್ದ ಅವರನ್ನು ಮೇ 7ರಂದು ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ಗೆ ಏರ್‌ಲಿಫ್ಟ್ ಮೂಲಕ ದಾಖಲಾಗಿಸಲಾಗಿತ್ತು. ಬುಧವಾರ ಮುಂಜಾನೆ 1.35ರ ವೇಳೆಗೆ ಸುಖ್‌ರಾಮ್ ನಿಧನರಾದರು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಸುಖ್‌ರಾಮ್ ಅವರು 1993ರಿಂದ 1996ರವರೆಗೆ ದೂರಸಂಪರ್ಕ ಖಾತೆಯ (ಸ್ವತಂತ್ರ ಉಸ್ತುವಾರಿ) ಕೇಂದ್ರ ಸಚಿವರಾಗಿದ್ದರು. ಅವರು ಮಂಡಿ ಕ್ಷೇತ್ರದಿಂದ ಲೋಕಸಭೆಯ ಸದಸ್ಯರಾಗಿದ್ದರು. ದೂರಸಂಪರ್ಕ ಖಾತೆ ಸಚಿವರಾಗಿದ್ದ ಅವಧಿಯಲ್ಲಿ ನಡೆದ ಭ್ರಷ್ಟಾಚಾರಕ್ಕಾಗಿ ಸುಖ್‌ರಾಮ್ ಅವರಿಗೆ 2011ರಲ್ಲಿ ಐದು ವರ್ಷಗಳ ಜೈಲುಶಿಕ್ಷೆ ವಿಧಿಸಲಾಗಿತ್ತು.

ನಾಳೆಯಿಂದ ಕಾಂಗ್ರೆಸ್ ಚಿಂತನ ಶಿಬಿರ

ನವದೆಹಲಿ: ಉದಯಪುರದಲ್ಲಿ ಶುಕ್ರವಾರದಿಂದ ಮೂರು ದಿನಗಳ ಕಾಲ ನಡೆಯಲಿರುವ ಕಾಂಗ್ರೆಸ್‌ನ ಚಿಂತನ ಶಿಬಿರವು ಈ ಹಿಂದೆ ನಡೆದ ಶಿಬಿರಗಳಿಗಿಂತ ಭಿನ್ನವಾಗಿರಲಿದೆ. 2024ರ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು, ಕ್ರಿಯಾತ್ಮಕ ನಿರ್ಧಾರಗಳನ್ನು ಕಾರ್ಯಗತಗೊಳಿಸುವ ಮೂಲಕ ಸಂಘಟನೆಯನ್ನು ಪುನರುಜ್ಜೀವನಗೊಳಿಸುವ ಗುರಿ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಶಿಬಿರದಲ್ಲಿ ತೆಗೆದುಕೊಳ್ಳುವ ನಿರ್ಣಯಗಳನ್ನು ಕೇವಲ ತಾತ್ವಿಕವಾಗಿ ಘೋಷಣೆ ಮಾಡುವುದಕ್ಕೆ ಆದ್ಯತೆ ನೀಡದೆ, ಅವುಗಳನ್ನು ಕಾರ್ಯ ರೂಪಕ್ಕೆ ತರುವ ಮೂಲಕ ಪಕ್ಷದ ವಿವಿಧ ಕೇಡರ್‌ಗಳಿಗೆ ಸ್ಪಷ್ಟ ಸಂದೇಶ ನೀಡಲಾಗುತ್ತದೆ. 2024ರ ಚುನಾವಣೆಗೆ ಯಾವ ರೀತಿಯಲ್ಲಿ ಸಜ್ಜಾಗಬೇಕು ಹಾಗೂ ಕ್ರಮಗಳ ಬಗ್ಗೆ ಚರ್ಚಿಸುವುದು ಪ್ರಮುಖ ಅಂಶವಾಗಿದೆ ಎಂದೂ ಮೂಲಗಳು ತಿಳಿಸಿವೆ.

'2003ರ ಸಮಾವೇಶದ ಸಮಯದಲ್ಲಿ, ಕಾಂಗ್ರೆಸ್ ಪ್ರತಿಪಕ್ಷದಲ್ಲಿದ್ದರೂ ಹನ್ನೆರಡು ಮುಖ್ಯಮಂತ್ರಿಗಳನ್ನು ಹೊಂದಿತ್ತು. ಈಗ ಉದಯಪುರ ಸಮಾವೇಶದ ಸಮಯದಲ್ಲಿ ಕೇವಲ ಎರಡು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಹೀಗಾಗಿ ಈ ಶಿಬಿರವು ಹಿಂದಿನ ರೀತಿಯ ಸಮಾವೇಶಗಳಿಗಿಂತ ಭಿನ್ನವಾಗಿರಲಿದೆ' ಎಂದು ಮೂಲಗಳು ತಿಳಿಸಿವೆ.

'ಮೈತ್ರಿಯ ಬಗ್ಗೆ ಯಾವುದೇ ನಿರ್ಧಾರವನ್ನು ನಿರೀಕ್ಷಿಸದಿದ್ದರೂ, ಕಾಂಗ್ರೆಸ್ ದುರ್ಬಲವಾಗಿದ್ದರೆ, ಪರಿಣಾಮಕಾರಿ ಮೈತ್ರಿ ಸಾಧ್ಯವಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸುವ ಸಾಧ್ಯತೆಯಿದೆ. ಕಾಂಗ್ರೆಸ್ ಬಲಿಷ್ಠವಾಗಿದ್ದರೆ ಮೈತ್ರಿಯೂ ಪರಿಣಾಮಕಾರಿಯಾಗಲಿದೆ. ನಾವು ಬದಲಾಗದಿದ್ದರೆ ಕಾಂಗ್ರೆಸ್ ಮಾತ್ರವಲ್ಲ ಇಡೀ ಮೈತ್ರಿಕೂಟವೇ ಸಂಕಷ್ಟಕ್ಕೆ ಸಿಲುಕಲಿದೆ' ಎಂದು ಮೂಲಗಳು ತಿಳಿಸಿವೆ.

ಪಕ್ಷದ ಮುಖಂಡ ದಿಗ್ವಿಜಯ ಸಿಂಗ್ ನೇತೃತ್ವದ ಸಮಿತಿಯು ಸಿದ್ಧಪಡಿಸಿದ ಮುಂದಿನ ಎರಡು ವರ್ಷಗಳ ಹೋರಾಟ ಮತ್ತು ಪಕ್ಷವನ್ನು ಬಲಪಡಿಸುವ ಮಾರ್ಗಸೂಚಿಯ ಮೇಲೆ ಶಿಬಿರದಲ್ಲಿ ಚರ್ಚೆಗಳು ನಡೆಯಲಿವೆ.

ಸಂಕ್ಷಿಪ್ತ ಸುದ್ದಿ

ಎಲ್‌ಡಿಫ್ ಅಭ್ಯರ್ಥಿ ಪರ ಥಾಮಸ್ ಪ್ರಚಾರ

ಕೊಚ್ಚಿ (ಪಿಟಿಐ): ತ್ರಿಕ್ಕಾಕರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎಲ್‌ಡಿಎಫ್ ಅಭ್ಯರ್ಥಿ ಜೋ ಜೋಸೆಫ್ ಪರ ಪ್ರಚಾರ ಮಾಡುವುದಾಗಿ ಕಾಂಗ್ರೆಸ್‌ನ ಹಿರಿಯ ನಾಯಕ ಕೆ.ವಿ. ಥಾಮಸ್ ಹೇಳಿದ್ದಾರೆ.

ಕಾಂಗ್ರೆಸ್‌ನ ರಾಜ್ಯ ಘಟಕದ ನಾಯಕತ್ವದೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವ ಥಾಮಸ್, ಎಲ್‌ಡಿಎಫ್ ಅಭ್ಯರ್ಥಿ ಪರ ಪ್ರಚಾರ ಮಾಡಿದರೂ ಕಾಂಗ್ರೆಸ್ ಪಕ್ಷವನ್ನು ತೊರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಯುವಕನ ಹತ್ಯೆ, ಪರಿಸ್ಥಿತಿ ಉದ್ವಿಗ್ನ

ಜೈಪುರ (ಪಿಟಿಐ): ರಾಜಸ್ಥಾನದ ಭಿಲ್ವಾರ ನಗರದಲ್ಲಿ ಅಲ್ಪಸಂಖ್ಯಾತ ಸಮುದಾಯದ ಇಬ್ಬರು ವ್ಯಕ್ತಿಗಳು, 22 ವರ್ಷದ ಯುವಕನನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದು, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ನಗರದಲ್ಲಿ ಮೊಬೈಲ್ ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಿದ್ದಾರೆ.

ಮಂಗಳವಾರ ರಾತ್ರಿ ಘಟನೆ ನಡೆದಿದ್ದು, ಹತ್ಯೆ ಖಂಡಿಸಿ ಬಲಪಂಥೀಯ ಸಂಘಟನೆಗಳು ಸ್ಥಳೀಯ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಬಂದ್ ಮಾಡುವಂತೆ ಕರೆ ನೀಡಿವೆ.

'ಭಿಲ್ವಾರದ ಶಾಸ್ತ್ರಿನಗರದ ನಿವಾಸಿ ಆದರ್ಶ್ ತಪ್ಡಿಯಾ ಅವರ ಮೇಲೆ ಅಲ್ಪಸಂಖ್ಯಾತ ಸಮುದಾಯದ ಇಬ್ಬರು ವ್ಯಕ್ತಿಗಳು ಹಲ್ಲೆ ನಡೆಸಿ, ಹತ್ಯೆ ಮಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಐಎಎಸ್ ಅಧಿಕಾರಿ ಬಂಧನ

ರಾಂಚಿ (ಪಿಟಿಐ): ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣ ಸಂಬಂಧ ಜಾರ್ಖಂಡ್‌ನ ಗಣಿ ಇಲಾಖೆ ಕಾರ್ಯದರ್ಶಿ ಪೂಜಾ ಸಿಂಘಾಲ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಬಂಧಿಸಿದೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗಾ) ಅನುದಾನ ದುರುಪಯೋಗ ಮತ್ತಿತರ ಪ್ರಕರಣ ಸಂಬಂಧ ಸತತ ಎರಡು ದಿನ ವಿಚಾರಣೆ ನಡೆಸಿದ ಬಳಿಕ ಅವರನ್ನು ಬಂಧಿಸಲಾಗಿದೆ.

ಆಜಂ ಖಾನ್ ಜಾಮೀನು ಅರ್ಜಿ: ಉತ್ತರಿಸಲು ಸೂಚನೆ

ನವದೆಹಲಿ (ಪಿಟಿಐ): ಭೂಕಬಳಿಕೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಸಮಾಜವಾದಿ ಪಕ್ಷದ ನಾಯಕ ಆಜಂ ಖಾನ್ ಅವರ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ತನ್ನ ನಿಲುವು ತಿಳಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ಬಿ.ಆರ್. ಗವಾಯಿ ಹಾಗೂ ಎ.ಎಸ್. ಬೋಪಣ್ಣ ಅವರನ್ನೊಳಗೊಂಡ ತ್ರಿಸದಸ್ಯ ಪೀಠ ಈ ನಿರ್ದೇಶನ ನೀಡಿದ್ದು, ಮಂಗಳವಾರ ವಿಚಾರಣೆ ನಡೆಸುವುದಾಗಿ ತಿಳಿಸಿದೆ.

'ಆಜಂ ಖಾನ್ ಅವರು ಎರಡು ವರ್ಷಗಳಿಂದ ಕಾರಾಗೃಹದಲ್ಲೇ ಇದ್ದಾರೆ. ಅವರನ್ನು ಯಾಕೆ ಬಿಡುತ್ತಿಲ್ಲ, ಒಂದು ಅಥವಾ ಎರಡು ಪ್ರಕರಣಗಳಾದರೆ ಸರಿ. ಅವರ ವಿರುದ್ಧ 89 ಪ್ರಕರಣಗಳಿವೆ. ಹೀಗೆ ಆಗಲು ಸಾಧ್ಯವಿಲ್ಲ. ಅವರಿಗೆ ಜಾಮೀನು ದೊರೆತರೂ, ಬೇರೆ ಯಾವುದಾದರೊಂದು ಪ್ರಕರಣದಲ್ಲಿ ಕಾರಾಗೃಹಕ್ಕೆ ಕಳಿಸಲಾಗುತ್ತದೆ. ಸರ್ಕಾರ ಇದಕ್ಕೆ ಉತ್ತರ ನೀಡಬೇಕು' ಎಂದು ಪೀಠ ಸೂಚಿಸಿತು.

ಷೇರುಪೇಟೆ ವಹಿವಾಟು

276

54,364	ಹಿಂದಿನ ಅಂತ್ಯ
54,088	ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,240
ಇಂದಿನ ಅಂತ್ಯ	16,167
▼	72
ದಿನದ ಕನಿಷ್ಠ	16,318

ವಿನಿಮಯ ದರ

$ ಡಾಲರ್	77.25
£ ಪೌಂಡ್	95.42
€ ಯುರೊ	81.6
¥ ಯೆನ್ (100ಕ್ಕೆ)	59.31

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹395
12 ಮೊಟ್ಟೆಗೆ	₹55

ಮೈಸೂರು

100 ಮೊಟ್ಟೆಗೆ	₹400

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1605)
ಸೋಯಾ (ರಿಫೈನ್ಡ್)	₹1580 (1560)
ಸೂರ್ಯಕಾಂತಿ (ರಿಫೈನ್ಡ್)	₹1880 (1870)
ಪಾಮೋಲಿನ್	₹1573 (1556)

ಈರುಳ್ಳಿ ಧಾರಣೆ

(ಕ್ವಿಂಟಲ್)

ದಪ್ಪ	₹1500-1700
ಮಧ್ಯಮ	₹1300-1600
ಸಣ್ಣ	₹600-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹18000-25000
2ನೇ ದರ್ಜೆ	₹10000-15000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕಿ.ಜಿ)	₹111-432
ದ್ವಿತಳಿ (ಕಿ.ಜಿ)	₹155-690

ಮುಂಬೈ ಧಾರಣೆ

ಶೇಂಗಾ

11-5-2022

ಜಾವಾ 70/80(ಹೊಸ)	10200-10250
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	10000-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1615)
ಒಂದು ವಾರದ ಡೆಲಿವರಿ	1610 (1610)
ಸೋಯಾ ಕಚ್ಚಾ	1560 (1545)
ಪಾಮ್ ವಾರದ ಡೆಲಿವರಿ	1571 (1554)
ಸೂರ್ಯಕಾಂತಿ ಎಣ್ಣೆ ಕಚ್ಚಾ	1820 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

51,200 (51,290)

ಬೆಳ್ಳಿ ಕೆ.ಜಿ 61,600 (61,475)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ಪುತ್ತೂರು

₹4000-10500

ತೈಲ ಮಾರಾಟ ಕಂಪನಿಗಳು, ಬ್ಯಾಂಕ್‌ಗಳ ನಡುವೆ ಒಪ್ಪಂದ

ಎಥೆನಾಲ್ ಬೆರೆಸಿದರೆ ಪೆಟ್ರೋಲ್ ₹10 ಅಗ್ಗ?

• ಅನ್ನಪೂರ್ಣಾ ಸಿಂಗ್

ನವದೆಹಲಿ: ದೇಶದಲ್ಲಿ ಪೆಟ್ರೋಲ್ ಬೆಲೆ ತಗ್ಗಿಸಲು ಅವಕಾಶ ಕಲ್ಪಿಸುವ ಹೆಜ್ಜೆಯೊಂದನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಹಾಗೂ ಸರ್ಕಾರಿ ಸ್ವಾಮ್ಯದ ಮೂರು ಬ್ಯಾಂಕ್‌ಗಳು ಇರಿಸಿವೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಕಂಪನಿಗಳು ಎಥೆನಾಲ್ ಪೂರೈಕೆಗೆ ಹಣ ಪಾವತಿಸುವುದಕ್ಕೆ ಸಂಬಂಧಿಸಿದಂತೆ ಎಸ್‌ಬಿಐ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್



ಮತ್ತು ಇಂಡಿಯನ್ ಬ್ಯಾಂಕ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿವೆ.

ಎಥೆನಾಲ್ ಪೂರೈಸುವುದಕ್ಕಾಗಿಯೇ ತಲೆ ಎತ್ತಲಿರುವ ಘಟಕಗಳು ತೈಲ ಮಾರಾಟ ಕಂಪನಿಗಳಿಗೆ ಎಥೆನಾಲ್ ಒದಗಿಸಲಿವೆ. ಇದನ್ನು ಪೆಟ್ರೋಲ್ ಜೊತೆ ಮಿಶ್ರಣ ಮಾಡಲಾಗುತ್ತದೆ. ಶೇಕಡ 20ರಷ್ಟು ಎಥೆನಾಲ್ ಇರುವ ಪೆಟ್ರೋಲ್‌ಅನ್ನು ಪೆಟ್ರೋಲ್ ಬಂಕ್ ಮೂಲಕ ಮಾರಾಟ ಮಾಡುವ ವ್ಯವಸ್ಥೆಯು 2025ರೊಳಗೆ ಜಾರಿಗೆ ಬರುವ ನಿರೀಕ್ಷೆ ಇದೆ. ಎಥೆನಾಲ್ ಮಿಶ್ರಣದಿಂದಾಗಿ ಲೀಟರ್ ಪೆಟ್ರೋಲ್ ಬೆಲೆಯು ₹ 10ರಷ್ಟು ಕಡಿಮೆ ಆಗಬಹುದು ಎನ್ನಲಾಗಿದೆ.

ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡುವುದರಿಂದ ಕಚ್ಚಾ ತೈಲ ಆಮದು ತುಸು ಕಡಿಮೆ ಆಗುತ್ತದೆ. ಅಲ್ಲದೆ, ಎಥೆನಾಲ್‌ನಿಂದ ಆಗುವ ಪರಿಸರ ಮಾಲಿನ್ಯ ಕಡಿಮೆ. ದೇಶದಲ್ಲಿ ಪೆಟ್ರೋಲ್‌ನಲ್ಲಿ ಶೇ 9.90ರಷ್ಟು ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ. ಇದರಿಂದಾಗಿ ₹ 9 ಸಾವಿರ ಕೋಟಿಗಿಂತ ಹೆಚ್ಚಿನ ವಿದೇಶಿ ವಿನಿಮಯ ಉಳಿತಾಯವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಎಥೆನಾಲ್ ಕೊರತೆಯು ದೊಡ್ಡ ಸವಾಲು. 2025–26ರೊಳಗೆ ಶೇ 20ರಷ್ಟು ಎಥೆನಾಲ್ ಮಿಶ್ರಣದ ಗುರಿ ಸಾಧಿಸಬೇಕು ಎಂದಾದರೆ ದೇಶಕ್ಕೆ 1,016 ಕೋಟಿ ಲೀಟರ್ ಎಥೆನಾಲ್ ಅಗತ್ಯವಿದೆ. ಆದರೆ, 650 ಕೋಟಿ ಲೀಟರ್ ಎಥೆನಾಲ್ ಕೊರತೆ ಇದೆ ಎಂದು ಅಂದಾಜು ಮಾಡಲಾಗಿದೆ.

ಅಗತ್ಯ ಎದುರಾದರೆ, ಸಕ್ಕರೆ ಉದ್ಯಮವು ಹೆಚ್ಚುವರಿಯಾಗಿ ಇರುವ 60 ಲಕ್ಷ ಟನ್ ಸಕ್ಕರೆಯನ್ನು ಅಂದಾಜು 700 ಕೋಟಿ ಲೀಟರ್ ಎಥೆನಾಲ್ ಉತ್ಪಾದನೆಗೆ ಬಳಸಬಹುದು. ಹೆಚ್ಚುವರಿ ಧಾನ್ಯಗಳಿಂದ ಅಂದಾಜು 500 ಕೋಟಿ ಲೀಟರ್ ಎಥೆನಾಲ್ ಉತ್ಪಾದನೆಗೆ ಯೋಚಿಸಲಾಗಿದೆ.

ನೆಕ್ಸಾನ್ ಇವಿ ಮ್ಯಾಕ್ಸ್ ಬಿಡುಗಡೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ವಿದ್ಯುತ್ ಚಾಲಿತ 'ನೆಕ್ಸಾನ್ ಇವಿ ಮ್ಯಾಕ್ಸ್' ವಾಹನವನ್ನು ಬುಧವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್‌ಷೋರೂಂ ಬೆಲೆಯು ₹ 17.74 ಲಕ್ಷದಿಂದ ₹ 19.24 ಲಕ್ಷದವರೆಗೆ ಇದೆ.

ಇದು ಈಗಾಗಲೇ ಮಾರುಕಟ್ಟೆಯಲ್ಲಿ ಇರುವ ನೆಕ್ಸಾನ್ ಇವಿ ವಾಹನಕ್ಕಿಂತ ಶೇಕಡ 33ರಷ್ಟು ಹೆಚ್ಚು ಬ್ಯಾಟರಿ ಸಾಮರ್ಥ್ಯ ಹೊಂದಿದೆ. ಒಂದು ಬಾರಿ ಚಾರ್ಜ್ ಮಾಡಿದರೆ 437 ಕಿ.ಮೀ. ದೂರ ಪ್ರಯಾಣಿಸಬಹುದು ಎಂದು ಕಂಪನಿ ಹೇಳಿದೆ.

ಸೆನ್ಸೆಕ್ಸ್ ಮತ್ತೆ ಇಳಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಸತತ ನಾಲ್ಕನೆಯ ದಿನವೂ ಕುಸಿತ ಕಂಡವು.

ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆತವನ್ನು ಮುಂದುವರಿಸಿರುವುದು, ಕಚ್ಚಾ ತೈಲ ಬೆಲೆ ಏರಿಕೆ ಆಗಿರುವುದು ಕುಸಿತಕ್ಕೆ ಕಾರಣ ಎಂದು ವರ್ತಕರು ತಿಳಿಸಿದ್ದಾರೆ.

ಸೆನ್ಸೆಕ್ಸ್ 276 ಅಂಶ, ನಿಫ್ಟಿ 72 ಅಂಶ ಇಳಿಕೆ ಕಂಡಿವೆ. 'ದೇಶಿ ಹೂಡಿಕೆದಾರರ ವಿಶ್ವಾಸ ತಗ್ಗಿದೆ. ವಿದೇಶಿ ಹೂಡಿಕೆದಾರರು ಮಾರಾಟಕ್ಕೆ ಹೆಚ್ಚು ಗಮನ ನೀಡಿದ್ದಾರೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ ಶೇಕಡ 3.12ರಷ್ಟು ಹೆಚ್ಚಳವಾಗಿ 105.7 ಡಾಲರ್‌ಗೆ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 10 ಪೈಸೆ ಚೇತರಿಕೆ ಕಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು -	500

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-54000

ಹೊನ್ನಾಳಿ

ರಾಶಿ	49399-49399

ಕಾರ್ಕಳ

ಹೊಸತು	40000-45000
ಹಳತು	46000-54000

ಕುಮಟಾ

ಚಿಪ್ಪು	27019-31089
ಕೋಕ	18019-29999
ಫ್ಯಾಕ್ಟರಿ	10169-20299
ಹಳೆಚಾಲಿ	46509-48909
ಹೊಸಚಾಲಿ	35099-38899

ಮಂಗಳೂರು

ಕೋಕ	20000-25000

ಪುತ್ತೂರು

ಕೋಕ	11000-26000
ಹೊಸತು	27500-45000

ಶಿವಮೊಗ್ಗ

ಬೆಟ್ಟೆ	51689-53399
ಗೊರಬಲು	18009-37699
ರಾಶಿ	47009-50969
ಸರಕು	57619-79600

ಸಿದ್ದಾಪುರ

ಬಿಳಿಗೋಟು	23599-32109
ಚಾಲಿ	35599-40099
ಕೋಕ	22699-33099
ಕೆಂಪುಗೋಟು	27689-31289
ರಾಶಿ	45899-50399
ತಟ್ಟಿಬೆಟ್ಟೆ	38699-43809

ಶಿರಸಿ

ಬೆಟ್ಟೆ	36219-47339
ಬಿಳಿಗೋಟು	21299-33399
ಚಾಲಿ	37018-40801
ರಾಶಿ	41521-49841

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15600	15650	206.10 ಸೆಂಟ್ಸ್
ಎಸಿ	8900	8500	8400	
ಆರ್‌ಪಿ	9600	9800	9850	ಲಂಡನ್
ಆರ್‌ಸಿ	4500	4200	4350	2020ಡಾಲರ್ಸ್

ಆಧಾರ್, ಪ್ಯಾನ್ ಕಡ್ಡಾಯ

ನವದೆಹಲಿ (ಪಿಟಿಐ): ಹಣಕಾಸು ವರ್ಷವೊಂದರಲ್ಲಿ ₹ 20 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಜಮಾ ಮಾಡಲು ಅಥವಾ ಹಿಂಪಡೆಯಲು, ಚಾಲ್ತಿ ಖಾತೆ ತೆರೆಯಲು ಆಧಾರ್ ಅಥವಾ ಪ್ಯಾನ್ ಸಂಖ್ಯೆ ಉಲ್ಲೇಖಿಸುವುದನ್ನು ಕೇಂದ್ರ ಕಡ್ಡಾಯಗೊಳಿಸಿದೆ. ಈ ಸಂಬಂಧ ಕೇಂದ್ರ ನೇರ ತೆರಿಗೆಗಳ ಮಂಡಳಿಯು ಅಧಿಸೂಚನೆ ಹೊರಡಿಸಿದೆ.

ಜಿಡಿಪಿ ಅಂದಾಜು ಇಳಿಕೆ

ಮುಂಬೈ (ಪಿಟಿಐ): 2022–23 ಹಾಗೂ 2023–24ನೇ ಸಾಲಿನ ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರದ ಅಂದಾಜನ್ನು ಮಾರ್ಗನ್ ಸ್ಟ್ಯಾನ್ಲಿ ಸಂಸ್ಥೆಯು ಶೇ 0.30ರಷ್ಟು ತಗ್ಗಿಸಿದೆ. ಮುಂದಿನ ದಿನಗಳಲ್ಲಿ ಹಣದುಬ್ಬರವು ಇನ್ನಷ್ಟು ಹೆಚ್ಚಾಗುವ ಅಪಾಯವಿದೆ ಎಂದು ಹೇಳಿದೆ.

ಪ್ರಸಕ್ತ ಹಣಕಾಸು ವರ್ಷ ಜಿಡಿಪಿ ಶೇ 7.6 ಬೆಳವಣಿಗೆಯಾಗಲಿದೆ. ಮುಂದಿನ ವರ್ಷ ಶೇ 6.7 ಬೆಳವಣಿಗೆ ಕಾಣಲಿದೆ ಎಂದು ಸಂಸ್ಥೆ ಹೇಳಿದೆ.

'ಲಂಕಾ: ವಾರದಲ್ಲಿ ಹೊಸ ಪ್ರಧಾನಿ'

ಕೊಲಂಬೊ(ಎಎಫ್‌ಪಿ): 'ಇದೇ ವಾರದೊಳಗೆ ದೇಶಕ್ಕೆ ಹೊಸ ಪ್ರಧಾನಿ ನೇಮಿಸಿ, ಸಚಿವ ಸಂಪುಟ ರಚಿಸಲಾಗುವುದು' ಎಂದು ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಷ ಬುಧವಾರ ತಿಳಿಸಿದ್ದಾರೆ.

ದೇಶದ ಜನತೆಯುನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂಸತ್ತಿಗೆ ಹೆಚ್ಚಿನ ಅಧಿಕಾರ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತರಲಾಗುವುದು ಎಂದು ಹೇಳಿದ್ದಾರೆ.

'ದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸವಾಲುಗಳನ್ನು ಎದುರಿಸಲು ಶ್ರೀಲಂಕಾದ ಜನತೆ ಕೈಜೋಡಿಸಬೇಕು. ಸಂಯಮ, ಸಹನೆ ಮತ್ತು ಸಹಬಾಳ್ವೆ ಪ್ರೋತ್ಸಾಹಿಸುವುದು ಅತ್ಯಗತ್ಯವಾಗಿದೆ' ಎಂದು ಅವರು ಟ್ವಿಟರ್‌ನಲ್ಲೂ ಕರೆ ನೀಡಿದ್ದಾರೆ.

ಪ್ರಧಾನಿ ಸ್ಥಾನಕ್ಕೆ ಮಹಿಂದಾ ರಾಜಪಕ್ಸ ಅವರ ರಾಜೀನಾಮೆ ನೀಡಿದ ಬಳಿಕ ಉಂಟಾಗಿರುವ ರಾಜಕೀಯ ಅಸ್ಥಿರತೆ ಕೊನೆಗೊಳಿಸಲು ಅಧ್ಯಕ್ಷ ಗೊಟಬಯ ಅವರು ಆಡಳಿತಾರೂಢ ಪಕ್ಷದ ಭಿನ್ನಮತೀಯರು ಮತ್ತು ಪ್ರಮುಖ ವಿರೋಧ ಪಕ್ಷ ಎಸ್‌ಜೆಬಿ ನಾಯಕರ ಜೊತೆಯೂ ಮಾತುಕತೆ ನಡೆಸಿದರು.

'ಹೊಸ ಪ್ರಧಾನಿ ನೇಮಕಕ್ಕೆ 2 ದಿನಗಳಿಂದ ಮಾತುಕತೆ ನಡೆಯುತ್ತಿದೆ. ರಾಜಕೀಯ ಅಸ್ಥಿರತೆ ಶೀಘ್ರ ಅಂತ್ಯವಾಗಲಿದೆ' ಎಂದು ಆಡಳಿತಾರೂಢ ಎಸ್‌ಎಲ್‌ಪಿಪಿಯ ಮೈತ್ರಿ ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ.

ಕೇಂದ್ರ ಬ್ಯಾಂಕ್ ಮುಖ್ಯಸ್ಥರಿಂದ ರಾಜೀನಾಮೆ ಬೆದರಿಕೆ: 1948ರಲ್ಲಿ ಸ್ವತಂತ್ರಗೊಂಡ ನಂತರ ದ್ವೀಪ ರಾಷ್ಟ್ರ ತೀವ್ರ ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಸ್ಥಿರತೆ ತರಲು ರಾಜಕೀಯ ನಾಯಕರು ವಿಫಲವಾದರೆ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಶ್ರೀಲಂಕಾ ಕೇಂದ್ರ ಬ್ಯಾಂಕ್ ಮುಖ್ಯಸ್ಥ ನಂದಾಲಾಲ್ ವೀರಸಿಂಘೆ ಬುಧವಾರ ಬೆದರಿಕೆ ಹಾಕಿದ್ದಾರೆ.

ಕ್ಷಿಪ್ರಕ್ರಾಂತಿ ಅಲ್ಲಗಳೆದ ಸೇನೆ: 'ದೇಶದಲ್ಲಿ ಉದ್ವಿಗ್ನ ಪರಿಸ್ಥಿತಿ ನಿಯಂತ್ರಿಸಲು ಸಾವಿರಾರು ಯೋಧರನ್ನು ನಿಯೋಜಿಸಲಾಗಿದೆ. ಸೇನಾ ಕ್ಷಿಪ್ರಕ್ರಾಂತಿ ನಡೆದಿಲ್ಲ. ಮುನ್ನೆಚ್ಚರಿಕೆ ವಹಿಸಲು ಸೇನೆಗೆ ಅಧಿಕಾರ ನೀಡಲಾಗಿದೆ. ಅಧಿಕಾರ ವಶಕ್ಕೆ ಯತ್ನಿಸುತ್ತಿಲ್ಲ'ಎಂದು ಶ್ರೀಲಂಕಾದ ರಕ್ಷಣಾ ಸಚಿವಾಲಯದ ಕಾರ್ಯದರ್ಶಿ ಕಮಲ್ ಗುಣರತ್ನೆ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಆಕ್ರೋಶಭರಿತರಿಂದ ಹಿಂಸಾಚಾರ, ಗಲಭೆ ನಡೆಸಿ, ಸೇನಾ ಆಡಳಿತ ಹೇರಲು ಯತ್ನಿಸಲಾಗುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಟ್ವೀಟ್ ಮಾಡಿದ್ದಾರೆ.

ರಾಜಪಕ್ಸಗೆ ಸೇನೆ ರಕ್ಷಣೆ: ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ ಹಾಗೂ ಅವರ ಸಹವರ್ತಿಗಳು ಭಾರತಕ್ಕೆ ಪಲಾಯನ ಮಾಡಿದ್ದಾರೆ ಎಂಬ ಊಹಾಪೋಹಗಳ ಬೆನ್ನಲ್ಲೇ, ಮಹಿಂದಾ ರಾಜಪಕ್ಸ ಅವರಿಗೆ ಇಲ್ಲಿನ ಟ್ರಿಂಕಮಾಲಿ ನೌಕಾನೆಲೆಯಲ್ಲಿ ಭದ್ರತೆ ನೀಡಲಾಗಿದೆ ಎಂದು ರಕ್ಷಣಾ ಕಾರ್ಯದರ್ಶಿ ಕಮಲ್ ಗುಣರತ್ನೆ ಹೇಳಿದ್ದಾರೆ.

ಪ್ರತಿಭಟನಕಾರರ ಮೇಲಿನ ದಾಳಿಗೆ ಪ್ರಚೋದಿಸಿದ ಆರೋಪದಲ್ಲಿ ಮಹಿಂದಾ ಅವರ ಬಂಧನಕ್ಕೆ ವಿರೋಧ ಪಕ್ಷಗಳು ಒತ್ತಾಯಿಸಿವೆ. ಪ್ರತಿಭಟನೆಯಲ್ಲಿ 8 ಜನರು ಮೃತಪಟ್ಟು, ಗಾಯಗೊಂಡ ಘಟನೆ ಬಗ್ಗೆ ಮಹಿಂದಾ ಅವರ ಮುಖ್ಯ ಭದ್ರತಾ ಅಧಿಕಾರಿ ವಿರುದ್ಧ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.



ಕೊಲಂಬೊದ ಚೆಕ್ ಪಾಯಿಂಟ್ ಒಂದರಲ್ಲಿ ಕಾರಿನ ಚಾಲಕನ ದಾಖಲೆಗಳನ್ನು ಪರಿಶೀಲನೆ ನಡೆಸಿದ ಯೋಧರು. ಎಎಫ್‌ಪಿ ಚಿತ್ರ

ಶ್ರೀಲಂಕಾಗೆ ಸೇನೆ ಕಳಿಸಿಲ್ಲ: ಭಾರತ

ಶ್ರೀಲಂಕಾದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿರುವಾಗ ಭಾರತವು ಶ್ರೀಲಂಕಾಕ್ಕೆ ಸೇನೆ ಕಳುಹಿಸಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಆದರೆ, ಇದನ್ನು ಅಲ್ಲಗಳೆದಿರುವ ಭಾರತದ ಹೈಕಮಿಷನ್, 'ಶ್ರೀಲಂಕಾದ ಪ್ರಜಾಪ್ರಭುತ್ವ, ರಾಜಕೀಯ ಸ್ಥಿರತೆ ಮತ್ತು ಆರ್ಥಿಕ ಸುಧಾರಣೆಗೆ ಭಾರತ ಸಂಪೂರ್ಣ ಸಹಕಾರ ನೀಡಲಿದೆ' ಎಂದು ಭರವಸೆ ನೀಡಿದೆ.

'ರಷ್ಯಾ ತೆಕ್ಕೆಯಿಂದ 4 ಹಳ್ಳಿಗಳು ಮುಕ್ತ'

ಪ್ಯಾರಿಸ್/ ಕೀವ್/ಝುಪೊರಿಝಿಯಾ (ಎಪಿ/ರಾಯಿಟರ್ಸ್): ಉಕ್ರೇನ್ ಸೇನೆಯು ಹಾರ್ಕಿವ್ ಬಳಿಯ ನಾಲ್ಕು ಹಳ್ಳಿಗಳಿಂದ ರಷ್ಯಾದ ಪಡೆಗಳನ್ನು ಹಿಮ್ಮೆಟ್ಟಿಸಿದ್ದು, ದೇಶದ ಪೂರ್ವದಲ್ಲಿ ಸ್ವಲ್ಪ ಮುನ್ನಡೆ ಸಾಧಿಸಲಾಗಿದೆ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬುಧವಾರ ತಿಳಿಸಿದರು.

ಮಂಗಳವಾರ ನಿಧನರಾದ ಸ್ವತಂತ್ರ ಉಕ್ರೇನಿನ ಮೊದಲ ಅಧ್ಯಕ್ಷ ಲಿಯೊನಿಡ್ ಕ್ರಾವ್ಚುಕ್ ಅವರಿಗೆ ಅಂತಿಮ ನಮನ ಸಲ್ಲಿಸುವ ಭಾಷಣದಲ್ಲಿ ಝೆಲೆನ್‌ಸ್ಕಿ, ಬಿಕ್ಕಟ್ಟಿನ ಸಂದರ್ಭದಲ್ಲೂ ಅವರು ಧೃತಿಗಡೆದೆ ಸಾಹಸ ಮೆರೆದರು. ಇಡೀ ದೇಶ ತಮ್ಮ ಮಾತನ್ನು ಹೇಗೆ ಕೇಳುತ್ತದೆ ಎನ್ನುವ ನಾಡಿಮಿಡಿತವು ಅವರಿಗೆ ತಿಳಿದಿತ್ತು ಎಂದರು.

ಫ್ರಾನ್ಸ್ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳೊಂದಿಗೆ ವರ್ಚುವಲ್ ಸಂವಾದ ನಡೆಸಿದ ಝೆಲೆನ್‌ಸ್ಕಿ, 'ಉಕ್ರೇನ್, ರಷ್ಯಾದ ಆಕ್ರಮಣಕ್ಕೂ ಮೊದಲೇ ನ್ಯಾಟೊ ಭಾಗವಾಗಿದ್ದರೆ ಯಾವುದೇ ಯುದ್ಧ ನಡೆಯುತ್ತಿರಲಿಲ್ಲ' ಎಂದು ಅಭಿಪ್ರಾಯಪಟ್ಟರು.

ಉಕ್ರೇನ್ ವಿದೇಶಾಂಗ ಸಚಿವ ಡೆಮಿಟ್ರೊ ಕುಲೆಬಾ, 'ನಮ್ಮ ಸೇನೆ ಮುಂಚೂಣಿಯಲ್ಲಿ ಈಗ ಬಲಿಷ್ಠವಾಗಿದೆ. ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ಮೇಲೆ ನಿತ್ಯ 34 ಬಾರಿ ರಷ್ಯಾ ಬಾಂಬ್ ದಾಳಿ ನಡೆಸಿದರೂ, ನಮ್ಮ ಯೋಧರು ಸ್ಥಾವರದ ನಿಯಂತ್ರಣ ಬಿಟ್ಟುಕೊಟ್ಟಿಲ್ಲ. ಡಾನ್‌ಬಾಸ್ ಗೆಲ್ಲುವುದು ನಮ್ಮ ಸಾಮರ್ಥ್ಯ ಸಾಬೀತಿಗೆ ನಿರ್ಣಾಯಕವಾಗಿದೆ. ಈ ಗೆಲುವು ಖಂಡಿತಾ ನಮ್ಮವರನ್ನು ಮತ್ತು ನಮ್ಮ ಗಡಿಗಳನ್ನು ವಿಮೋಚನೆಗೊಳಿಸಲಿದೆ' ಎಂದರು. .

ಕ್ರೆಮ್ಲಿನ್ ನಿರ್ಧರಿಸಬೇಕು: ಆಕ್ರಮಿತ ಕೆರ್ಸಾನ್ ಪ್ರದೇಶ ರಷ್ಯಾಕ್ಕೆ ಸೇರುವ ಸಾಧ್ಯತೆಯ ಬಗ್ಗೆ ಕೇಳಿದಾಗ ಸ್ಥಳೀಯ ನಿವಾಸಿಗಳು, 'ತಮ್ಮ ಭವಿಷ್ಯವನ್ನು ಕ್ರೆಮ್ಲಿನ್ (ಪುಟಿನ್ ಆಡಳಿತ ಕಚೇರಿ) ನಿರ್ಧರಿಸಬೇಕು' ಎಂದು ಹೇಳಿರುವುದಾಗಿ 'ರಾಯಿಟರ್ಸ್' ವರದಿ ಮಾಡಿದೆ.

ರಷ್ಯಾದ ಅನಿಲ ಸಾಗಣೆ ಸ್ಥಗಿತ: ದೇಶದ ಪೂರ್ವದ ಪ್ರಮುಖ ಕೇಂದ್ರದ ಮೂಲಕ ಯುರೋಪ್ ರಾಷ್ಟ್ರಗಳಿಗೆ ಸರಬರಾಜಾಗುತ್ತಿದ್ದ ರಷ್ಯಾದ ಗ್ಯಾಜ್‌ಪ್ರೋಮ್ ಕಂಪನಿಯ ನೈಸರ್ಗಿಕ ಅನಿಲವನ್ನು ಉಕ್ರೇನ್ ಬುಧವಾರ ಸ್ಥಗಿತಗೊಳಿಸಿದೆ. ಉಕ್ರೇನ್‌ನಲ್ಲಿ ಗ್ಯಾಜ್‌ಪ್ರೋಮ್‌ಗೆ ಪ್ರತಿಕೂಲ ಪರಿಣಾಮ ಬೀರಿದೆ.

ಜಿಮಿನಿ ದ್ವೀಪದಲ್ಲಿ ಸೇನಾ ಬಲ: ಕಪ್ಪು ಸಮುದ್ರದ ಮೇಲಿನ ಪ್ರಾಬಲ್ಯಕ್ಕೆ ರಷ್ಯಾ ಜಿಮಿನಿ ದ್ವೀಪದಲ್ಲಿ ಯುದ್ಧತಂತ್ರದ ವಾಯು ರಕ್ಷಣಾ ವ್ಯವಸ್ಥೆ, ಕರಾವಳಿ ರಕ್ಷಣೆಯ ಕ್ರೂಸ್ ಕ್ಷಿಪಣಿಗಳೊಂದಿಗೆ ರಕ್ಷಣಾ ಪಡೆಗಳ ಸಾಮರ್ಥ್ಯ ಬಲಪಡಿಸಿಕೊಳ್ಳುತ್ತಿದೆ ಎಂದು ಬ್ರಿಟನ್ ಹೇಳಿದೆ.

ಡೊನೆಟ್‌ಸ್ಕ್ ಪ್ರಾಂತ್ಯದ ಸ್ಲೊವಿಯನ್‌ಸ್ಕ್ ನಗರದ 2 ಜಿಲ್ಲೆಗಳು ಹಾಗೂ ಝುಪೊರಿಝಿಯಾ ಪ್ರಾಂತ್ಯದ ಮೇಲೆ ರಷ್ಯಾ ಬುಧವಾರ ಕ್ಷಿಪಣಿ ಮತ್ತು ಶೆಲ್ ದಾಳಿ ತೀವ್ರಗೊಳಿಸಿದವು ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್: ಶೇ 30ರಷ್ಟು ಉದ್ಯೋಗ ನಷ್ಟ

ಜಿನೀವಾ (ಎಎಫ್‌ಪಿ): ರಷ್ಯಾ ಆಕ್ರಮಣದ ನಂತರ ಉಕ್ರೇನ್‌ನಲ್ಲಿ ಶೇ 30ರಷ್ಟು ಉದ್ಯೋಗ ನಷ್ಟವಾಗಿದೆ ಎಂದು ವಿಶ್ವಸಂಸ್ಥೆ ಬುಧವಾರ ಹೇಳಿದೆ.

ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು (ಐಎಲ್‌ಒ), ಉಕ್ರೇನ್‌ನಲ್ಲಿ ರಷ್ಯಾದ ಯುದ್ಧದ ಪರಿಣಾಮಗಳ ಕುರಿತಾದ ತನ್ನ ಮೊದಲ ವರದಿಯಲ್ಲಿ ಈ ಮಾಹಿತಿ ಉಲ್ಲೇಖಿಸಿದೆ. ಉಕ್ರೇನ್– ರಷ್ಯಾ ಯುದ್ಧ ಮುಂದುವರಿದರೆ ಪರಿಸ್ಥಿತಿಯು ಇನ್ನಷ್ಟು ಹೀನಾಯವಾಗಲಿದೆ. ಉದ್ಯೋಗ ನಷ್ಟ 70 ಲಕ್ಷಕ್ಕೆ ಅಥವಾ ಶೇ 44.5ಕ್ಕೆ ಏರಿಕೆಯಾಗಲಿದೆ ಎಂದು ಅಂದಾಜಿಸಿದೆ.



ಸಂಕ್ಷಿಪ್ತ ಸುದ್ದಿ

ವಿಶ್ವ ಬಾಕ್ಸಿಂಗ್: ಪರ್ವೀನ್ ಮುನ್ನಡೆ

ಭಾರತದ ಪರ್ವೀನ್ ಅವರು ಐಬಿಎ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಟರ್ಕಿಯ ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 63 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಪರ್ವೀನ್ ಬುಧವಾರ ಉಕ್ರೇನ್‌ನ ಮರಿಯಾ ಬೊವಾ ಅವರನ್ನು ಏಕಪಕ್ಷೀಯವಾಗಿ ಮಣಿಸಿದರು. ಭಾನುವಾರ ನಡೆಯುವ ಎಂಟರಘಟ್ಟದ ಬೌಟ್‌ನಲ್ಲಿ ಪರ್ವೀನ್, ಅಮೆರಿಕದ ಜಜೈರಾ ಗೊಂಜಾಲೆಜ್ ಅವರನ್ನು ಎದುರಿಸುವರು.

ಡೆಫ್‌ಲಿಂಪಿಕ್ಸ್: ಫೈನಲ್‌ಗೆ ದೀಕ್ಷಾ



ಕಾಕ್ಸಿಯಸ್ ಡು ಸುಲ್, ಬ್ರೆಜಿಲ್ (ಪಿಟಿಐ): ಭಾರತದ ಗಾಲ್ಫ್ ಆಟಗಾರ್ತಿ ದೀಕ್ಷಾ ದಾಗರ್ ಅವರು ಇಲ್ಲಿ ನಡೆಯುತ್ತಿರುವ ಡೆಫ್‌ಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವತ್ತ ದಿಟ್ಟ ಹೆಜ್ಜೆ ಇಟ್ಟಿದ್ದಾರೆ.

21 ವರ್ಷದ ದೀಕ್ಷಾ ಕೂಟದ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. 2017ರಲ್ಲಿ ಟರ್ಕಿಯ ಸ್ಯಾಮ್ಸನ್‌ನಲ್ಲಿ ನಡೆದ ಕಳೆದ ಬಾರಿಯ ಡೆಫ್‌ಲಿಂಪಿಕ್ಸ್‌ನಲ್ಲಿ ಅವರು ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದರು.

ನಡಾಲ್ ಮುನ್ನಡೆ



ರಫೆಲ್ ನಡಾಲ್

ರೋಮ್ (ಎಎಫ್‌ಪಿ): ಸ್ಪೇನ್‌ನ ರಫೆಲ್ ನಡಾಲ್, ಅಮೆರಿಕದ ಜಾನ್ ಇಸ್ನೆರ್ ಅವರನ್ನು ಮಣಿಸಿ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.

ಬುಧವಾರ ನಡೆದ ಪಂದ್ಯದಲ್ಲಿ ನಡಾಲ್ 6-3, 6-1ರಿಂದ ಗೆದ್ದರು. ಮತ್ತೊಂದು ಪಂದ್ಯದಲ್ಲಿ ಸ್ಟೆಫನೋಸ್ ಸಿಟ್ಸಿಪಾಸ್ 6-3, 7-5, 7-6ರಿಂದ ಗ್ರಿಗೊರ್ ಡಿಮಿಟ್ರೊವ್ ವಿರುದ್ಧ ಗೆದ್ದರು. ಮಹಿಳಾ ಸಿಂಗಲ್ಸ್‌ನಲ್ಲಿ ಪೋಲೆಂಡ್‌ನ ಇಗಾ ಸ್ವೆಟೆಕ್ 6-3, 6-0ರಿಂದ ರುಮೇನಿಯಾದ ಎಲೆನಾ ಗೇಬ್ರಿಯಲ್ ರೂಸ್‌ಗೆ ಸೋಲುಣಿಸಿದರು.

ಫುಟ್‌ಬಾಲ್: ರೆಡ್ಸ್ ಯುನೈಟೆಡ್‌ಗೆ ಜಯ

ಬೆಂಗಳೂರು: ಸುರೇಶ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ರೆಡ್ಸ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಪಂದ್ಯದಲ್ಲಿ ಜಯ ಗಳಿಸಿತು.

ಬುಧವಾರ ನಡೆದ ಪಂದ್ಯದಲ್ಲಿ 4-1ರಿಂದ ಯಂಗ್ ಜೆಮ್ಸ್ ತಂಡವನ್ನು ಪರಾಭವಗೊಳಿಸಿತು. ಸುರೇಶ್ 28 ಮತ್ತು 42ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ವಿಜೇತ ತಂಡದ ಸಂಜಯ್ (24ನೇ ನಿ.) ಮತ್ತು ನೇಹಲ್ (62ನೇ ನಿ.) ತಲಾ ಒಂದು ಗೋಲು ಹೊಡೆದರು. ಜೆಮ್ಸ್ ಪರ ಪ್ರಣವ್ (34ನೇ ನಿ.) ಕಾಲ್ಚಳಕ ತೋರಿದರು.

ಎ ಡಿವಿಷನ್ ಪಂದ್ಯಗಳಲ್ಲಿ ರೆಬೆಲ್ಸ್ ಎಫ್‌ಸಿ 4-1ರಿಂದ ಇನ್‌ಕಮ್ ಟ್ಯಾಕ್ಸ್ ಎಫ್‌ಸಿ ಎದುರು, ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ 4-0ರಿಂದ ಬ್ಲಿಟ್ಜ್ ಎಫ್‌ಸಿ ವಿರುದ್ಧ ಗೆದ್ದವು. ದಕ್ಷಿಣ ವಲಯ ಸಿ ಡಿವಿಷನ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಂದು ಮೆಮೋರಿಯಲ್ ಎಫ್‌ಸಿ ಶೂಟೌಟ್‌ನಲ್ಲಿ 4-3ರಿಂದ ಕ್ಯಾಪ್ ಲೈಫ್ ಬೆಂಗಳೂರು ವಿರುದ್ಧ ಜಯಿಸಿತು.

ಬ್ಯಾಡ್ಮಿಂಟನ್: ಭಾರತಕ್ಕೆ ಸೋಲು

ಬ್ಯಾಂಕಾಕ್ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಕ್ರಮವಾಗಿ ಥಾಮಸ್ ಕಪ್ ಮತ್ತು ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಗಳ ಕೊನೆಯ ಲೀಗ್ ಪಂದ್ಯದಲ್ಲಿ ನಿರಾಸೆ ಅನುಭವಿಸಿದವು.

ಬುಧವಾರ ಇಲ್ಲಿ ನಡೆದ ಪುರುಷರ ವಿಭಾಗದ ಸಿ ಗುಂಪಿನ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಭಾರತದ ಆಟಗಾರರು 1-4ರಿಂದ ಚೀನಾ ತೈಪೆ ವಿರುದ್ಧ ಮಣಿದರು. ಡಿ ಗುಂಪಿನ ಪಂದ್ಯದಲ್ಲಿ ಮಹಿಳಾ ತಂಡ 0-5ರಿಂದ ಕೊರಿಯಾ ಎದುರು ಸೋತಿತು. ಭಾರತದ ಎರಡೂ ತಂಡಗಳು ಈಗಾಗಲೇ ಕ್ವಾರ್ಟರ್‌ಫೈನಲ್ ತಲುಪಿವೆ.

ಎನ್‌ಬಿಎ ದಿಗ್ಗಜ ಬಾಬ್ ನಿಧನ

ಲಾಸ್ ಎಂಜಲೀಸ್ (ಎಎಫ್‌ಪಿ): ಹಾಲ್ ಆಫ್ ಫೇಮ್ ಗೌರವ ಗಳಿಸಿದ್ದ ಬ್ಯಾಸ್ಕೆಟ್‌ಬಾಲ್ ಆಟಗಾರ ಬಾಬ್ ಲೇನಿಯರ್ (73) ಮಂಗಳವಾರ ನಿಧನರಾದರು.

ಅಮೆರಿಕದ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ (ಎನ್‌ಬಿಎ) ಟೂರ್ನಿಯಲ್ಲಿ 14 ಆವೃತ್ತಿಗಳಲ್ಲಿ ಆಡಿದ್ದ ಅವರು ಪಂದ್ಯವೊಂದಕ್ಕೆ ಸರಾಸರಿ 20.1 ಪಾಯಿಂಟ್ಸ್ ಗಳಿಸಿದ್ದರು. 1984ರಲ್ಲಿ ನಿವೃತ್ತರಾಗಿದ್ದರು.

ಬೌಲಿಂಗ್‌ನಲ್ಲೂ ಮಿಂಚಿದ ಮಿಚೆಲ್; ಚುಟುಕು ಮಾದರಿಯಲ್ಲಿ ಅಶ್ವಿನ್ ಚೊಚ್ಚಲ ಅರ್ಧಶತಕ

ವಾರ್ನರ್–ಮಾರ್ಷ್ ಅಬ್ಬರಕ್ಕೆ ಒಲಿದ ಜಯ

ನವಿ ಮುಂಬೈ (ಪಿಟಿಐ): ಆಸ್ಟ್ರೇಲಿಯಾದ ಜೋಡಿ ಡೇವಿಡ್ ವಾರ್ನರ್ ಮತ್ತು ಮಿಚೆಲ್ ಮಾರ್ಷ್ ಅಬ್ಬರದ ಬ್ಯಾಟಿಂಗ್‌ನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಜಯಭೇರಿ ಬಾರಿಸಿತು.

ಬುಧವಾರ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ ರಾಯಲ್ಸ್ ತಂಡವು ನೀಡಿದ್ದ 161 ರನ್‌ಗಳ ಗೆಲುವಿನ ಗುರಿಯನ್ನು ಡೆಲ್ಲಿ ತಂಡವು 18.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ಮುಟ್ಟಿತು. ವಾರ್ನರ್ (ಅಜೇಯ 52) ಮತ್ತು ಮಾರ್ಷ್ (89; 62ಎ) 2ನೇ ವಿಕೆಟ್ ಜೊತೆಯಾಟದಲ್ಲಿ 144 ರನ್‌ಗಳನ್ನು ಸೇರಿಸಿದರು.

9ನೇ ಓವರ್‌ನಲ್ಲಿ ವಾರ್ನರ್ ಮತ್ತು 11ನೇ ಓವರ್‌ನಲ್ಲಿ ಮಾರ್ಷ್‌ಗೆ ರಾಜಸ್ಥಾನ ತಂಡದ ಫೀಲ್ಡರ್‌ಗಳು ಕೊಟ್ಟ ಜೀವದಾನಗಳು ದುಬಾರಿಯಾದವು.

ಟ್ರೆಂಟ್ ಬೌಲ್ಟ್ ಹಾಕಿದ ಮೊದಲ ಓವರ್‌ನ ಎರಡನೇ ಎಸೆತದಲ್ಲಿಯೇ ಶ್ರೀಕರ್ ಭರತ್ ಔಟಾದರು. ಆದರೆ ಈ ಯಶಸ್ಸಿನ ಸಂಭ್ರಮದ ಛಾಯೆ ರಾಯಲ್ಸ್ ತಂಡದಲ್ಲಿ ಹೆಚ್ಚು ಹೊತ್ತು ಇರಲಿಲ್ಲ. ಅಶ್ವಿನ್ ಮತ್ತು ಮಾರ್ಷ್ ಅವರ ಆಟ ರಂಗೇರಿತು.

ಅಶ್ವಿನ್ ಚೊಚ್ಚಲ ಅರ್ಧಶತಕ: ಟಿ20 ಕ್ರಿಕೆಟ್ ಮಾದರಿಯಲ್ಲಿ ಅಶ್ವಿನ್ (50; 38ಎ, 4X4, 6X2) ಚೊಚ್ಚಲ ಅರ್ಧಶತಕ ಗಳಿಸಿದರು. ಅಶ್ವಿನ್ ಇದುವರೆಗೆ 51 ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. ಐಪಿಎಲ್‌ನಲ್ಲಿ 179 ಪಂದ್ಯಗಳನ್ನು ಆಡಿರುವ ಅನುಭವಿಯಾಗಿದ್ದಾರೆ. ಅವರು ಮತ್ತು ಕನ್ನಡಿಗ ದೇವದತ್ತ ಪಡಿಕ್ಕಲ್ (48; 30ಎ) 3ನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು.

15ನೇ ಓವರ್‌ನಲ್ಲಿ ಮಿಚೆಲ್ ಮಾರ್ಷ್ ಎಸೆತದಲ್ಲಿ ಅಶ್ವಿನ್ ಔಟಾಗುವುದರೊಂದಿಗೆ ಜೊತೆಯಾಟಕ್ಕೆ ತೆರೆಬಿತ್ತು. ನಾಯಕ ಸಂಜು ಸ್ಯಾಮ್ಸನ್, ಬಿರುಸಿನ ಹೊಡೆತಗಳ ಆಟಗಾರ ರಿಯಾನ್ ಪರಾಗ್ ಅವರು ಹೆಚ್ಚು ಹೊತ್ತು ನಿಲ್ಲಲಿಲ್ಲ. ಆದರೆ ಇನ್ನೊಂದು ಬದಿಯಲ್ಲಿದ್ದ ಪಡಿಕ್ಕಲ್ ಮಾತ್ರ ಸಾಧ್ಯವಾದಷ್ಟು ರನ್‌ಗಳನ್ನು ಸೂರೆ ಮಾಡಿದರು. ತಮ್ಮ ಅರ್ಧಶತಕಕ್ಕೆ 2 ರನ್‌ಗಳ ಅಗತ್ಯವಿದ್ದಾಗ ದೇವದತ್ತ ಅವರು ಎನ್ರಿಚ್ ಎಸೆತವನ್ನು ಸಿಕ್ಸರ್‌ಗೆತ್ತುವ ಪ್ರಯತ್ನ ಮಾಡಿದರು. ಬದಲೀ ಫೀಲ್ಡರ್ ಕಮಲೇಶ್ ನಾಗರಕೋಟಿ ಚುರುಕಾಗಿ ಓಡಿಬಂದು ಪಡೆದ ಕ್ಯಾಚ್‌ಗೆ ದೇವದತ್ತ ಔಟಾದರು.



ಅರ್ಧಶತಕ ಸಂಭ್ರಮದಲ್ಲಿ ಮಿಚೆಲ್ ಮಾರ್ಷ್ ಮತ್ತು ಡೇವಿಡ್ ವಾರ್ನರ್ –ಪಿಟಿಐ

ಜಡೇಜಗೆ ಗಾಯ; ಅಲಭ್ಯ

ನವದೆಹಲಿ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರ ರವೀಂದ್ರ ಜಡೇಜ ಗಾಯಗೊಂಡಿದ್ದಾರೆ. ಐಪಿಎಲ್‌ನಲ್ಲಿ ಇನ್ನುಳಿದಿರುವ ಪಂದ್ಯಗಳಲ್ಲಿ ಅವರು ಕಣಕ್ಕಿಳಿಯುವುದಿಲ್ಲ.

‘ಪಕ್ಕೆಲುಬಿನ ಗಾಯದಿಂದ ಜಡೇಜ ಬಳಲುತ್ತಿದ್ದಾರೆ. ಆದ್ದರಿಂದ ಐಪಿಎಲ್ ಗುಂಪು ಹಂತದಲ್ಲಿ ಉಳಿದಿರುವ ಇನ್ನೆರಡು ಪಂದ್ಯಗಳಲ್ಲಿ ಅವರು ಆಡುವುದಿಲ್ಲ’ ಎಂದು ಚೆನ್ನೈ ತಂಡದ ಸಿಇಒ ಕಾಶಿ ವಿಶ್ವನಾಥನ್ ತಿಳಿಸಿದ್ದಾರೆ.

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 6ಕ್ಕೆ 160 (20 ಓವರ್)

ಯಶಸ್ವಿ ಸಿ ಲಲಿತ್ ಬಿ ಮಾರ್ಷ್ 19 (19ಎ, 4X1, 6X1), ಬಟ್ಲರ್ ಸಿ ಶಾರ್ದೂಲ್ ಬಿ ಸಕಾರಿಯಾ 7 (11ಎ, 4X1), ಅಶ್ವಿನ್ ಸಿ ವಾರ್ನರ್ ಬಿ ಮಾರ್ಷ್ 50 (38ಎ, 4X4, 6X2), ದೇವದತ್ತ ಸಿ ನಾಗರಕೋಟಿ (ಬದಲಿ) ಬಿ ನಾರ್ಕಿಯಾ 48 (30ಎ, 4X6, 6X2), ಸ್ಯಾಮ್ಸನ್ ಸಿ ಶಾರ್ದೂಲ್ ಬಿ ನಾರ್ಕಿಯಾ 6 (4ಎ, 4X1), ಪರಾಗ್ ಸಿ ಪೊವೆಲ್ ಬಿ ಸಕಾರಿಯಾ 9 (5ಎ, 6X1), ಡಸೆನ್ ಔಟಾಗದೆ 12 (10ಎ, 4X1), ಬೌಲ್ಟ್ ಔಟಾಗದೆ 3 (3ಎ)

ಇತರೆ (ಬೈ 1, ವೈಡ್ 5) 6

ವಿಕೆಟ್ ಪತನ: 1-11 (ಜೋಸ್ ಬಟ್ಲರ್, 2.5), 2-54 (ಯಶಸ್ವಿ ಜೈಸ್ವಾಲ್, 8.1), 3-107 (ರವಿಚಂದ್ರನ್ ಅಶ್ವಿನ್, 14.1), 4-125 (ಸಂಜು ಸ್ಯಾಮ್ಸನ್, 16.1), 5-142 (ರಿಯಾನ್ ಪರಾಗ್, 17.3), 6-146 (ದೇವದತ್ತ ಪಡಿಕ್ಕಲ್, 18.1)

ಬೌಲಿಂಗ್: ಚೇತನ್ ಸಕಾರಿಯಾ 4-0-23-2, ಆ್ಯನ್ರಿಚ್ ನಾರ್ಕಿಯಾ 4-0-39-2, ಶಾರ್ದೂಲ್ ಠಾಕೂರ್ 4-0-27-0, ಅಕ್ಷರ್ ಪಟೇಲ್ 2-0-25-0, ಮಿಚೆಲ್ ಮಾರ್ಷ್ 3-0-25-2, ಕುಲದೀಪ್ ಯಾದವ್ 3-0-20-0

ಡೆಲ್ಲಿ ಕ್ಯಾಪಿಟಲ್ಸ್ 2ಕ್ಕೆ 161 (18.1 ಓವರ್)

ಭರತ್ ಸಿ ಸ್ಯಾಮ್ಸನ್ ಬಿ ಬೌಲ್ಟ್ 0 (2ಎ), ವಾರ್ನರ್ ಔಟಾಗದೆ 52 (41ಎ, 4X5, 6X1), ಮಾರ್ಷ್ ಸಿ ಸೇನ್ ಬಿ ಚಾಹಲ್ 89 (62ಎ, 4X5, 6X7), ರಿಷಭ್ ಔಟಾಗದೆ 13 (4ಎ, 6X2)

ಇತರೆ (ಲೆಗ್ ಬೈ 2, ವೈಡ್ 5) 7

ವಿಕೆಟ್ ಪತನ: 1-0 (ಶ್ರೀಕರ್ ಭರತ್, 0.2), 2-144 (ಮಾರ್ಷ್, 17.1)

ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-32-1, ಪ್ರಸಿದ್ಧ ಕೃಷ್ಣ 3-1-20-0, ರವಿಚಂದ್ರನ್ ಅಶ್ವಿನ್ 4-0-32-0, ಕುಲದೀಪ್ ಸೇನ್ 3.1-0-32-0, ಯಜುವೇಂದ್ರ ಚಾಹಲ್ 4-0-43-1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 8 ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	12	9	3	0	0	18	0.376
ಲಖನೌ	12	8	4	0	0	16	0.385
ರಾಜಸ್ಥಾನ	12	7	5	0	0	14	0.228
ಬೆಂಗಳೂರು	12	7	5	0	0	14	-0.115
ಡೆಲ್ಲಿ	12	6	6	0	0	12	0.210
ಹೈದರಾಬಾದ್	11	5	6	0	0	10	-0.031
ಕೋಲ್ಕತ್ತ	12	5	7	0	0	10	-0.057
ಪಂಜಾಬ್	11	5	6	0	0	10	-0.231
ಚೆನ್ನೈ	11	4	7	0	0	8	0.028
ಮುಂಬೈ	11	2	9	0	0	4	-0.894

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	625
ರಾಹುಲ್	ಲಖನೌ	459
ವಾರ್ನರ್	ಡೆಲ್ಲಿ	427

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	23
ಹಸರಂಗ	ಬೆಂಗಳೂರು	21
ಕುಲದೀಪ್	ಡೆಲ್ಲಿ	18

ಇಂದಿನ ಪಂದ್ಯ

ಚೆನ್ನೈ ಸೂಪರ್ ಕಿಂಗ್ಸ್– ಮುಂಬೈ ಇಂಡಿಯನ್ಸ್

ಸ್ಥಳ: ವಾಂಖೆಡೆ ಕ್ರೀಡಾಂಗಣ, ಮುಂಬೈ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ರಾತ್ರಿ 7.30

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಜೂನ್ 19ರಂದು ಬೆಂಗಳೂರಿನಲ್ಲಿ ಟಿ20 ಪಂದ್ಯ

ನವದೆಹಲಿ (ಪಿಟಿಐ) ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಟಿ20 ಕ್ರಿಕೆಟ್ ಸರಣಿಯ ಕೊನೆಯ ಪಂದ್ಯವು ಬೆಂಗಳೂರಿನಲ್ಲಿ ಜೂನ್ 19ರಂದು ನಡೆಯಲಿವೆ.

ಐದು ಪಂದ್ಯಗಳ ಸರಣಿ ಇದಾಗಿದೆ. ದೆಹಲಿ(ಜೂ 9), ಕಟಕ್ (ಜೂ 12), ವಿಶಾಖಪಟ್ಟಣ (ಜೂ 14) ಮತ್ತು ರಾಜ್‌ಕೋಟ್ (ಜೂ 17) ನಗರಗಳಲ್ಲಿ ಪಂದ್ಯಗಳು ನಡೆಯಲಿವೆ. 19ರಂದು ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಕೊಹ್ಲಿಗೆ ವಿಶ್ರಾಂತಿ: ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸುತ್ತಿರುವ ವಿರಾಟ್ ಕೊಹ್ಲಿ ಅವರಿಗೆ ಮುಂಬರುವ ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಯಿಂದ ವಿಶ್ರಾಂತಿ ನೀಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಆಯ್ಕೆ ಸಮಿತಿಯು ಚಿಂತನೆ ನಡೆಸಿದೆ.

16ರಿಂದ ಬೆಂಗಳೂರಿನಲ್ಲಿ ಮಿನಿ ಒಲಿಂಪಿಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಎರಡನೇ ಮಿನಿ ಒಲಿಂಪಿಕ್ಸ್ ಇದೇ 16 ರಿಂದ 22ರವರೆಗೆ ಬೆಂಗಳೂರಿನಲ್ಲಿ ಆಯೋಜನೆಯಾಗಲಿದೆ.

ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಜಂಟಿಯಾಗಿ ಈ ಕೂಟವನ್ನು ಆಯೋಜಿಸಲಿವೆ. 14 ವರ್ಷದೊಳಗಿನವರು 21 ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ.

‘ಭವಿಷ್ಯದ ಕ್ರೀಡಾಪ್ರತಿಭೆಗಳನ್ನು ಬೆಳೆಸುವ ನಿಟ್ಟಿನಲ್ಲಿ ಈ ಕೂಟವು ಬಹಳಷ್ಟು ನೆರವಾಗಲಿದೆ. ಎರಡನೇ ಬಾರಿ ರಾಜ್ಯದಲ್ಲಿ ಈ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ’ಎಂದು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಈ ಬಾರಿ ಐದು ಸಾವಿರ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆ ಇದೆ. ರಾಜ್ಯ ಸರ್ಕಾರವು ಕ್ರೀಡೆಯ ಬೆಳವಣಿಗೆಗೆ ಬಹಳಷ್ಟು ಉತ್ತಮ ಯೋಜನೆಗಳನ್ನು ರೂಪಿಸಿದೆ. ₹ 504 ಕೋಟಿ ಅನುದಾನವನ್ನು ಮೀಸಲಿಟ್ಟಿದೆ. ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದರು.

ಮಿನಿ ಒಲಿಂಪಿಕ್ ಕೂಟದಲ್ಲಿ ಅಥ್ಲೆಟಿಕ್ಸ್, ಆರ್ಚರಿ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹ್ಯಾಂಡ್‌ಬಾಲ್, ಹಾಕಿ, ಜುಡೊ, ಕೊಕ್ಕೊ, ಟೆನಿಸ್, ನೆಟ್ ಬಾಲ್, ರೈಫಲ್ ಶೂಟಿಂಗ್, ಈಜು, ಟೇಬಲ್ ಟೆನಿಸ್, ಟೆಕ್ವಾಂಡೊ, ವೇಟ್‌ಲಿಫ್ಟಿಂಗ್ ನಡೆಯಲಿವೆ.

ಕಂಠೀರವ, ವಿದ್ಯಾನಗರದಲ್ಲಿ ಕ್ರೀಡಾಶಾಲೆಯ ಮೈದಾನ, ಭಾರತ ಕ್ರೀಡಾ ಪ್ರಾಧಿಕಾರದ ಶೂಟಿಂಗ್ ರೇಂಜ್ , ರಾಜ್ಯ ಫುಟ್‌ಬಾಲ್ ಸಂಸ್ಥೆ ಕ್ರೀಡಾಂಗಣ, ಹೂಡಿ ಗೋಪಾಲನ್ ಸ್ಪೋರ್ಟ್ಸ್ ಸೆಂಟರ್, ಬಸವನಗುಡಿ ಈಜು ಕೇಂದ್ರ ಮತ್ತು ಶಾಂತಿನಗದ ಹಾಕಿ ಕ್ರೀಡಾಂಗಣದಲ್ಲಿ ವಿವಿಧ ಸ್ಪರ್ಧೆಗಳು ನಡೆಯಲಿವೆ.

‘16ರಂದು ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಕೂಟವನ್ನು ಉದ್ಘಾಟಿಸುವರು. ಕ್ರೀಡಾ ಸಚಿವ ನಾರಾಯಣ ಗೌಡ ಹಾಜರಿರುವರು. 22ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಪ್ರಾಥ ಮಿಕ, ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹಾಜರಿ ರುವರು’ ಎಂದು ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಒಎ ಮಹಾ ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜು ಮತ್ತಿತರರು ಹಾಜರಿದ್ದರು.

ಆರ್ಚರಿ: ಭಾರತಕ್ಕೆ ಎಂಟು ಚಿನ್ನ

ಸುಲೇಮಾನಿಯಾ, ಇರಾಕ್ (ಪಿಟಿಐ): ಭಾರತದ ಉದಯೋನ್ಮುಖ ಆರ್ಚರಿಪಟುಗಳು ಏಷ್ಯಾ ಕಪ್ ಸ್ಟೇಜ್ 2 ಆರ್ಚರಿ ಸ್ಪರ್ಧೆಯಲ್ಲಿ ಒಟ್ಟು ಎಂಟು ಚಿನ್ನದ ಪದಕಗಳನ್ನು ಜಯಿಸಿದರು. ನಾಲ್ಕು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳು ಭಾರತದ ಪಾಲಾದವು.

ಸ್ಪರ್ಧೆಯ ಕೊನೆಯ ದಿನವಾದ ಬುಧವಾರ ಭಾರತ ಮಹಿಳಾ ರಿಕರ್ವ್ ತಂಡವು ಮೊದಲ ಚಿನ್ನ ಗೆದ್ದಿತು. ಭಜನ್ ಕೌರ್, ಅವನಿ ಮತ್ತು ಲಕ್ಷ್ಮೀ ಹೆಮಬ್ರಮ್ ಅವರಿದ್ದ ತಂಡವು ಅಖ್ತರ್ ನಸ್ರೀನ್, ದಿಯಾ ಸಿದ್ಧೀಕಿ ಮತ್ತು ಬ್ಯೂಟಿ ರೇ ಅವರಿದ್ದ ಬಾಂಗ್ಲಾದೇಶ ವಿರುದ್ಧ ಜಯಿಸಿತು.

ಪುರುಷರ ರಿಕರ್ವ್ ತಂಡವು 5-1ರಿಂದ ಬಾಂಗ್ಲಾ ಎದುರು ಜಯಿಸಿತು. ಮೃಣಾಲ್ ಚೌಹಾಣ್ ಮತ್ತು ಜುಯೆಲ್ ಸರಕಾರ್ ಜೋಡಿಯು ಚಿನ್ನದ ಪದಕ ಜಯಿಸಿತು. ಬುಧವಾರ ತಂಡವು ಒಟ್ಟು ಐದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಜಯಿಸಿತು.

‘ಪರಿಸರಸ್ನೇಹಿ ಸ್ಪರ್ಧೆಗೆ ಆದ್ಯತೆ’

15ರಂದು ಟಿಸಿಎಸ್ ವಿಶ್ವ 10ಕೆ: ಮಾರ್ಗನಕ್ಷೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಟಿಸಿಎಸ್ ಬೆಂಗಳೂರು ವಿಶ್ವ 10ಕೆಯನ್ನು ಪರಿಸರ ಸ್ನೇಹಿಯಾಗಿ ಆಯೋಜಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸ್ಪರ್ಧೆಯ ಪ್ರಾಯೋಜಕ ಸಂಸ್ಥೆ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ತಿಳಿಸಿದೆ.

ಸ್ಪರ್ಧೆಯ ಸಿದ್ಧತೆಗಳ ಕುರಿತು ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್‌ನ ಜಂಟಿ ವ್ಯವಸ್ಥಾಪನಾ ನಿರ್ದೇಶಕ ವಿವೇಕ್ ಸಿಂಗ್ ಈ ವಿಷಯ ತಿಳಿಸಿದರು.

‘ಬಯೋಗ್ಯಾಸ್ ನೆರವಿನಿಂದ ತ್ಯಾಜ್ಯದ ಸಂಪೂರ್ಣ ಮರುಬಳಕೆ, ಸೀಮಿತ ಪ್ಲಾಸ್ಟಿಕ್ ಬಳಕೆ ಇರಲಿದೆ. ಬಿಬಿಎಂಪಿ ನೆರವಿನೊಂದಿಗೆ ಹಸಿರು ದಳದ ಕಾರ್ಯಕರ್ತರು ತ್ಯಾಜ್ಯ ನಿರ್ವಹಣೆಯ ಜವಾಬ್ದಾರಿ ತೆಗೆದುಕೊಳ್ಳಲಿದ್ದಾರೆ‘ ಎಂದು ಮಾಹಿತಿ ನೀಡಿದರು.

‘ಇದೇ ಭಾನುವಾರ ನಡೆಯಲಿರುವ ಸ್ಪರ್ಧೆಗೆ ಇದುವರೆಗೆ ಅಂದಾಜು 19,000 ಜನರು ನೋಂದಣಿ ಮಾಡಿಕೊಂಡಿದ್ದಾರೆ‘ ಎಂದು ಅವರು ಹೇಳಿದರು.

ಸುಸಜ್ಜಿತ ವೈದ್ಯಕೀಯ ಸೇವೆ: ‘ಎರಡು ವರ್ಷಗಳ ನಂತರ ನಡೆಯುತ್ತಿರುವ ಸ್ಪರ್ಧೆಗೆ 200 ವೃತ್ತಿಪರ ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮ ಕೈಗೊಳ್ಳಲಾಗುವುದು‘ ಎಂದು ಸ್ಪರ್ಧೆಯ ವೈದ್ಯಕೀಯ ಪಾಲುದಾರ ಆಗಿರುವ ಫೋರ್ಟಿಸ್ ಆಸ್ಪತ್ರೆಯ ಮುಖ್ಯ ಹೃದ್ರೋಗ ತಜ್ಞ ವಿವೇಕ್ ಜವಳಿ ಹೇಳಿದರು.

10ಕೆ ಎಲ್ಲ ಸ್ಪರ್ಧೆಗಳ ಮಾರ್ಗನಕ್ಷೆಯನ್ನು ಇದೇ ವೇಳೆ ಅನಾವರಣಗೊಳಿಸಲಾಯಿತು. ಪ್ರತಿವರ್ಷದಂತೆ ಕಂಠೀರವ ಕ್ರೀಡಾಂಗಣದಿಂದ ಸ್ಪರ್ಧೆಗಳು ಆರಂಭವಾಗಲಿವೆ. ಈ ಬಾರಿ ಸ್ವಲ್ಪ ಬದಲಾವಣೆ ಇರಲಿದೆ. ಕಾಮರಾಜ ರಸ್ತೆ ಬಳಿ ಮೆಟ್ರೊ ಕಾಮಗಾರಿ ನಡೆಯುತ್ತಿರುವುದರಿಂದ ಅಲ್ಲಿಯ ಮಾರ್ಗ ಕೈಬಿಡಲಾಗಿದ್ದು, ಅಲ್ಲಿ ದೂರವನ್ನು ಕಬ್ಬನ್ ಪಾರ್ಕ್ ಬಳಿ ಹೊಂದಿಸಲಾಗುವುದು ಎಂದು ಪ್ರೊಕ್ಯಾಮ್ ಸಂಸ್ಥೆಯ ಉಪಾಧ್ಯಕ್ಷ ಮಂದಾರ್ ಪಾಂಡ್ಯ ಮಾಹಿತಿ ನೀಡಿದರು.

ಮುಕ್ತ 10ಕೆ ಬೆಳಿಗ್ಗೆ 5.30ರಿಂದ, ವಿಶ್ವ ಮಹಿಳೆಯರ 10ಕೆ 7.10ರಿಂದ, ವಿಶ್ವ ಪುರುಷರ 10ಕೆ 8 ಗಂಟೆಯಿಂದ, ಹಿರಿಯ ನಾಗರಿಕರ ಮತ್ತು ಅಂಗವಿಕಲರ 8.05ರಿಂದ, ಮಜಾ ರನ್ 8.50ರಿಂದ ಆರಂಭವಾಗಲಿದೆ.



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ 10ಕೆ ಸ್ಪರ್ಧೆಯ ಮಾರ್ಗನಕ್ಷೆಯನ್ನು ಅನಾವರಣ ಮಾಡಲಾಯಿತು. ಈ ಸಂದರ್ಭದಲ್ಲಿ (ಎಡದಿಂದ) ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಸಂಸ್ಥೆಯ ಉಪಾಧ್ಯಕ್ಷ ಮಂದಾರ್ ಪಾಂಡ್ಯ, ಕಾರ್ಯಚಟುವಟಿಕೆಗಳ ನಿರ್ದೇಶಕ ಪಿ.ಎನ್. ಶಂಕರನ್, ಫೋರ್ಟಿಸ್ ಆಸ್ಪತ್ರೆಯ ಮುಖ್ಯ ಹೃದ್ರೋಗ ತಜ್ಞ ವಿವೇಕ್ ಜವಳಿ, ಕೆಎಎ ಕಾರ್ಯದರ್ಶಿ ಎ. ರಾಜವೇಲು ಮತ್ತು ಪ್ರೊಕ್ಯಾಮ್ ಜಂಟಿ ನಿರ್ದೇಶಕ ವಿವೇಕ್ ಸಿಂಗ್ ಇದ್ದರು

ಪ್ಯಾರಾ ಅಥ್ಲೀಟ್: ಬಡ್ತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಅರ್ಜುನ ಪ್ರಶಸ್ತಿ ಪುರಸ್ಕೃತ ಅಂಗವಿಕಲ ಅಥ್ಲೀಟ್ ಆಗಿರುವ ಉದ್ಯೋಗಿಯೊಬ್ಬರಿಗೆ ಬಡ್ತಿ ಸೇರಿದಂತೆ ಎಲ್ಲ ರೀತಿಯ ಸೌಲಭ್ಯ ಕಲ್ಪಿಸಲು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ಗೆ (ಬಿಇಎಲ್) ಹೈಕೋರ್ಟ್ ನಿರ್ದೇಶಿಸಿದೆ.

‘ಪ್ಯಾರಾ ಅಥ್ಲೀಟ್ ವೆಂಕಟರವಣಪ್ಪ ಅವರಿಗೆ ಹಣಕಾಸು ಸೌಲಭ್ಯ ಕಲ್ಪಿಸುವಂತೆ ಕೈಗಾರಿಕಾ ನ್ಯಾಯಮಂಡಳಿ ನೀಡಿದ್ದ ಆದೇಶವನ್ನು ರದ್ದುಪಡಿಸಬೇಕು’ ಎಂದು ಬಿಇಎಲ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುಜಾತ ಮತ್ತು ಶಿವಶಂಕರ ಅಮರಣ್ಣವರ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಆದೇಶ ನೀಡಿದೆ.

‘ವೆಂಕಟರವಣಪ್ಪ ಸೀಮಿತ ಆದಾಯದ ಮೂಲ ಹೊಂದಿರುವ ಅಂಗವಿಕಲರಾಗಿದ್ದು, 2022ರ ಜೂನ್‌ನಲ್ಲಿ ನಿವೃತ್ತರಾಗಲಿದ್ದಾರೆ. ಅವರಿಗೆ ಭವಿಷ್ಯದಲ್ಲಿ ಮತ್ತಷ್ಟು ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ ಕಡಿಮೆ ಇದೆ. ಆದ್ದರಿಂದ ಅವರಿಗೆ ಬಡ್ತಿ, ಹಣಕಾಸು ಸೌಲಭ್ಯ ಸೇರಿದಂತೆ ಉಳಿದ ಸೌಲಭ್ಯಗಳನ್ನು ಕಲ್ಪಿಸಬೇಕು’ ಎಂದು ನ್ಯಾಯಪೀಠ ಹೇಳಿದೆ.

ವೆಂಕಟರವಣಪ್ಪ ದೈಹಿಕ ಅಂಗವಿಕಲರ ಕೋಟಾದಡಿಯಲ್ಲಿ ಬಿಇಎಲ್‌ನಲ್ಲಿ ಡ್ರಾಫ್ಟ್ಸ್‌ಮನ್ ಡಬ್ಲ್ಯೂಜಿ-3 ಶ್ರೇಣಿಯ ಉದ್ಯೋಗಕ್ಕೆ 1998ರ ಜನವರಿ 1ರಂದು ಸೇರಿದ್ದರು. ಬ್ರಿಸ್ಬೇನ್, ಬ್ಯಾಂಕಾಕ್, ಫ್ರಾನ್ಸ್, ಬುಸಾನ್, ಗ್ರೀಸ್ ಮತ್ತು ಕ್ವಾಲಾಲಂಪುರ ಸೇರಿದಂತೆ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ಯಾರಾ-ಅಥ್ಲೆಟಿಕ್ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಅರ್ಜುನ, ಏಕಲವ್ಯ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಗಳಿಸಿದ್ದಾರೆ.